# 17

# “ವಿವೇಕದಲ್ಲಿ ನಡೆಯುವದು”

# (ಭಾಗ 1)

# (5:15-33)

ಎಫೆಸದ ಕೊನೆಯ ಪ್ರಮುಖ ಭಾಗದಲ್ಲಿ (5:15-6:20), ಉತ್ತಮ ಕ್ರಿಸ್ತೀಯ ಸಂಬಂಧವನ್ನು ಕಾದುಕೊಳ್ಳುವ ಮತ್ತು ಕೆಟ್ಟತನದ ವಿರುದ್ಧ ಯುದ್ಧಕ್ಕೆ ನಿಂತುಕೊಳ್ಳುವ ನಿರ್ದಿಷ್ಟ ಯೋಜನೆಗಳನ್ನು ಅಪೊಸ್ತಲನಾದ ಪೌಲನು ಮಂಡಿಸಿದ್ದಾನೆ. ಪತ್ರಿಕೆಯ ಮುಂದಿನ ಮತ್ತು ಅಂತಿಮ ಆಜ್ಞೆಯು 5:15ರಲ್ಲಿ ಕೊಡಲ್ಪಟ್ಟಿರುವ ನಿಶ್ಚಿತ ಮಾರ್ಗದಲ್ಲಿ “ನಡೆಯುವದು” ಆಗಿದೆ.

## ದೇವರ ಮೇಲೆ ಮತ್ತು ಇತರರ ಮೇಲೆ ಕೇಂದ್ರೀಕರಿಸಿ ಜಾಗರೂಕತೆಯಿಂದ ನಡೆಯುವದು (5:15-21)

### ನಿಮ್ಮ ಸಮಯವನ್ನು ಸದುಪಯೋಗಪಡಿಸಿಕೊಳ್ಳಿರಿ (5:15, 16)

**15ಆದಕಾರಣ ನೀವು ನಡಕೊಳ್ಳುವ ರೀತಿಯನ್ನು ಕುರಿತು ಚೆನ್ನಾಗಿ ನೋಡಿಕೊಳ್ಳಿರಿ. ಜ್ಞಾನವಿಲ್ಲದವರಾಗಿರದೆ ಜ್ಞಾನವಂತರಾಗಿರ್ರಿ. 16ಈ ದಿನಗಳು ಕೆಟ್ಟವುಗಳಾಗಿವೆ; ಆದದರಿಂದ ಕಾಲವನ್ನು ಸುಮ್ಮನೆ ಕಳಕೊಳ್ಳದೆ ಅದನ್ನು ಬೆಲೆಯುಳ್ಳದ್ದೆಂದು ಉಪಯೋಗಿಸಿಕೊಳ್ಳಿರಿ.**

**ವಚನಗಳು 15, 16.** ಎಫೆಸದವರಿಗೆ ಅವರ ನಡೆಯ ಬಗ್ಗೆ ಅಥವಾ ಯೋಗ್ಯವಾದ ಜೀವಿತ, “ಯೋಗ್ಯವಾದ ರೀತಿಯಲ್ಲಿ” ನಡೆಯುವದು ಅವರ ಕರೆಯುವಿಕೆ “ಪ್ರೀತಿ ಯಲ್ಲಿ” ನಡೆಯುವದು, ಮತ್ತು “ಬೆಳಕಿನ ಮಕ್ಕಳ” ಹಾಗೆ ನಡೆಯುವದರ, ಬಗ್ಗೆ ಮೊದಲ ಮೂರು ಉಪದೇಶಗಳು ಇರುವವು ಆಗಿವೆ. ನಾಲ್ಕನೆಯ ಉಪದೇಶವು **ನೀವು ನಡಕೊಳ್ಳುವ ರೀತಿಯನ್ನು ಕುರಿತು ಚೆನ್ನಾಗಿ ನೋಡಿಕೊಳ್ಳಿರಿ** ಎಂದಾಗಿದೆ. ಗ್ರೀಕ್ ವಿಧ್ಯರ್ಥದ ಭಾಷಾಂತರವು “ಇರು” (*blepete*) ಎಂದಾಗಿದೆ. ಪೌಲನು ಉಪಯೋಗಿಸಿದ ಕ್ರಿಯಾಪದವು “ನಿರಂತರವಾದ ಅಥವಾ ಪುನರಾವರ್ತನೆಯಾದ ಕ್ರಿಯೆಯನ್ನು” ಒಳಗೊಂಡಿದೆ.[1] ಇದರ ಅರ್ಥವು “ಮಾನಸಿಕವಾಗಿ ಪ್ರಬುದ್ಧಗೊಳಿಸುವದು, ಗಮನಿಸುವದು, ಕಾದುಕೊಳ್ಳುವದು, ಪರಿಗಣಿಸುವದು, ಆಲೋಚಿಸುವದು, ಕಾಳಜಿಯನ್ನು ತೆಗೆದುಕೊಳ್ಳುವ ರೀತಿಯಲ್ಲಿ ನೋಡುವದು, ಗಣನೆಗೆ ತೆಗೆದುಕೊಳ್ಳುವದು” ಎಂದಾಗಿದೆ.[2] “ಕಾಳಜೀಪೂರ್ವಕ” ಎಂಬುದು *akribōs*ದ ಭಾಷಾಂತರವಾಗಿದೆ ಮತ್ತು “ದೊಡ್ಡ ನೋವಿಗೆ ಅವಶ್ಯವಿರುವಂಥದ್ದು, ಕಾಳಜಿ, ಮತ್ತು ಸಾಧನೆ” ಎಂಥವುಗಳ ಜೊತೆ ಸಹಯೋಗ ಇದ್ದದ್ದು ಮತ್ತು “ನಿಖರವಾದ” ಮತ್ತು “ಸ್ಪಷ್ಟವಾದ” ಎಂಬುದಾಗಿದೆ.[3] ವಿಶ್ವಾಸಿಯು ದೇವರ ವಾಕ್ಯದ ಪರಿಮಿತಿಯೊಳಗೆ ನಡೆಯುವುದಕ್ಕಾಗಿ ಚೆನ್ನಾಗಿ ಲಕ್ಷವನ್ನು ಕೊಡಬೇಕಾಗಿದೆ. ಈ ಉಪದೇಶವು ಖಡಾಖಂಡಿತವಾಗಿದ್ದು “... ಧರ್ಮೋಪದೇಶವನ್ನೆಲ್ಲಾ ಕೈಕೊಂಡು ನಡೆಯುವುದರಲ್ಲಿ ಸ್ಥಿರಚಿತ್ತನಾಗಿರು ... ಅದನ್ನು ಬಿಟ್ಟು ಎಡಕಾದರೂ ಬಲಕ್ಕಾದರೂ ಹೋಗಬೇಡ” ಎಂದು

ಹೇಳುವಾಗ (ಯೆಹೋಶುವ 1:7). ಯೆಹೋಶುವನಿಗೆ ದೇವರಿಂದ ಕೊಡಲ್ಪಟ್ಟದ್ದು ಅವನ ಮಾತುಗಳಲ್ಲಿ ಕಂಡುಬರುತ್ತದೆ. "... ನನ್ನ ಮಾತುಗಳನ್ನು ಕೇಳಿ ಅವುಗಳಂತೆ ನಡೆಯುವವನು ಬಂಡೆಯ ಮೇಲೆ ಮನೆಯನ್ನು ಕಟ್ಟಿಕೊಂಡ ಬುದ್ಧಿಯುಳ್ಳ ಮನುಷ್ಯನನ್ನು ಹೋಲುವನು" (ಮತ್ತಾಯ 7:24) ಎಂದು ಯೇಸು ಹೇಳಿದ ಮಾತುಗಳು ಬುದ್ಧಿವಂತಿಕೆಯಿಂದ ಜೀವಿಸುವ ಸಂದರ್ಭದಲ್ಲಿ, ಅಪೋಸ್ತಲರ ಸೂಚನೆಯು ಅವರ ಮನಕ್ಕೆ ತರಲ್ಪಟ್ಟವು.

**ಜ್ಞಾನವಿಲ್ಲದವವರ** ಮೂರ್ಖತನವನ್ನು "ನೀವು ನಡಕೊಳ್ಳುವ ರೀತಿಯನ್ನು ಕುರಿತು ಚೆನ್ನಾಗಿ ನೋಡಿಕೊಳ್ಳಿರಿ" ಎನ್ನದವರನ್ನು ಅಲಕ್ಷಿಸಿರಿ ಮತ್ತು **ಸುಮ್ಮನೆ ಕಳಕೊಳ್ಳದೆ ಅದನ್ನು ಬೆಲೆಯುಳ್ಳದ್ದೆಂದು ಉಪಯೋಗಿಸಿಕೊಳ್ಳುವ** ಮೂಲಕ **ಜ್ಞಾನವಂತ** ಜನರು ನಡೆಯುವ ಹಾಗೆ ಇರಿ. ಗ್ರೀಕ್ ಪದವಾದ *exagorazomenoi* ಇದು ಒಂದು ರೀತಿಯ *exagorazō* ಆಗಿದ್ದು ಅದರ ಅರ್ಥವು "ಒಬ್ಬನ ಸಲುವಾಗಿ ಕೊಂಡುಕೊಳ್ಳುವದು"[4] ಮತ್ತು "ಜಾಣತನದ ಮತ್ತು ಒಳ್ಳೆಯದನ್ನು ಮಾಡುವದಕ್ಕಾಗಿನ ಪ್ರತಿಯೊಂದು ಅವಕಾಶವನ್ನು ಯೋಗ್ಯವಾಗಿ ಬಳಸುವದು" ಹೀಗೆ ಮಾಡುವದರಿಂದ ಈ ಕಾರ್ಯಗಳ ಮೂಲಕ ನಾವು ಹಣಕೊಟ್ಟು ಖರೀದಿಸಿಕೊಂಡಂತಾಗುವದು.[5]

ಸಮಯವನ್ನು ಯೋಗ್ಯವಾಗಿ ಬಳಸುವದಕ್ಕು ನೀಡಲಾದ ಪ್ರೇರಣೆಯು ಏನೆಂದರೆ ದುಷ್ಟ ಲೋಕವು "ವಾಯುಮಂಡಲದಲ್ಲಿ ಅಧಿಕಾರ ನಡೆಸುವ ಅಧಿಪತಿಗೆ ... ನಂಬಲೊಲ್ಲದವರನ್ನು ಅವಿಧೇಯತೆಗೆ ಪ್ರೇರೇಪಿಸುವ ಆತ್ಮನಿಗೆ ಅನುಸಾರವಾಗಿ ..." ಆತನ ಅಡಿಯಲ್ಲಿ ಇರುವುದನ್ನು ಎಂದು ಈ ಹಿಂದೆ, ಪೌಲನು ಸೂಚಿಸಿದ್ದಾನೆ (2:2). ಈ ಕೆಟ್ಟ ಲೋಕದಲ್ಲಿ, ಕ್ರೈಸ್ತರಾದಂಥ ನಾವು ದೇವರು ನಮ್ಮನ್ನು ಕರೆಯಲ್ಪಟ್ಟಂಥ ಜೀವಿತದಲ್ಲಿ ಜೀವಿಸಬೇಕು. "ಸತ್ಕಾರ್ಯಗಳನ್ನು ಮಾಡುವುದಕ್ಕಾಗಿಯೇ ಕ್ರಿಸ್ತ ಯೇಸುವಿನಲ್ಲಿ ಸೃಷ್ಟಿಸಲ್ಪಟ್ಟೆವು ನಾವು ಸತ್ಕಾರ್ಯಗಳನ್ನು ನಡೆಸುವವರಾಗಿ ಬದುಕಬೇಕೆಂದು ದೇವರು ನಮ್ಮನ್ನು ಮೊದಲಾಗಿ ನೇಮಿಸಿದನು" (2:10) ಅಂತೆಯೇ ಒಳ್ಳೆಯ ಕಾರ್ಯಗಳ ಮಾಡುವ ಪ್ರತಿಯೊಂದು ಅವಕಾಶವನ್ನು ನಾವು ತೆಗೆದುಕೊಳ್ಳಬೇಕು. ಸಮಯವು ಕೊಂಚವಾಗಿದೆ, ಒಳ್ಳೆಯದನ್ನು ಮಾಡುವ ಅವಕಾಶಗಳು ವಿಫಲವಾಗಿವೆ, ಮತ್ತು ಕೆಟ್ಟತನವು ತುಂಬಿಕೊಂಡಿದೆ; ಹೀಗಿರುವಾಗ ಕ್ರೈಸ್ತರು ಹೆಚ್ಚಾಗಿ ತಾವು ಏನಾಗಿದ್ದಾರೆ ಮತ್ತು ಯಾವುದಕ್ಕೆ ಎಷ್ಟುರಮಟ್ಟಿಗೆ ಆಗಬಲ್ಲರು ಎಂಬುದನ್ನು ಅರಿತುಕೊಳ್ಳಬೇಕಾಗಿದೆ.

ನಂತರ, ಜ್ಞಾನದಲ್ಲಿ ಕಾಳಜೀಪೂರ್ವಕವಾಗಿ ನಡೆಯಬೇಕು, ಕ್ರೈಸ್ತರು ದೇವರ ಚಿತ್ತವನ್ನು ಅರಿತುಕೊಳ್ಳಲೇಬೇಕು (5:17) ಮತ್ತು ಆತ್ಮನಿಂದ ತುಂಬಿರಬೇಕು (5:18) ಎಂಬುದನ್ನು ಪೌಲನು ತೋರಿಸಿದನು.

### "ದೇವರ ಚಿತ್ತವನ್ನು ಅರಿತುಕೊಳ್ಳುವದು" (5:17)

**17ಮತ್ತು ಬುದ್ಧಿಹೀನರಾಗಿ ನಡೆಯದೆ ಕರ್ತನ ಚಿತ್ತವೇನೆಂಬದನ್ನು ವಿಚಾರಿಸಿ ತಿಳಿದವರಾಗಿರ್ರಿ.**

**ವಚನ 17.** ಎಫೆಸದ ಕ್ರೈಸ್ತರು **ಕರ್ತನ ಚಿತ್ತವೇನೆಂಬುದನ್ನು ವಿಚಾರಿಸಿ ತಿಳಿದವರಾಗಿ** ಇದ್ದರು. ಒಬ್ಬ ವ್ಯಕ್ತಿಯು ಈ ಕೆಟ್ಟತನದ ಲೋಕಕ್ಕೆ ಒಳ್ಳೆಯದನ್ನು ಮಾಡಬೇಕೆಂಬ ತನ್ನ ಅವಕಾಶವನ್ನು ಅನುಕೂಲಕರವಾಗಿ ತೆಗೆದುಕೊಂಡಿದ್ದಾದರೆ, ಆತನು ಹಾಗೆ ಮಾಡಬೇಕೆಂದು ದೇವರು ಬಯಸುತ್ತಾನೆ ಎಂಬುದನ್ನು ತಿಳಿದಿರಲೇಬೇಕು. ಮೂರ್ಖರಾಗುವುದಕ್ಕಿಂತಲೂ ಜಾಣರಾಗಿರಬೇಕು, ಮತ್ತು ದೇವರ ಬೋಧನೆಯನ್ನು ಆತನು ತಿಳಿದಿರಬೇಕು. ಈ ಪತ್ರದಲ್ಲಿ ಪೌಲನು ಎಫೆಸದವರಿಗೆ ಅವರೊಂದಿಗೆ "ದೇವರ ಚಿತ್ತದ" ಉದ್ದೇಶವನ್ನು ವಿವರಿಸಿ ಬೋಧಿಸಿದ್ದಾನೆ. ಕೊಲಸ್ಸೆಯರಿಗಾಗಿ ಪೌಲನ ಪ್ರಾರ್ಥನೆಯು ಅದು ಅವರು "ಸಕಲ ಆತ್ಮೀಕ

ಜ್ಞಾನವನ್ನು ಗ್ರಹಿಕೆಯನ್ನು ಹೊಂದಿ ಕರ್ತನ ಚಿತ್ತದ ವಿಷಯವಾದ ತಿಳುವಳಿಕೆಯನ್ನು" ತುಂಬಿಕೊಂಡಿರಬೇಕೆಂಬುದೇ ಆಗಿತ್ತು (ಕೊಲಸ್ಸೆ 1:9). ಕೊಲಸ್ಸೆಯವರು ಅದರಂತೆಯೇ ಎಫೆಸದವರೂ, ದೇವರ ಸತ್ಯವನ್ನು ತಿಳಿಯಬೇಕು, ಅದನ್ನು ಅರಿತುಕೊಳ್ಳಬೇಕು, ಮತ್ತು ತಮ್ಮ ದಿನನಿತ್ಯದ ಜೀವಿತದಲ್ಲಿ ಅದನ್ನು ಯೋಗ್ಯವಾಗಿ ಅಳವಡಿಸಿಕೊಳ್ಳುವ ವಿವೇಕವನ್ನು ಹೊಂದಬೇಕು ಎಂದು ಆತನು ಬಯಸುವವನಾಗಿದ್ದನು.

ದೇವವಾಕ್ಯವನ್ನು ಕೂಲಂಕುಷವಾಗಿ ಅಧ್ಯಯನ ಮಾಡುವುದರಿಂದ ಕರ್ತನು ತಮ್ಮಿಂದ ಏನನ್ನು ಅಪೇಕ್ಷಿಸುತ್ತಾನೆಂದು ಇಂದು ಕ್ರೈಸ್ತರು ಕಂಡುಕೊಳ್ಳುವವರಾಗಿದ್ದಾರೆ. ವಿವೇಕದಲ್ಲಿ ಜಾಗರೂಕತೆಯಿಂದ ನಡೆಯುವದು ಯಾವಾಗಲೂ ದೇವವಾಕ್ಯವನ್ನು ತಿಳಿದುಕೊಳ್ಳುವದು, ಅನ್ವಯಿಸಿಕೊಳ್ಳುವದು, ಮತ್ತು ಅದರಲ್ಲಿ ಜೀವಿಸುವದು ಆಗಿದೆ.

## "ಆತ್ಮನಿಂದ ತುಂಬಿಕೊಂಡಿರುವದು" (5:18-21)

**18ಮದ್ಯಪಾನ ಮಾಡಿ ಮತ್ತರಾಗಬೇಡಿರಿ; ಅದರಿಂದ ಪಟಿಂಗತನವು ಹುಟ್ಟುತ್ತದೆ.**
**19ಆದರೆ ಪವಿತ್ರಾತ್ಮಭರಿತರಾಗಿದ್ದು ಕೀರ್ತನೆಗಳಿಂದಲೂ ಆತ್ಮಸಂಬಂಧವಾದ ಪದಗಳಿಂದಲೂ ಒಬ್ಬರಿಗೊಬ್ಬರು ಮಾತಾಡಿಕೊಳ್ಳುತ್ತಾ ನಿಮ್ಮ ಹೃದಯಗಳಲ್ಲಿ ಕರ್ತನಿಗೆ ಗಾನಮಾಡುತ್ತಾ ಕೀರ್ತನೆ ಹಾಡುತ್ತಾ 20ಯಾವಾಗಲೂ ಎಲ್ಲಾ ಕಾರ್ಯಗಳಿಗೋಸ್ಕರ ನಮ್ಮ ಕರ್ತನಾದ ಯೇಸು ಕ್ರಿಸ್ತನ ಹೆಸರಿನಲ್ಲಿ ತಂದೆಯಾದ ದೇವರಿಗೆ ಸ್ತೋತ್ರ ಮಾಡುತ್ತಾ 21ಕ್ರಿಸ್ತನಿಗೆ ಭಯಪಡುವವರಾಗಿದ್ದು ಒಬ್ಬರಿಗೊಬ್ಬರು ವಿನಯವುಳ್ಳವರಾಗಿ ನಡೆದುಕೊಳ್ಳಿರಿ.**

ಮುಂದೆ ಪೌಲನು "ಆತ್ಮನಿಂದ ತುಂಬಿಕೊಂಡಿರುವದಕ್ಕೆ" ಖಂಡಿತವಾಗಿ ತಿಳಿಸುವವನಾಗಿದ್ದಾನೆ. 5:19-21ರಲ್ಲಿ ಆತನು ಹಾಗೆ ಮಾಡುವುದರ ಮೂಲಕ ಮೂರು ಕೃದಂತಗಳನ್ನು ಬಳಸುವ ಕೆಲ ಫಲಗಳನ್ನು ತೋರಿಸಿದನು. ಪ್ರೌಢತೆಯನ್ನು ಹೊಂದುತ್ತಿರುವ ಕ್ರೈಸ್ತರು ಕರ್ತನನ್ನು ನಂಬಿಕೆಯಲ್ಲಿ ಸ್ತುತಿಸುವಲ್ಲಿ ಹಾಡುಗಳಲ್ಲಿ, ಎಲ್ಲಾ ಸಂಗತಿಗಳಲ್ಲಿ ವಂದನೆಯನ್ನು ಸಲ್ಲಿಸುವಲ್ಲಿ, ಮತ್ತು ಒಬ್ಬರಿಗೊಬ್ಬರು ಸಹೋದರತೆಯನ್ನು ತೋರಿಸುವಲ್ಲಿ ಮತ್ತು ಸಹಕಾರ ತೋರಿಸುವಲ್ಲಿ ತಮ್ಮನ್ನು ಒಪ್ಪಿಸಿಕೊಳ್ಳುವಲ್ಲಿ ಎಲ್ಲವುಗಳಲ್ಲಿ ಇರುವವರಾಗಿದ್ದಾರೆ.

**ವಚನ 18.** ವಿವೇಕದಲ್ಲಿ ಜಾಣತನದಿಂದ ನಡೆಯುವಲ್ಲಿ ಪವಿತ್ರಾತ್ಮಭರಿತರಾಗಿರುವದು ಒಳಗೊಂಡಿರುತ್ತದೆ. **ಮದ್ಯಪಾನ ಮಾಡಿ ಮತ್ತರಾಗಬೇಡಿರಿ** ಎಂದು ಪೌಲನು ನಿಶೇದಾರ್ಥಕದಿಂದ ಪ್ರಾರಂಭಿಸುತ್ತಾನೆ. ಮಧ್ಯಪಾನವು ಮೂರ್ಖತನ ಜೀವಿತದ ಶೈಲಿಗೆ ಹೊಂದಿಕೊಂಡಿರುವದು ಆಗಿದೆ ಹೊರತಾಗಿ ಜಾಣತನದ ಜೀವಿತಕ್ಕೆ ಅಲ್ಲ. ಕತ್ತಲೆಗೆ ಸಂಬಧಿಸಿದವರು ಮಧ್ಯಪಾನಿಗಳಾಗಿದ್ದಾಗ, ಬೆಳಕಿಗೆ ಸಂಬಂಧಿಸಿದವರು ಶಾಂತಚಿತ್ತರಾಗರಲೂ ಬಹುದು (ನೋಡಿರಿ ರೋಮಾಪುರ 13:12, 13; 1 ಥೆಸಲೋನಿಕ 5:6-8). ಮಧ್ಯಪಾನಿಗಳನ್ನು ಪೌಲನು **ಪಟಿಂಗ** (*asōtia*) ಎಂದು ಖಂಡಿತವಾಗಿ ಹೇಳುತ್ತಾನೆ. ಈ ಗ್ರೀಕ್ ಪದವು (*sōizō,* "ರಕ್ಷಿಸಲಸು," "ಸಂರಕ್ಷಿಸುವದು")[6] ಎಂಬುದಕ್ಕೆ ಸಂಬಂಧಿಸಿದೆ; ಆದರೆ ಪೂರ್ವಪದವೇ ಪ್ರಧಾನವಾದದ್ದು. *Asōtia*ಯು "ದುಂದುಗಾರಿಕತನ" ಅಥವಾ "ಅಜಾಗರೂಕತೆಯ ವಶವಾಗುವಿಕೆ" ಎಂಬ ವಿಚಾರವನ್ನು ಕೊಡುವುದಾಗಿದೆ. ಕುಡಿಕತನದಲ್ಲಿ ಯಾವ ಸದ್ಗುಣಗಳು ಇಲ್ಲ, ಆದರೆ ಕೇವಲ "ದುರ್ಮಾಗಿತನ, ವಿಷಯಲಂಪುಟತೆ"[7] ಇದು ಮಿತಿಮೀರಿದ, ಹಾಳಾದ ಜೀವಿತವು ಇದೆ ಎಂದು ಪೌಲನು ಹೇಳುತ್ತಾನೆ. ಒಬ್ಬ ವ್ಯಕ್ತಿಯು ತನ್ನ ಮನದಲ್ಲಿ ಯಾವುದು ಪ್ರಮುಖ ಸ್ಥಾನದಲ್ಲಿರುತ್ತದೋ ಅದರಿಂದ ನಿಯಂತ್ರಿಸಲ್ಪಡುತ್ತಾನೆ. ಮಧ್ಯವನ್ನು ಸೇವಿಸುವಲ್ಲಿ ಆತನು ಕೇಂದ್ರೀಕರಿಸಿದ್ದಾದರೆ, ಆಗ ಆತನು ರಕ್ಷಣೆ ಪಡದೆ ಇರುವಂಥ ಜೀವಿತವನ್ನು ಜೀವಿಸುತ್ತಿದ್ದಾನೆ ಎಂದಾಗಿದೆ. ಇದಕ್ಕೆ ವ್ಯತ್ಯಾಸವಾಗಿ, ಒಬ್ಬನು "ಆತ್ಮನಿಂದ ತುಂಬಿದ್ದಾದರೆ" ಆತನು ದೈವೀಯ

ಜೀವಿತವನ್ನು ನಡೆಸುತ್ತಿದ್ದಾನೆ ಎಂದರ್ಥ.

"ಭರಿತವಾಗು" (*plēroō*) ಎಂಬುದು ದೊರಕುವಂಥ ಎಲ್ಲಾ ಕ್ಷೇತ್ರವನ್ನು ಎಂಬರ್ಥ ಕೊಡುವಂತಿದ್ದು, "ಮೀನುಗಳು ತುಂಬಿದ ಬಲೆ (ಮತ್ತಾಯ 13:48), ಸುಗಂಧವಾಸನೆ ಹರಡಿದ ಮನೆ (ಯೋಹಾನ 12:3); ಕೊಳ್ಳಷ್ಟು ತುಂಬಿಕೊಂಡಿರುವದು (ಲೂಕ 3:5) ಎಂದಾಗಿದೆ."[8] ಜಾಣತನದಿಂದ ಅಥವಾ ಮೂರ್ಖತನದಿಂದ, ಕಾಳಜಿಪೂರಕವಾಗಿ, ಅಥವಾ ದುಂದುಗಾರತನದಿಂದ ಜೀವಿಸುವದರ ಮಧ್ಯದ ಭಿನ್ನತೆಯು "ಆತ್ಮನಿಂದ ತುಂಬಿರುವ" ಅನುಸಂಧಾನ ಎಂಬುದರಲ್ಲಿ ಸಿಕ್ಕುವುದಾಗಿದೆ.

"ಆತ್ಮನಿಂದ ತುಂಬಿರುವ" ಎಂಬುದು "ಮಧ್ಯವನ್ನು ಕುಡಿಯುವವ" ಎಂಬುದರಿಂದ ವ್ಯತ್ಯಾಸವಾಗಿದೆ. ಯಾವುದು ಒಬ್ಬ ವ್ಯಕ್ತಿಯ ವಿಚಾರವನ್ನು ಆಕ್ರಮಿಸಿ ಆತನ ಕೃತ್ಯಗಳನ್ನು ನಿಯಂತ್ರಿಸುತ್ತದೋ ಅದು ಕೆಟ್ಟದ್ದೂ ಆಗಿರಬಹುದು ಅಥವಾ ಒಳ್ಳೆಯದೂ ಆಗಿರಬಹುದು. ಕ್ರೈಸ್ತರು "ಆತ್ಮನಿಂದ ತುಂಬಿರುವುದಕ್ಕೆ" ತಿರುಗಿ ತೆರೆದಿರುವಂಥವರು ಆಗಿರಬೇಕು. ಆತ್ಮನ ಸ್ವಭಾವದಿಂದ ತುಂಬಿರುವದು "ಪರಿಶುದ್ಧಾತ್ಮನ ವರದಿಂದ" ಇರುವುದಕ್ಕೆ ವ್ಯತ್ಯಾಸವಾಗಿದ್ದು ಅದು ದೀಕ್ಷಾಸ್ನಾನದಲ್ಲಿ ಸಿಕ್ಕುವುದಾಗಿದೆ (ಅಪೊಸ್ತಲರ ಕೃತ್ಯಗಳು 2:38). ಆತ್ಮನ ವರವು ಆತ್ಮನು ತಾನೇ ಆಗಿದ್ದು, ವಿಶ್ವಾಸಿಗಳಿಗೆ ಕೊಡಲ್ಪಟ್ಟವನೂ ಮತ್ತು ವಾಸಿಸುವವನೂ ಆಗಿದ್ದಾನೆ (ಅಪೊಸ್ತಲರ ಕೃತ್ಯಗಳು 5:32; 1 ಕೊರಿಂಥ 6:19). ಈ ವರವು, ಆತ್ಮನ ಮೂಲಕ ಶಕ್ತಿಯನ್ನು ಆಂತರ್ಯದ ವ್ಯಕ್ತಿಯನ್ನು ಬಲಪಡಿಸುವವ ಉದ್ದೇಶಕೋಸ್ಕರ ಎಂದು ಪೌಲನು ಈ ಹಿಂದೆ ಎಫೆಸದವರಿಗೆ ಹೇಳಿದಂತೆ ಇರುವುದಾಗಿದೆ (3:16). ಕ್ರೈಸ್ತನ ಜೀವಿತದಲ್ಲಿ ಆತ್ಮನ ಶಕ್ತಿಯು ಆತ್ಮನ ಇಚ್ಛೆಯ ಮೂಲಕ ಮತ್ತು ದೇವರ ನಿಯಂತ್ರಣದಲ್ಲಿರುವ ಆತನಿಗೆ ಸಹಾಯಿಸುತ್ತಿರುವ ಆತ್ಮನಲ್ಲಿಯ ಆತನ ವಿಶ್ವಾಸದಿಂದ ಕ್ರಿಯಾತ್ಮಕವಾಗಿದೆ. ಕುಡುಕನು ಮಧ್ಯದ ನಿಯಂತ್ರಣದಿಂದ ತನ್ನನ್ನು ಒಪ್ಪಿಸಿಕೊಡುವಂತೆ, ಒಬ್ಬ ಕ್ರೈಸ್ತನು ತನ್ನ ಜ್ಞಾನವನ್ನು ತನ್ನ ಭಾವನೆಗಳನ್ನು, ಆಶೆಗಳನ್ನು ದೇವರ ಚಿತ್ತಕ್ಕೆ ಒಪ್ಪಿಸುತ್ತಾನೆ. ಆಗ ದೇವರ ನಿಯಂತ್ರಣದಡಿಯಲ್ಲಿರಲು ಆತ್ಮನು ತಾನೇ ಆತನಿಗೆ ಸಹಾಯಮಾಡುತ್ತಾನೆ.

**ವಚನ 19.** ಕ್ರೈಸ್ತನು ಆತ್ಮಭರಿತನಾಗಿರುವುದಕ್ಕೆ ಸಾಕ್ಷಿಯು ಅದ್ಭುತಕಾರ್ಯಗಳನ್ನು ಮಾಡುವುದರಲ್ಲಿ ಇರುವುದಿಲ್ಲ, ಆದರೆ ಆತನು ಬಯಸಿದ ಆಯ್ಕೆಗಳಲ್ಲಿ ಇರುತ್ತದೆ. ಮೊದಲನೆಯದಾಗಿ, ''ಆತ್ಮದಿಂದ ಭರಿತ''ರಾಗಿರುವವರು ಆರಾಧಿಸುವಂತಹ ಜನರಾಗಿದ್ದಾರೆ. ನಂತರ ಸಭೆಗಳಲ್ಲಿ ಹಾಡುವದು ಸೂಚಿಸಲ್ಪಡುವಂತದ್ದು ಆಗಿದ್ದು, ಆದ್ದರಿಂದ ಪೌಲನು **ಒಬ್ಬರಿಗೊಬ್ಬರು ಮಾತಾಡಿಕೊಳ್ಳುತ್ತಾ** ಎಂದು ಹೇಳುತ್ತಾನೆ. ಇದೊಂದು ಏಕಾಂತವಾದ ಆರಾಧನೆಯಲ್ಲ, ಅದರೆ ಇತರರೊಡನೆ ಮಾಡುವಂಥದ್ದು ಆಗಿದೆ.

ಹಾಡುವದು **ಕೀರ್ತನೆಗಳಿಂದಲೂ** (*psalmos*), **ಸಂಗೀತಗಳಿಂದಲೂ** (*humnos*), **ಆತ್ಮಸಂಬಂಧವಾದ ಪದಗಳಿಂದಲೂ** (*ōidē*) ಕೂಡಿರುವಂಥದ್ದಾಗಿದೆ. ಇದರ ಉದ್ದೇಶವು ಒಬ್ಬರಿಗೊಬ್ಬರು ಬೋಧಿ ಸುವದು, ನೀತಿಬೋಧನೆ ಮಾಡುವದು ಮತ್ತು ಉಪದೇಶ ಮಾಡುವದು ಆಗಿದೆ. (ನೋಡಿರಿ ಕೊಲಸ್ಸೆ 3:16ರಲ್ಲಿ ಪೌಲನು "ಒಬ್ಬರಿಗೊಬ್ಬರು ಬೋಧಿಸಿರಿ ಮತ್ತು ಬುದ್ಧಿ ಹೇಳಿರಿ" ಎಂದು ಹೇಳಿದ್ದಾನೆ.) "ಮಾತನಾಡುವದು" ಮತ್ತು "ಬೋಧಿ ಸುವದು ಮತ್ತು ಬುದ್ಧಿ ಹೇಳುವದು" ಇವುಗಳು "ಕೀರ್ತನೆಗಳ" ಮೂಲಕ ಮಾಡಲ್ಪಡಬೇಕು. "ಕೀರ್ತನೆಗಳ" ಮೂಲಕ ಹಳೆಯ ಒಡಂಬಡಿಕೆಯ ಕೀರ್ತನೆಗಳು ಹಾಡಲೆಂದೇ ಬರೆಯಲ್ಪಟ್ಟಿವೆ ಎಂಬುದು ಪೌಲನ ಮಾತಿನ ಅರ್ಥವಾಗಿದೆ. ಇಂದು ಅನೇಕ ಕೀರ್ತನೆಗಳಿಗೆ ಸಂಗೀತವು ಸಂಯೋಜಿಸಲ್ಪಟ್ಟಿದೆ ಮತ್ತು ಸಭೆಗಳಲ್ಲಿ ಬಳಕೆಯಾಗುತ್ತಿವೆ. "ಸಂಗೀತಗಳು" ಧಾರ್ಮಿಕ ಪದ್ಯಗಳು ಆಗಿದ್ದು ಅವುಗಳಿಗೆ ಸಂಗೀತ ಸಂಯೋಜೀಸಲ್ಪಟ್ಟಿದ್ದು, ಅವುಗಳು ದೇವರನ್ನು ಹೆಸರಿಸುವಂಥವು ಅಥವಾ ದೇವರ ಬಗ್ಗೆ ಇರುವಂಥವು ಆಗಿವೆ. ಹಾಡುಗಳು "ಆತ್ಮೀಕಕ್ಕೆ" (*pneumatikos*) ಸಂಬಂಧಿಸಿದವು ಆಗಿದ್ದು ಲೌಕಿಕ ರೀತಿಯದ್ದಕ್ಕಿಂತಲೂ ಧಾರ್ಮಿಕದೊಡನೆ

ಅಂಶದೊಡನೆ ವ್ಯವಹರಿಸುವವು ಆಗಿದ್ದು ಮತ್ತು ಬೋಧಿಸುವಂಥಹವು, ಪ್ರೋತ್ಸಾಹಿಸುವಂತವು, ಎಚ್ಚರಿಸುವಂತವು ವಿಧೇಯತೆಯನ್ನು ಪ್ರಚೋದಿಸುವಂತವು ಆಗಿರಬಹುದು. "ಕೀರ್ತನೆ" ಮತ್ತು "ಸಂಗೀತಗಳ" ಮತ್ತು "ಆತ್ಮೀಕಕ್ಕೆ ಸಂಬಂಧಿಸಿದ ಹಾಡುಗಳು" ಇವುಗಳ ಮಧ್ಯದ ಸ್ಪಷ್ಟವಾದ ಭಿನ್ನತೆಯನ್ನು ಮಾಡುವದು ಕಷ್ಟಕರವಾದದ್ದು. ಪೌಲನು ಅವುಗಳನ್ನು ಬೇರೆ ಯಾಗಿಯೇ ಪಟ್ಟಿಮಾಡಿದ್ದಾಗ, ಆತನು ಕೇವಲ ಪರ್ಯಾಯ ಶಬ್ದಗಳನ್ನು ಬಳಸುತ್ತಿರಬಹುದು. ಈ ಮೂರು ಪಾರಿಭಾಷಿಕಗಳು ಬಲು ಸಾಮಾನ್ಯವಾಗಿ ಕೀರ್ತನೆಗಳಲ್ಲಿ LXX ಧಾರ್ಮಿಕ ಸಂಗೀತಗಳಿಗೆ ಬಳಸಲ್ಪಡುತ್ತಿದ್ದು ಮತ್ತು ಆಂತರಿಕ ಬದಲಾವಣೆಗಾಗಿ ಬಳಸಲ್ಪಡುವವೂ ಆಗಿರಬಹುದು.[9] ಮೊದಲನೆಯ ಶತಮಾನದಲ್ಲಿ Flavius Josephus ಈತನು ತನ್ನ ಬರಹಗಳಲ್ಲಿ "ಸಂಗೀತಗಳು," "ಕೀರ್ತನೆಗಳು," ಮತ್ತು "ಹಾಡುಗಳು" ಎಂದು ಹೇಳು ತ್ತಾನೆ.[10] ಈ ಪದಗಳ ವ್ಯಾಖ್ಯೆಯು ಬದಲಾದರೂ ಕೂಡಾ, ಇವೆಲ್ಲವುಗಳನ್ನು ದೇವರಿಗೆ ಸಂಬಂಧಿಸಿದಂತೆ ಮತ್ತು ಆತನನ್ನು ಆರಾಧಿಸುವ ನಮ್ಮ ಆರಾಧನೆಯಲ್ಲಿ ಹಾಡಲ್ಪಡಬೇಕು, ಎಂಬ ಪೌಲನ ಸೂಚನೆಯನ್ನು ಎಲ್ಲರೂ ಒಪ್ಪಿಕೊಂಡರು.

ಹಾಡುವುದರ ಉದ್ದೇಶವು ಎರಡು ರೀತಿಯದ್ದಾಗಿದೆ. ಮೊದಲನೆಯದಾಗಿ ಬೋಧಿ ಸುವದು, ಬುದ್ಧಿಹೇಳುವದು, ಮತ್ತು ಒಬ್ಬರಿಗೊಬ್ಬರು ಮಾತನಾಡುವದು ಸಮಾಂತರ ತಳಹದಿಯಾಗಿದೆ. ಎರಡನೆಯದಾಗಿ, ದೇವರಿಗೆ ಸ್ತೋತ್ರ ಸಲ್ಲಿಸುವಾಗ ತಲುಪುವದು ನೀಳವಾದ ತಳಹದಿಯಾಗಿದೆ (ನೋಡಿರಿ ಕೊಲಸ್ಸೆ 3:16). ಹಾಡುವದು "ಬೋಧನೆಗಾಗಿ" ಅಥವಾ ಸೂಚನೆಗಾಗಿ ಮತ್ತು "ಬುದ್ಧಿ ಹೇಳಲು" ಅಂದರೆ "ಎಚ್ಚರಿಸಲು, ಉಪದೇಶಮಾಡಲು ... (ಕೊಡಲು) ಪ್ರೋತ್ಸಾಹಕ್ಕಾಗಿ, (ಅಥವಾ) ಗದರಿಕೆಗೆ ರೂಪಿಸಲ್ಪಟ್ಟದ್ದು ಆಗಿದೆ."[12]

ಗ್ರೀಕ್‌ನಲ್ಲಿ ಗಾನಮಾಡು ಎಂಬ ಪದಕ್ಕೆ *psallontes* ಎಂದಿದ್ದು ಅದು *psallō* ರೀತಿಯಾಗಿದೆ. ಇದರ ನಿಖರವಾದ ಅರ್ಥದ ಮೇಲೆ ದೊಡ್ಡ ವಿವಾದವೇ ಎದ್ದಿತ್ತು. M. C. Kurfees ಅವರಿಂದ ಕೊಡಲ್ಪಟ್ಟ ಹದಿನೇಳು ಗ್ರೀಕ್ - ಇಂಗ್ಲೀಷ್ ವ್ಯಾಖ್ಯೆಗಳನ್ನು ಉಲ್ಲೇಖಿಸಲ್ಪಟ್ಟ ನಂತರ ಆ ಶತಮಾನದುದ್ದಕ್ಕೂ *psallō* ವಿಭಿನ್ನ ವಾದ ಆದು ಅರ್ಥಗಳಲ್ಲಿ ಬಳಸಲ್ಪಟ್ಟಿದೆ:

> (1) ಕೂದಲನ್ನು ಕಿತ್ತು; (2) ಬೋಸ್ಟ್ರಿಂಗನ್ನು ಮೀಟು; (3) ಬಡಿಗನ ಹೆಜ್ಜೆಯನ್ನು ಕೀಳು; (4) ಸಂಗೀತ ವಾದ್ಯಗಳ ವಾದ್ಯತಂತಿಯನ್ನು ಮುಟ್ಟು ಅದು, ವಾದ್ಯಗಳ ಸಂಗೀತವನ್ನು ಮಾಡುವದು; ಮತ್ತು (5) ಮಾನವನ ಹೃದಯವನ್ನು ಮುಟ್ಟು, ಆಗ ಅದು ಸ್ತೋತ್ರವನ್ನು ಸಲ್ಲಿಸುತ್ತಾ ಸಂಗೀತವನ್ನು ಹಾಡುವದು.[13]

Kurfees ರವರು ಮೊದಲ ಮೂರು ಅರ್ಥಗಳು ಆರಾಧನೆಗೆ ಸಂಬಂಧವಿಲ್ಲದ್ದರಿಂದ *psallō*ನ್ನು ಬಳಸಿದ್ದಾರೆ. ನಂತರ ಹೊಸ ಒಡಂಬಡಿಕೆಯಲ್ಲಿ ಹಾಡು ಎಂಬ ಪದದ ಅರ್ಥವು ಹಾಡುಗಳಲ್ಲಿ ದೇವರನ್ನು ಸ್ತುತಿಸುವದು ಎಂದು ಆತನು ಶಬ್ದಕೋಶದಲ್ಲಿ ತೋರಿಸುವ ಮೂಲಕ ಮುಂದುವರೆದಿದ್ದಾನೆ.[14] Kurfeesನು ತನ್ನ ಪುಸ್ತಕದಲ್ಲಿ ಸಭೆಯ ಪಾಲಕರಿಂದ (ಅಪೊಸ್ತಲರ ನಂತರ ಕೆಲ ನೂರುವರ್ಷದ ಒಳಗೆ ಸಭೆಗೆ ನಾಯಕರಾಗಿ ಜೀವಿಸಿದಂತವರು) ಬಳಸುವ ಮೂಲಕ ಪರೀಕ್ಷಿಸಿದನು, ಇದರ ಬಳಕೆಯು ನಿರ್ಧಿಷ್ಟವಾಗಿ ಮತ್ತು ಒಂದು ವರ್ಗಕ್ಕೆ ವಿಶಿಷ್ಯವಾಗಿರುವ ಆಜ್ಞೆಯ ಬೆಳಕಿನಲ್ಲಿ ಉಪಯೋಗಿಸಲ್ಪಡುತ್ತಿದೆ, ಮತ್ತು ಇದರ ಬಳಿಕೆಯು ಹೊಸ ಒಡಂಬಡಿಕೆಯಲ್ಲಿ ಇದೆ. ಮೊದಲ ಶತಮಾನದ ಸಭೆಯ ಸಂಗೀತವು ಯಾವಾಗಲೂ ಇರುವಂಥದ್ದು ಮತ್ತು ಕೇವಲ ಸಂಯುಕ್ತವಾಗಿತ್ತು ಎಂದು ಆತನು ತೀರ್ಮಾನಿಸುವವನಾಗಿದ್ದಾನೆ.

ಹೊಸ ಒಡಂಬಡಿಕೆಯಲ್ಲಿ ಹಾಡುವುದಕ್ಕೆ ಆಜ್ಞೆಕೊಡುವದು ಹಳೆ ಒಡಂಬಡಿಕೆಯಲ್ಲಿ ಇರುವಂಥ, ಪರಲೋಕದಲ್ಲಿ ಯಾವುದು ಇರುತ್ತದೆ ಎಂಬುದರೊಂದಿಗೆ, ಅಥವಾ ಜನರಿಗೆ

ಯಾವದು ಅನ್ವಯವಾಗುತ್ತದೆ ಎಂಬುದರೊಂದಿಗೆ ಯಾವುದೇ ರೀತಿಯಲ್ಲಿ ಸಂಬಧವು ಇರುವುದಿಲ್ಲ. ಇದು ಆರಾಧನೆ ಮಾಡುತ್ತಾ ಹಾಡುತ್ತಾ ಇರುವ ತನ್ನ ಒಡಂಬಡಿಕೆಯ ಅಡಿಯಲ್ಲಿರುವ ಆತನ ಜನರಿಗೆ ದೇವರು ಕೇಳುವ ಪ್ರತಿಯೊಂದು ಇದಕ್ಕೆ ಸಂಬಂಧಿಸಿರುತ್ತದೆ. ಒಬ್ಬ ವ್ಯಕ್ತಿಯು ಕಾಳಜಿಪೂರಕವಾಗಿ ಮತ್ತು ವಿವೇಕದಿಂದ ಜೀವಿಸುವುದಾದರೆ ಆತನು ದೇವರು ಏನನ್ನು ಹೇಳಿದ್ದಾನೋ ಅದನ್ನೇ ನಿಖರವಾಗಿ ಮಾಡುತ್ತಾನೆ.

**ನಿಮ್ಮ ಹೃದಯಗಳಲ್ಲಿ ಕರ್ತನಿಗೆ ಗಾನಮಾಡುತ್ತಾ ಕೀರ್ತನೆ ಹಾಡುತ್ತಾ** ಎಂಬುದು "ಕರ್ತನಿಗೆ" ಆರಾಧನೆಯನ್ನು ಸಲ್ಲಿಸುವುದಾಗಿದ್ದು ಗಾಯನ ಮಾಡುವದು ಆರಾಧನೆಯ ಅಂಶಕ್ಕೆ ನೇರವಾಗಿರುವ ತಳಹದಿಗೆ ಒತ್ತುಕೊಡುವಂಥದ್ದಾಗಿದೆ. ಇಬ್ರಿಯ 13:15ರಲ್ಲಿ, "ಸ್ತೋತ್ರ ಯಜ್ಞವನ್ನು ಎಡಬಿಡದೆ ಸಮರ್ಪಿಸೋಣ. ಆತನು ಕರ್ತನು ಎಂದು ಬಾಯಿಂದ ಪ್ರತಿಜ್ಞೆ ಮಾಡುವುದೇ ನಾವು ಅರ್ಪಿಸುವ ಯಜ್ಞವಾಗಿದೆ" ಎಂದು ಲೇಖಕನು ಕ್ರಿಸ್ತನ ಮೂಲಕ ನಮಗೆ ಹೇಳುತ್ತಾನೆ. ಆರಾಧನೆಯ ಪ್ರಯೋಜನಗಳು ಕ್ರಿಸ್ತನ ದೇಹದಲ್ಲಿ ಒಂದುಗೂಡಿವೆ, ಆದರೆ ಇದು ದೇವರಿಗೆ ಸಭೆಯಲ್ಲಿರುವ ಪ್ರತಿಯೊಬ್ಬ ವ್ಯಕ್ತಿಯಿಂದಲೂ ಮಾಡುವಂಥದ್ದಾಗಿದೆ. ನಮಗೆ ಅತಿ ಅವಶ್ಯವಿರುವ ಸಾಧನ ಹೃದಯವು ಆಗಿದೆ. "ಹಾಡುವ" ಪ್ರಬೋಧವು ಬಾಯನ್ನು ಒಳಗೊಂಡಿದೆ; ಆದರೆ *psallō*ಗೆ ಅವಶ್ಯವಿರುವ ಸಾಧನ ಹೃದಯವು ಆಗಿದೆ. ಇದಕ್ಕೆ ಯಾವುದೇ ವಿಧವಾದ ಆಧಾರವು ದೇವವಾಕ್ಯದಿಂದ ಅಥವಾ ಮೊದಲನೆಯ ಶತಮಾನದಲ್ಲಿ ಅದರ ಆರಾಧನೆಯಲ್ಲಿ ಬಳಸಲ್ಪಟ್ಟ ಯಾವುದೇ ಸಂಗೀತ ಸಾಧನಗಳಲ್ಲಿ ಇರುವ ಯಾವುದೇ ವಿಧವಾದ ಆಧಾರವು ಇಲ್ಲ. ಇದಕ್ಕೆ ವಿರುದ್ಧವಾದ ಎಲ್ಲಾ ಪುರಾವೆ ಗಳು, ಸಭೆಯಲ್ಲಿ ಸಂಗೀತವು ಧ್ವನಿಮಾಧ್ಯವಾಗಿತ್ತು ಎಂದು ಸೂಚಿಸುವವು ಆಗಿವೆ.

ಒಂದು ವಾದದಂತೆ ನಾವು ಆರಾಧನೆಯಲ್ಲಿ ಸಂಗೀತ ಸಾಧನಗಳನ್ನು ನಾವು ಬಳಸುತ್ತಾ "*ಇದನ್ನು ಬಳಸಬಾರದು* ಎಂದು ಸತ್ಯವೇದವು ಹೇಳುವುದಿಲ್ಲ" ಎಂದು ಹೇಳುವದು ಸಂಪೂರ್ಣವಾಗಿ ನಿರರ್ಥಕವಾದದ್ದು. ದೇವರು ಅದನ್ನು ನಮಗೆ ಮಾಡಲು ಹೇಳಿದಾಗ, ಸಾಧ್ಯವಿರುವದನ್ನು ಒಂದಾದನಂತರ ಒಂದನ್ನು ಹೆಸರಿಸಿ ಮತ್ತು "ಇದನ್ನು ನೀನು ಮಾಡಬೇಡ" ಎಂದು ಹೇಳುವುದಿಲ್ಲ. ದೇವರ ವಾಕ್ಯವು ಸಮಗ್ರವಾದದ್ದು, ಆತನು ಏನನ್ನು ಆಜ್ಞೆಮಾಡುತ್ತಾನೆ ಮತ್ತು ಆ ಆಜ್ಞೆಗಳು ಯಾವೆಲ್ಲ ಅವಾಶ್ಯವಾದವುಗಳನ್ನು ಹೊಂದಿವೆ ಎಂಬುದನ್ನು ಅದು ಒಳಗೊಂಡಿವೆ, ಅದರಂತೆಯೇ ಅದು ಎಲ್ಲವನ್ನೂ ಒಳಗೊಂಡಿದೆ, ಮತ್ತು ಎಲ್ಲವುಗಳನ್ನು ಹೊರಹಾಕುವಂಥದ್ದೂ ಆಗಿದೆ. ಆರಾಧಕರು ಹಾಡಬೇಕು ಮತ್ತು ತಮ್ಮ ಹೃದಯಗಳಲ್ಲಿ "ಕರ್ತನಿಗೆ" ಗಾನಮಾಡಬೇಕು. ಕ್ರಿಸ್ತನೂ ಮತ್ತು ದೇವರ ಸಂಪೂರ್ಣತೆಯು ಆವರಿಸಿದಲ್ಲಿ ಆತ್ಮಭರಿತವಾದ ಸಂತೋಷಮಯವಾದ ಹೃದಯಗಳು ಕರ್ತನಿಗೆ ಸ್ತೋತ್ರಸಲ್ಲಿಸುವಲ್ಲಿ ತುಂಬಿತುಳುಕುವವು ಆಗಿರುತ್ತಾರೆ.

**ವಚನ 20.** ಆತ್ಮದಿಂದ ತುಂಬಿರುವುದಕ್ಕೆ ಎರಡನೆಯ ಆಧಾರವು ಸ್ತೋತ್ರಸಲ್ಲಿಸುವುದು ಆಗಿದೆ. ಕೆಲಸಂಗತಿಗಳಿಗೆ ಕೆಲಸಮಯದಲ್ಲಿ ಮಾತ್ರ ಸ್ತೋತ್ರವನ್ನು ಸಲ್ಲಿಸಬೇಕೆಂದು ಪೌಲನು ಹೇಳಿಲ್ಲ ಆದರೆ **ಯಾವಾಗಲೂ ಎಲ್ಲಾ ಕಾರ್ಯಗಳಿಗೋಸ್ಕರ** ಸ್ತೋತ್ರಮಾಡಿರಿ ಎಂದು ಹೇಳುತ್ತಾನೆ. 1 ಥೆಸಲೋನಿಕ 5:18ರಲ್ಲಿ "ಎಲ್ಲಾದರಲ್ಲಿಯೂ ಕೃತಜ್ಞತಾಸ್ತುತಿ ಮಾಡಿರಿ" ಎಂದು ಹೇಳುತ್ತಾನೆ. ಕ್ರೈಸ್ತರು ಎಲ್ಲಾ ಒಳ್ಳೆಯಕಾರ್ಯಗಳಿಗೆ ಕೃತಜ್ಞತಾಸ್ತುತಿಮಾಡಬೇಕು. ದೇವರನ್ನು "ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು ಅನುಕೂಲವಾಗುತ್ತವೆ" ಎಂಬುದನ್ನು ತಿಳಿದುಕೊಳ್ಳುತ್ತಾ (ರೋಮಾಪುರ 8:28) ಕೆಟ್ಟ ಸಂಗತಿಗಳು ಸಂಭವಿಸಿದಾಗಲೂ ಕೂಡ ಆತನಿಗೆ ಕೃತಜ್ಞತಾಸ್ತುತಿ ಸಲ್ಲಿಸಬೇಕು.

**ನಮ್ಮ ಕರ್ತನಾದ ಯೇಸು ಕ್ರಿಸ್ತನ ಹೆಸರಿನ** ಮೂಲಕ ತಲುಪಬಹುದು ಎಂದು ತಿಳಿದುಕೊಳ್ಳುವಂತೆ, ಎಫೆಸದವರು ಯೇಸು ಕ್ರಿಸ್ತನ ಹೆಸರಿನಲ್ಲಿ ತಂದೆಯಾದ ದೇವರಿಗೆ ಸ್ತೋತ್ರ ಸಲ್ಲಿಸುವವರಾಗಿದ್ದರು (ನೋಡಿರಿ ಯೋಹಾನ 14:13; 1 ತಿಮೋಥೆ 2:5; ಇಬ್ರಿಯ

13:15) ಮತ್ತು ಆತನ ಮೂಲಕವೇ "ಒಬ್ಬ ಆತ್ಮನನ್ನೇ ಹೊಂದಿದವರಾಗಿ ತಂದೆಯ ಬಳಿಗೆ ಪ್ರವೇಶಿಸುವುದಕ್ಕೆ ಮಾರ್ಗವಾಯಿತು" (2:18). ನಮ್ಮ ಸ್ತೋತ್ರಸಲ್ಲಿಸುವಿಕೆಯು ತಂದೆಯಾದ ದೇವರಿಗೆ ಸಲ್ಲಿಸುವುದಾಗಿದ್ದು "ಎಲ್ಲಾ ವರಗಳು ಮೇಲಣಿಂದ ಸಕಲವಿಧವಾದ ಬೆಳಕಿಗೂ ಮೂಲಕಾರಣನಾದವನಿಂದ ಇಳಿದುಬರುತ್ತವೆ" ಎಂದು ಯಾಕೋಬನು ಯಾರ ಬಗ್ಗೆ ಹೇಳಿದನೂ ಆತನೇ ಆಗಿದ್ದಾನೆ (ಯಾಕೋಬ 1:17).

**ವಚನ 21.** "ಆತ್ಮದಿಂದ ತುಂಬಿರುವುದಕ್ಕೆ" ಇರುವ ಕ್ರೈಸ್ತರಾಗಿರುವ ಮೂರನೆಯ ಪುರಾವೆಯು **ಒಬ್ಬರಿಗೊಬ್ಬರು ವಿನಯವುಳ್ಳವರಾಗಿ ನಡೆದುಕೊಳ್ಳಿರಿ** ಎಂಬುದೇ. ಈ ಉಪದೇಶವು ಪೌಲನ ಪತ್ರದ ಒಂದು ಭಾಗದ ಅಂತ್ಯ ಎಂಬುದರ ಗುರುತು ಆಗಿದೆ, ಆದರೆ ಇದು ಇನ್ನೊಂದು ಭಾಗದ ಆರಂಭವೂ ಹೌದು. ಒಬ್ಬರಿಗೊಬ್ಬರು ವಿನಯವುಳ್ಳವರಾಗಿರುವ ವಿಚಾರವನ್ನು ಅಪೊಸ್ತಲನು ಬಳಸುವ ಮೂಲಕ ಕುಟುಂಬಗಳು ಮತ್ತು ದಾಸತ್ವದ ಜೊತೆ ವ್ಯವಹರಿಸುತ್ತಿರುವದನ್ನು ಪತ್ರದ ಉದ್ದವಾದ ಭಾಗದಿಂದ ಪರಿಚಯಿಸುತ್ತಿದ್ದಾನೆ. ಎಫೆಸದಲ್ಲಿರುವ ಕ್ರೈಸ್ತರು ಐಕ್ಯತೆಯಲ್ಲಿ ಜೀವಿಸಬೇಕೆಂದು ಪೌಲನು ಬಯಸುತ್ತಿದ್ದಾನೆ. ಇದನ್ನು ಮಾಡಲು ಅವರು ದೇವರಿಗೆ ತಮ್ಮನ್ನು ಒಪ್ಪಿಸಬೇಕು ಮತ್ತು ನಮ್ರತೆಯನ್ನು ಅವಿರ್ಭವಿಸಿಕೊಳ್ಳಬೇಕು, ತಾಳ್ಮೆಯನ್ನು ಹೊಂದಬೇಕು, ಮತ್ತು ಒಬ್ಬರಿಗೊಬ್ಬರು ಪ್ರೀತಿಯನ್ನು ಹೊಂದಿರಬೇಕು (4:2, 3). ಇದಕ್ಕೆ ಜೊತೆಯಾಗಿ ತಪ್ಪುದಾರಿಗೆ ಎಳೆಯುವ ಮಾತುಗಳನ್ನು ಮತ್ತು ಸಭೆಯ ಸಮರಸದಲ್ಲಿ ಮಧ್ಯಪ್ರವೇಶಿಸುವ ಕಾರ್ಯದಲ್ಲಿ ತೊಡಗುವದರ ವಿರುದ್ಧ ಕಾದುಕೊಳ್ಳುವ ಮೂಲಕ ಪರಿಶುದ್ಧಾತ್ಮನನ್ನು ದುಖಪಡಿಸುವುದನ್ನು ತಪ್ಪಿಸುವವರಾಗಿರಬೇಕು (4:25-32). ಅವರು ಒಬ್ಬರಿಗೊಬ್ಬರು ವಿನಯವುಳ್ಳವರಾಗಿರುವುದರ ಮೂಲಕ ಸಾಮರಸ್ಯ ಜೀವಿತದ ಮೂಲವಾಗಿರಬೇಕು.

"ವಿನಯವುಳ್ಳವರಾಗಿರಬೇಕು" (*hupotassō*) ಇದು "**ಅಡಿಯಲ್ಲಿ**" (*hupo*) ಮತ್ತು "**ಶಿಸ್ತಿಗೆ ಒಳಪಡು**" (*tassō*) ಎಂಬುದನ್ನು ಜೋಡಿಸುವಂಥದ್ದಾಗಿದೆ.[15] *Tassō* ಎಂಬುದು ಸೈನ್ಯದಲ್ಲಿ ಸೇನಾಪತಿಯ ದಂಡನೆಯ ಅಡಿಯಲ್ಲಿರುವ ಸೇನಾದಳ ಅಥವಾ ಹಡಗು ಎಂದು ಶಾಸ್ತ್ರೀಯ ಗ್ರೀಕ್‌ನಲ್ಲಿ ಬಳಸಲ್ಪಡುತ್ತಿದ್ದು; ಇದು ವೈಯಕ್ತಿಕವಾಗಿ ಒಬ್ಬನು ಇನ್ನೊಬ್ಬನಿಗೆ ವಿನಯವುಳ್ಳನಾಗಿರುವುದನ್ನು ಒಳಗೊಂಡಿತ್ತು. ಈ ವಚನದಲ್ಲಿ, ಕ್ರಿಯಾಪದದ ಅರ್ಥವು "ವಿನಯವುಳ್ಳವನಾಗಿರುವದು, ವಿಧೇಯರಾಗಿರುವದ" ಎಂದಾಗಿದೆ.[16] ಇನ್ನೊಂದೆಡೆಯಲ್ಲಿನ ಪೌಲನ ಬರವಣಿಗೆಯಲ್ಲಿ, ಒಪ್ಪಿಸಿಕೊಳ್ಳುವುದರ ಅಂಶವು "ಒಂದು ನಿರ್ದಿಷ್ಟ ಗುಂಪಿನ ನಿಲುವಿಗೋಸ್ಕರದ ಸ್ತ್ರೀ (1 ಕೊರಿಂಥ 14:34; ಕೊಲಸ್ಸೆ 3:18; 1 ತಿಮೋಥೆ 2:11; ತೀತ 2:5), ಮಕ್ಕಳು (1 ತಿಮೋಥೆ 3:4) ಮತ್ತು ದಾಸರು (ತೀತ 2:9) ಅಥವಾ ವಿಶ್ವಾಸಿಗಳ ಅವಸ್ಥೆಯ ನಿಲುವಿಗೋಸ್ಕರ (ರೋಮಾಪುರ 13:1, 5; ತೀತ 3:1)" ಇವುಗಳಿಗೆ ಮಾತ್ರ ಬಳಸಲ್ಪಟ್ಟಿತ್ತು.[17]

**ಕ್ರಿಸ್ತನಿಗೆ ಭಯಪಡುವವರಾಗಿದ್ದು** ಎಂಬುದು ಯಾರು ಕ್ರಿಸ್ತನನ್ನು ಗೌರವಿಸುತ್ತಾರೋ ಮತ್ತು ಆದರಿಸುತ್ತಾರೋ ಅವರು ಇತರರನ್ನೂ ಸಹ ಗೌರವಿಸುವವರೂ ಮತ್ತು ಆದರಿಸುವವರೂ ಆಗಿರುತ್ತಾರೆ. "ಕ್ರಿಸ್ತನಿಗೋಸ್ಕರ ಒಬ್ಬರಿಗೊಬ್ಬರು ಸೌಜನ್ಯದಿಂದ ನಡಕೊಳ್ಳಿರಿ" ಎಂದು NIV ಹೇಳಿದರೆ, KJVಯು "ದೇವರ ಭಯದ" ಬಗ್ಗೆ ಹೇಳುತ್ತದೆ. ನಮ್ರತೆಯ ಭಾವನೆಯನ್ನು ತೋರಿಸುವದು ಮತ್ತು ಇತರರ ಅವಶ್ಯಕತೆಗಳನ್ನು ನಮ್ಮ ಸ್ವಂತವುಗಳಿಂತಲೂ ಮಹತ್ವವಾದದ್ದು ಎಂದು ತೋರಿಸುವದು ಕ್ರಿಸ್ತನನ್ನು ಹಿಂಬಾಲಿಸುವುದರ ಒಂದು ಉದಾಹರಣೆಯಾಗಿದೆ (ನೋಡಿ ಫಿಲಿಪ್ಪಿ 2:3-8).

5:21ರ ಸಾಮಾನ್ಯ ನಿಯಮದ ಮೇಲೆ ಪೌಲನು ಆತುಕೊಂಡ ಮೇಲೆ, ಆತನು ಗಂಡ ಹೆಂಡತಿಯರಿಗೆ, ತಂದೆತಾಯಿಗಳು ಮತ್ತು ಮಕ್ಕಳಿಗೆ, ಮತ್ತು ಒಡೆಯ ಮತ್ತು ದಾಸರಿಗೆ 5:22-6:9ರಲ್ಲಿ ಒಂದು ನಿರ್ಧಿಷ್ಟವಾದ ಅನ್ವಯವನ್ನು ಮಾಡಿದನು.

## ಗಂಡ ಮತ್ತು ಹೆಂಡತಿಯರ ಸಂಬಂಧವನ್ನು ಗೌರವಿಸುವದು (5:22-33)

ಆತನು ಕೊಲಸ್ಸೆ 3ರಲ್ಲಿ ಮಾಡಿದಂತೆಯೇ ಎಫೆಸ 5ರಲ್ಲಿ, ಪೌಲನು ಸಭೆಯಲ್ಲಿನ ಗಂಡ ಹೆಂಡತಿಯರ ಮಧ್ಯದ ಸಂಬಂಧದ ಬಗ್ಗೆ ಮಾತನಾಡಿದನು. ಸ್ತ್ರೀಯರಿಗೆ ಸೂಚನೆಗಳನ್ನು ಕೊಡುತ್ತಾ ಆತನು ಪ್ರಾರಂಭಿಸಿದನು ಮತ್ತು ಕೊನೆಗೊಳಿಸಿದನು ಆದರೆ ಆತನು ಹೇಳಿದ್ದರಲ್ಲಿ ಹೆಚ್ಚಿನದು ಗಂಡಂದರಿಗೆ ನಿರ್ದೇಶನ ಮಾಡಿದೇ ಆಗಿದೆ. ಈ ಒತ್ತುಕೊಡುವಿಕೆಯು 1 ಪೇತ್ರ 3:1-7ರಲ್ಲಿ ಹಿಂದೆ ಮುಂದಾಗಿದೆ.

### ಸ್ತ್ರೀಯರೇ: "ಅಧೀನರಾಗಿರ್ರಿ" (5:22-24)

**[22]ಸ್ತ್ರೀಯರೇ, ನೀವು ಕರ್ತನಿಗೆ ಹೇಗೋ ಹಾಗೆಯೇ ನಿಮ್ಮನಿಮ್ಮ ಗಂಡಂದಿರಿಗೆ ಅಧೀನ ರಾಗಿರ್ರಿ. [23]ಕ್ರಿಸ್ತನು ಸಭೆಗೆ ತಲೆಯಾಗಿರುವ ಪ್ರಕಾರವೇ ಗಂಡನು ಹೆಂಡತಿಗೆ ತಲೆಯಾಗಿದ್ದಾನೆ. ಕ್ರಿಸ್ತನೋ ಸಭೆಯೆಂಬ ದೇಹಕ್ಕೆ ರಕ್ಷಕನಾಗಿದ್ದಾನೆ. [24]ಅದಿರಲಿ; ಸಭೆಯು ಕ್ರಿಸ್ತನಿಗೆ ಹೇಗೆ ಅಧೀನವಾಗಿದೆಯೋ ಹಾಗೆಯೇ ಸ್ತ್ರೀಯರು ತಮ್ಮ ತಮ್ಮ ಗಂಡಂದಿರಿಗೆ ಎಲ್ಲಾ ವಿಷಯಗಳಲ್ಲಿ ಅಧೀನರಾಗಿರಬೇಕು.**

**ವಚನ 22. ಸ್ತ್ರೀಯರೇ,** [ತಮ್ಮ] **ಗಂಡಂದರಿಗೆ ಅಧೀನರಾಗಿರ್ರಿ** ಎಂಬ ಸೂಚನೆಯು ಕೊಡಲ್ಪಟ್ಟಿದೆ. (*Hupotassō* ದಿಂದ) ಏಕವಚನದ ಕ್ರಿಯಾಪದವು 21ನೇ ವಚನದಲ್ಲಿ ಹಂಚಿಕೊಳ್ಳಲ್ಪಟ್ಟಿದ್ದು. ಕ್ರೈಸ್ತರು ಒಬ್ಬರಿಗೊಬ್ಬರು "ಅಧೀನರಾಗಿರುವ" ಈ ವಿಷಯದಲ್ಲಿ, ಮತ್ತು ವಚನ 22ರಲ್ಲಿ ಒಬ್ಬರಿಗೊಬ್ಬರು ಅಧೀನರಾಗಿರುವ ವಿಷಯದಲ್ಲಿ ಸ್ತ್ರೀಯರು ಎಚ್ಚರಿಸಲ್ಪಟ್ಟಿದ್ದಾರೆ. "ಅಧೀನರಾಗಿರು" ಎಂಬುದು ವಚನ 22ರಲ್ಲಿ ಇಟ್ಯಾಟಿಕ್ ಆಗಿದ್ದು ಹೆಚ್ಚಿನ ಬೈಬಲ್‌ಗಳಲ್ಲಿ ಕ್ರಿಯಾಪದವು ಮೂಲವೇದಭಾಗದಲ್ಲಿ ಇಲ್ಲ ಆದರೆ ಎಂಬುದನ್ನು ಸೂಚಿಸುವುದಾಗಿದೆ ಆದರೆ ಆ ವಿಚಾರವು ಸೂಚ್ಯವಾಗಿರಬೇಕು ಎಂಬ ಕಾರಣದಿಂದ ಭಾಷಾಂತರಕಾರದಿಂದ ಸೇರೇಸಲ್ಪಟ್ಟದ್ದಾಗಿದೆ. ಅಕ್ಷರಸಹ, ಪೌಲನು ಹೇಳಿದ್ದು "ಒಬ್ಬರಿಗೊಬ್ಬರು ಅಧೀನರಾಗಿರ್ರಿ ... ಸ್ತ್ರೀಯರೇ ನಿಮ್ಮ ಗಂಡಂದಿರಿಗೆ ಅಧೀನರಾಗಿರ್ರಿ." ನಂತರ, ವಚನ 24ರಲ್ಲಿ, ಪೌಲನು ಸ್ತ್ರೀಯರಿಗೆ ತಮ್ಮ ಗಂಡಂದಿರಿಗೆ ವಿಧೇಯರಾಗಿರಬೇಕು ಎಂದು ಸ್ಪಷ್ಟವಾಗಿ ಹೇಳಿದ್ದಾನೆ.

ಸ್ತ್ರೀಯರು ತಮ್ಮ ಗಂಡಂದಿರಿಗೆ ವಿಧೇಯರಾಗಿರಲು ಮತ್ತು ಅಧೀನರಾಗಿರುವುದನ್ನು (ನೋಡಿರಿ 1 ಪೇತ್ರ 3:1, 6) ಅದರಂತೆಯೇ ಅವರಿಗೋಸ್ಕರದ ಗೌರವವನ್ನೂ (ಎಫೆಸ 5:33) ಈ ಆಜ್ಞೆಯು ಒಳಗೊಂಡಿದೆ. ಸ್ತ್ರೀಯು ತನ್ನ ಗಂಡನಿಗೆ ಅಧೀನಳಾಗಿರುವುದಕ್ಕೆ ಇರುವ ಮಾದರಿಯು ಸಭೆಯು ಕ್ರಿಸ್ತನ ಅಧೀನವಾಗಿರುವುದೇ ಆಗಿದೆ (5:24). ಮೊದಲ ಶತಮಾನದ ಎಫೆಸದ ಸಂಸ್ಕೃತಿಯನ್ನು ತನ್ನ ಬೋಧನೆಯಲ್ಲಿ ತಿಳಿದುಕೊಳ್ಳುವ ರೀತಿಯ ಮೂಲಕ ಪೌಲನ ಸಮಾರೋಪವು ಬಲಗೊಂಡಿರಬೇಕು. ಸರಳಾರ್ಥದಲ್ಲಿ, ಗಂಡನು ಹೆಂಡತಿಯೂ ಒಬ್ಬರಿಗೊಬ್ಬರು ಅಧೀನರಾಗಿರಬೇಕು; ಆದರೆ ನಿರ್ಧಿಷ್ಟಾರ್ಥದಲ್ಲಿ, ಸ್ತ್ರೀಯರು ತಮ್ಮ ಗಂಡಂದರಿಗೆ ಅಧೀನರಾಗಿರಬೇಕು.

**ಕರ್ತನಿಗೆ ಹೇಗೋ ಹಾಗೆಯೇ** ಎಂಬುದು ಅವರು ಯೇಸುವಿಗೆ ಅಧೀನರಾಗಿ ರುವಂತೆ "ಅದೇ ರೀತಿಯಲ್ಲಿ ಎಂಬಂತೆಯೇ"[18] (*hōs*) ಸ್ತ್ರೀಯರು ತಮ್ಮ ಗಂಡಂದರಿಗೆ ಅಧೀನರಾಗಿರುವುದನ್ನು ಸೂಚಿಸುವುದಾಗಿದೆ. ತಮ್ಮ ಗಂಡಂದರಿಗೆ ವಿಧೇಯರಾಗುವ ಮೂಲಕ, ಸ್ತ್ರೀಯರು ಕ್ರಿಸ್ತನಿಗೂ ವಿಧೇಯರಾಗಿರುತ್ತಾರೆ. ಅದೇ ವಿಚಾರವು ಕೊಲಸ್ಸೆ 3:18ರಲ್ಲಿ "ಸ್ತ್ರೀಯರೇ ನಿಮ್ಮ ಗಂಡಂದರಿಗೆ ಅಧೀನರಾಗಿರಿ ಇದು ಕರ್ತನಲ್ಲಿರುವವರಿಗೆ ಯೋಗ್ಯವಾಗಿದೆ" ಎಂಬಲ್ಲಿ ಮಂಡಿಸಲಾಗಿದೆ.

ಸ್ತ್ರೀಯರು ತಮ್ಮ ಗಂಡಂದಿರಿಗೆ ಅಧೀನವಾಗಿರುವದು ಮೌಲ್ಯಕ್ಕೆ ಸಂಬಂಧಿಸಿದ್ದಲ್ಲ (ಗಂಡಂದಿರು ಸ್ತ್ರೀಯರಿಗಿಂತಲೂ ಬಲು ಮೌಲ್ಯವುಳ್ಳವರಾಗಿರುವುದಿಲ್ಲ) ಅಥವಾ

ದೇವರ ದೃಷ್ಟಿಯಲ್ಲಿ ಸರಿಸಮಾನರಲ್ಲ (ಸ್ತ್ರೀ ಪುರುಷರು ದೇವರ ಮುಂದೆ ಸಮಾನ ಸ್ಥಿತಿಯುಳ್ಳವರಾಗಿದ್ದಾರೆ; ಗಲಾತ್ಯ 3:28). ಬದಲಾಗಿ, ಅಧೀನವಾಗಿರುವದು ದೇವರು ಸ್ತ್ರೀ ಪುರುಷರಿಗೆ ಕೊಡಮಾಡಿದ ಸಂಗತಿಗಳಿಗೆ ವಿಭಿನ್ನ ಪಾತ್ರಗಳಲ್ಲಿನ ಪ್ರತಿಯೊಂದನ್ನೂ ಮಾಡುವುದಾಗಿದೆ. ಸ್ತ್ರೀಯರು ತಮ್ಮ ಗಂಡಂದರಿಗೆ ಅಧೀನವಾಗಿರಬೇಕು ಮತ್ತು ಕ್ರಿಸ್ತನಿಗೆ ಅಧೀನವಾಗಿರಬೇಕು.

**ವಚನ 23.** ಮುಂದೆ, ಸ್ತ್ರೀಯರು ತಮ್ಮ ಗಂಡಂದಿರಿಗೆ ಅಧೀನರಾಗಿರಬೇಕು ಎಂಬುದಕ್ಕೆ ಕಾರಣವನ್ನು ಪೌಲನು ವಿವರಿಸಿದ್ದಾನೆ. "ಪ್ರಕಾರ" (for) *hoti* ಮತ್ತು ಇಂಗ್ಲೀಷ್ ಪದವಾದ "ಯಾಕೆಂದರೆ" (because) ಸರಿದೂಗುವುದಾಗಿದೆ.[19] **ಕ್ರಿಸ್ತನು ನಿಮಗೆ ತಲೆಯಾಗಿರುವ ಪ್ರಕಾರ ಗಂಡನು ಹೆಂಡತಿಗೆ ತಲೆಯಾಗಿದ್ದಾನೆ** ಎಂದು ಪಾಲನು ಹೇಳಿದ್ದಾನೆ. ಆತನು ಗಂಡ ಮತ್ತು ಹೆಂಡತಿಯ, ಕ್ರಿಸ್ತನು ಮತ್ತು ಸಭೆಯ ಮಧ್ಯದ ಹೋಲಿಕೆಯತ್ತ ಎಳೆಯುತ್ತಿದ್ದಾನೆ. ಕುಟುಂಬದಲ್ಲಿ ಗಂಡನ ಪಾತ್ರವು ಸಭೆಯಲ್ಲಿನ ಕ್ರಿಸ್ತನ ಪಾತ್ರಕ್ಕೆ ಸಮಾನವಾಗಿದೆ. ಈ ಪಾತ್ರವು "ತಲೆ" ಎಂದು ವರ್ಣಿಸಲ್ಪಟ್ಟಿದ್ದು, "ನಾಯಕ ಅಥವಾ ಅರಸ" ಎಂಬ ಅರ್ಥದೊಡನೆ *kephalē*ದ ಭಾಷಾಂತರವಾಗಿದೆ.[20] ಹಿಂದೆ ಪೌಲನು ಕ್ರಿಸ್ತನು "ತನ್ನ ದೇಹವಾದಂತ" (1:23) ಸಭೆಯ ತಲೆಯಾಗಿದ್ದಾನೆ ಎಂದು ವರ್ಣಿಸಲು ಈ ಪದವನ್ನು ಬಳಸಿದ್ದನು. ಕ್ರಿಸ್ತನ ಅಧಿಕಾರವು ನಾಯಕನಂತೆ ಅಥವಾ ಅರಸನಂತೆ ಎಂಬುದಕ್ಕೆ ಯಾವುದೇ ಸಂಶಯವಿಲ್ಲದಿರುವದು ಆತನ ಮನದಲ್ಲಿ ಇತ್ತು (ನೋಡಿರಿ ಮತ್ತಾಯ 28:18), ಇದಕ್ಕೆ ಸಮಾನವಾದ ರೀತಿಯಲ್ಲಿ ಗಂಡನು ನಾಯಕನ ಮತ್ತು ಅರಸನ ಅಧಿಕಾರ ಹೊಂದಿರುತ್ತಾನೆ. ಕುಟುಂಬದಲ್ಲಿ ದೇವರ ವಿಧವು ಆತನ ಸಭೆಯಲ್ಲಿನ ವಿಧವನ್ನು ಪಾಲಿಸುವುದಾಗಿದೆ. ಈ ಅಧಿಕಾರ ಹೊಂದಿದಂತೆ ಅದು ನಿಯಂತ್ರಣದಲ್ಲಿರುವಂತೆ ಹೆಚ್ಚಾಗಿ ತೋರ್ಪಡಿಸಬಾರದು. ಈ ವಾಸ್ತವವು ಈ ವಚನಗಳಲ್ಲಿ ಗಂಡ ಹೆಂಡತಿಗೆ ಪೌಲನು ಕೊಟ್ಟಂಥ ಸೂಚನೆಗಳಲ್ಲಿ ಇರುವುದನ್ನು ಕಾಣುತ್ತೇವೆ.

**ಕ್ರಿಸ್ತನು ಸಭೆಯೆಂಬ ದೇಹಕ್ಕೆ ರಕ್ಷಕನಾಗಿದ್ದಾನೆ** ಎಂಬುದು ಕ್ರಿಸ್ತನಿಗೆ ಸೂಚಿತವಾಗಿದ್ದಾಗಿದೆ. ಗಂಡಂದಿರು ತಮ್ಮ ಹೆಂಡತಿಯರ ರಕ್ಷಕರು ಎಂದು ಇಲ್ಲಿ ಪೌಲನು ಹೇಳುತ್ತಿಲ್ಲ, ಹೊರತಾಗಿ ಅವರನ್ನು ಕ್ರಿಸ್ತನೆಡೆಗೆ ನಡೆಸುವವರಾಗಿದ್ದಾರೆ ಎಂಬರ್ಥದಲ್ಲಿ ಹೇಳುತ್ತಿದ್ದಾನೆ. ಕ್ರಿಸ್ತನು ಸಭೆಯ ತಲೆ ಎಂಬುದನ್ನು ಆತನು ಮುಂದಿನ ವಿವರಣೆಯಂತೆ ಸೇರಿಸಿದ್ದಾನೆ.

ಎಫೆಸದವರು ರಕ್ಷಣೆಯಿಲ್ಲದ ಸ್ಥಿತಿಯಲ್ಲಿ ಒಂದೇ ಸಾರಿ ಕಾಣಿಸಿಕೊಂಡಿಲ್ಲ (2:1-3). ಅವರ ಪಾಪದಿಂದಾಗಿ ಅವರು ದೇವರಿಂದ ಬೇರೆಯಾಗಲ್ಪಟ್ಟರು. ಕ್ರಿಸ್ತನ ಮರು ಸಂಧಾನದ ಕಾರ್ಯದ ಮೂಲಕ ಅವರನ್ನು ರಕ್ಷಿಸಲು ದೇವರು ಕೃಪೆಯಿಂದ ಕಾರ್ಯಮಾಡಿದನು (2:4-22). ಕ್ರಿಸ್ತನಲ್ಲಿ ಅವರು "ಒಂದೇ ದೇಹದಲ್ಲಿ" (2:16), ಸಭೆಯಲ್ಲಿ (1:22, 23) ಮರುಸಂಧಾನಮಾಡಲ್ಪಟ್ಟರು. ಆದ್ದರಿಂದ, ಅವರು ಕ್ರಿಸ್ತನ ದೇಹದ ಮರುಸಂಧಾನವೂ ಮತ್ತು ರಕ್ಷಿಸಲ್ಪಟ್ಟರೂ ಆದರು. ಪೌಲನು ಮಾತನಾಡಿದಂಥ "ದೇಹಕ್ಕೆ ರಕ್ಷಕನಾಗಿದ್ದಾನೆ" ಎಂಬುದರ ಅರ್ಥವು ಇದೇ ಆಗಿದೆ. ಕ್ರಿಯಾಪದವಾದ *estin*, "ಇರುವದು" ಎಂದು ಭಾಷಾಂತರವಾಗಿದ್ದು ವಾಸ್ತವದಲ್ಲಿ ಸಂಭವಿಸುವಂಥದ್ದನ್ನು ಸೂಚಿಸುವಂಥದ್ದಾಗಿದೆ. ಇದು ಸಭೆಯು ಕೇವಲ ನಿತ್ಯತ್ವದಲ್ಲಿನ ಕ್ರೈಸ್ತನನ್ನು ಮಾತ್ರ ರಕ್ಷಿಸುವುದಿಲ್ಲ, ಆದರೆ ಈಗ ಯಾರು ರಕ್ಷಣೆಯನ್ನು ಹೊಂದಿಲ್ಲವೂ ಅವರಿಗೂ ಅನ್ವಯಿಸಲ್ಪಟ್ಟಿದೆ ಎಂಬ ವಾಸ್ತವವನ್ನು ಪ್ರಮಾಣಿಸುವುದಾಗಿದೆ.

**ವಚನ 24.** ಪೌಲನು ತನ್ನ ವಿವರಣೆಯತ್ತ ತಿರುಗುತ್ತಾನೆ. ಒಬ್ಬ ವ್ಯಾಖ್ಯಾನಕಾರರು ಹೀಗೆ ಬರೆಯುತ್ತಾನೆ,

> ಕ್ರಿಸ್ತನಿಗೆ ಸಭೆಯ ಅಧೀನವಾಗುವಿಕೆಯಲ್ಲಿ ಲೇಖಕನ ಯೋಚನೆಯು ಒಳಗೊಂಡಿದೆಯೇ ಎಂದು ಒಬ್ಬನು ಕೇಳಿದ್ದಾದರೆ, ಉಳಿದ ಪತ್ರದಲ್ಲಿ ಕ್ರಿಸ್ತನೊಡನೆಯ ಸಭೆಯ

ಸಂಬಂಧವನ್ನು ಆತನು ವರ್ಣಿಸಿದಂಥ ರೀತಿಯನ್ನು ಒಬ್ಬನು ಉತ್ತರಕ್ಕಾಗಿ ನೋಡಬಹುದು. ಕ್ರಿಸ್ತನನ್ನು ದೇವರ ವರವಾಗಿ ಪಡದಂತೆಯೇ ಅದರ ಪ್ರಕಾರ ಎಲ್ಲದರ ಮೇಲೆ ತಲೆಯನ್ನಾಗಿ ಪಡೆದಿದೆ (1:22). 2:20, 21ರಲ್ಲಿನ ಕಟ್ಟಡದ ಉದಾಹರಣೆಯು ಸಭೆಯು ಕ್ರಿಸ್ತನನ್ನು ತನ್ನ ಕಟ್ಟಡದ [ಮೂಲೆ] ಕಲ್ಲಾಗಿ ಮತ್ತು ಎಲ್ಲವನ್ನು ತನ್ನ ಅಧೀನದಲ್ಲಿ ಒಂದಾಗಿ ಇರಿಸಿಕೊಂಡಿರುವುದು ಎಂಬುದಾಗಿ ನೋಡುತ್ತಿದೆ. ಆತನ ನಿರಂತರ ಪ್ರಸನ್ನತೆಗಾಗಿ ಅದು ತಾನೆ ತೆಕೆಯುವಂಥದ್ದಾಗಿದೆ (3:17) ಮತ್ತು ಆತನ ಎಲ್ಲವನ್ನೂ ಒಳಗೊಂಡ ಪ್ರೀತಿಯನ್ನು ತಿಳಿದುಕೊಳ್ಳುವಂಥದ್ದಾಗಿದೆ (3:19). ಸಭೆಯು ಆತನ ಕೃಪೆಯ ವರವನ್ನು (4:7) ಮತ್ತು ತನ್ನ ಉನ್ನತ್ತಿಯನ್ನು ಹೊಂದುವದಕ್ಕಾಗಿ ಸೇವಕರುಗಳ ವರವನ್ನು ಪಡೆದುಕೊಂಡಿದೆ (4:11, 12). ತನ್ನ ತಲೆಯತ್ತ ಬೆಳೆಯುವುದಾಗಿದೆ ಮತ್ತು ಬೆಳವಣಿಗೆಗೆ ಅವಶ್ಯವಾದದೆಲ್ಲವನ್ನೂ (4:15, 16) ಆತನ ಬಗೆಗೆ ಬೋಧಿಸುವುದಕ್ಕೆ ಅವಶ್ಯವಾದದ್ದನ್ನು ಒಳಗೊಂಡು ಎಲ್ಲವನ್ನೂ ಪಡೆಯುವಂಥದ್ದಾಗಿದೆ (4:20, 21). ಸಭೆಯು ಕ್ರಿಸ್ತನ ಪ್ರೀತಿಯನ್ನು ಅನುಕರಿಸುವುದಾಗಿದೆ (5:2) ಮತ್ತು ಯಾವುದು ಆತನನ್ನು ಸಂತುಷ್ಟಿಗೊಳಿಸುವದು ಅದನ್ನು ಕಲಿಯಲು (5:10) ಮತ್ತು ಆತನ ಚಿತ್ತವನ್ನು ಅರಿತುಕೊಳ್ಳಲು ಪ್ರಯತ್ನಿಸುತ್ತದೆ (5:17). ಆತನಿಗೆ ಸ್ತೋತ್ರವನ್ನು ಹಾಡುತ್ತದೆ (5:19) ಮತ್ತು ಆತನಿಗೆ ಭಯದಿಂದ ಜೀವಿಸುತ್ತದೆ (5:21). ಸಭೆಯ ಅಧೀನತ್ವ ಎಂದರೆ, ತಲೆಯತ್ತ ನೋಡುವದು ಅಂದರೆ ಆತನ ಪ್ರಯೋಜನಕರ ಆಡಳಿತಕ್ಕಾಗಿ ಜೀವಿಸುವದು, ಆತನ ಪ್ರಸನ್ನತೆ ಮತ್ತು ಪ್ರೀತಿಯನ್ನು ಅನುಭವಿಸುವದು, ಪ್ರೌಢತೆಯತ್ತ ಬೆಳೆಸಲು ಸಮರ್ಥವಾಗುವ ವರಗಳನ್ನು ಆತನಿಂದ ಪಡೆಯುವದು, ಮತ್ತು ಆತನಿಗೆ ಕೃತಜ್ಞತೆಯನ್ನು ಪ್ರತಿಕ್ರಯಿಸುವದು ಎಂಬರ್ಥವಾಗಿದೆ. ಇಂಥ ಭಾವನೆಗಳನ್ನು ಸ್ತ್ರೀಯು ತನ್ನ ಗಂಡನ ಸಂಬಂಧದಲ್ಲಿ ಬೆಳೆಸಿಕೊಳ್ಳಬೇಕೆಂದು ಪ್ರೇರೇಪಿಸುವುದಾಗಿದೆ.[21]

**ಸಭೆಯು ಕ್ರಿಸ್ತನಿಗೆ ಹೇಗೆ ಅಧೀನವಾಗಿದೆಯೋ ಹಾಗೆಯೇ ಸ್ತ್ರೀಯರೇ**, ನೀವು ಕರ್ತನಿಗೆ ಹೇಗೋ ಹಾಗೆಯೇ ನಿಮ್ಮನಿಮ್ಮ ಗಂಡಂದಿರಿಗೆ **ಅಧೀನರಾಗಿರ್ರಿ** ಎಂದು ಪೌಲನು ಘೋಷಿಸುವವನಾಗಿದ್ದಾನೆ. ಸ್ತ್ರೀಯರ ಅಧೀನವಾಗುವಿಕೆಯಲ್ಲಿ ಯಾವುದೇ ಬೇರೊಂದನ್ನಾಗಲೀ ಅಥವಾ ಯಾವುದೇ ಮಿತಿಯನ್ನಾಗಲೀ ಇಟ್ಟಿಲ್ಲದಿರುವಿದಿಲ್ಲ, ಕ್ರಿಸ್ತನಿಗೆ ವಿಧೇಯವಾಗುವಲ್ಲಿ ಎದುರಿಸುವ ಕೆಲ ತಿಕ್ಕಾಟಗಳಲ್ಲಿ ಅವಶ್ಯವಿರುವ ಬಲವನ್ನು ಸ್ತ್ರೀಯರಿಗೆ ಗಂಡಂದಿರಿಗೆ ಕೊಡಬೇತು ಎಂದು ಸೂಚಿಸಬಹುದು. ಅದರ ಬದಲಾಗಿ, ಆ ಗಂಡಂದಿರು, ಕ್ರಿಸ್ತನ ಹಾಗೆ ತಮ್ಮ ನಡತೆಯನ್ನು ಮಾದರಿಯಾಗಿಸಿಕೊಳ್ಳಬೇಕು, ಕ್ರಿಸ್ತನಿಗೆ ಸಂತುಷ್ಟಿಗೊಳಿಸುವದು ಯಾವದು ಮತ್ತು ಅವರಿಗೆ ಪ್ರಯೋಜನವಾಗುವದು ಯಾವದು ಎಂದು ಮಾತ್ರ ತಮ್ಮ ಹೆಂಡತಿಯರಿಗೆ ಕೇಳಬೇಕು ಎಂದು ಆತನು ಭಾವಿಸುವವನಾಗಿದ್ದಾನೆ. ಸಂಬಂಧಗಳಲ್ಲಿನ ಮುರಿದುಬೀಳುವಿಕೆಗಳು ಮಾನವ ಅಪೂರ್ಣತೆಯ ಕಾರಣದಿಂದ ಇದ್ದು, ಈ ಆದರ್ಶವು ಎಂದಿಗೂ ಕೈಗೆ ಸಿಗುವಂತದ್ದಾಗಿರುವದಿಲ್ಲ. ಹೇಗೋ, ಇಲ್ಲಿನ ಗುರಿಯು ಗಂಡ ಹೆಂಡತಿಯರು ಪ್ರೀತಿಯಲ್ಲಿ ಮತ್ತು ಸ್ವಾರ್ಥರಹಿತತೆಯಲ್ಲಿ ಒಬ್ಬರಿಗೊಬ್ಬರು ಪ್ರತಿಕ್ರಯಿಸುವುದಾಗಿದೆ. ಈ ಗುರಿಯನ್ನು ಮುಂದಿನ ವಚನವು ಬೆಂಬಲಿಸುವುದಾಗಿದೆ.

### ಪುರುಷರೇ: "ಪ್ರೀತಿಸಿರಿ" (5:25-33)

**25ಪುರುಷರೇ, ಕ್ರಿಸ್ತನು ಸಭೆಯನ್ನು ಪ್ರೀತಿಸಿದ ಪ್ರಕಾರವೇ ನಿಮ್ಮ ನಿಮ್ಮ ಹೆಂಡತಿಯರನ್ನು ಪ್ರೀತಿಸಿರಿ. 26ಆತನು ಅದನ್ನು ಪ್ರತಿಷ್ಠೆಪಡಿಸುವುದಕ್ಕಾಗಿ ತನ್ನನ್ನು ಒಪ್ಪಿಸಿಕೊಟ್ಟನು. 27ಅದನ್ನು ಕಳಂಕ ಸುಕ್ಕು ಮುಂತಾದದ್ದೊಂದೂ ಇಲ್ಲದ ಕನ್ನಿಕೆಯೋ ಎಂಬಂತೆ ಪರಿಶುದ್ಧವೂ ನಿರ್ದೋಷವೂ ಮಹಿಮೆಯುಳ್ಳದ್ದೂ ಆಗಿರುವ ಸಭೆಯನ್ನಾಗಿ ತನ್ನೆದುರಿನಲ್ಲಿ**

**ನಿಲ್ಲಿಸಿಕೊಳ್ಳಬೇಕೆಂದು ವಾಕ್ಯೋಪದೇಶ ಸಹಿತವಾದ ಜಲಸ್ನಾನವನ್ನು ಮಾಡಿಸಿ ಶುದ್ಧ ಮಾಡಿದನು. [28]ಹಾಗೆಯೇ ಪುರುಷರು ಸಹ ತನ್ನ ಸ್ವಂತ ಶರೀರವನ್ನು ಪ್ರೀತಿಸಿಕೊಳ್ಳುವ ಪ್ರಕಾರವೇ ತಮ್ಮ ಹೆಂಡತಿಯರನ್ನು ಪ್ರೀತಿಸುವ ಹಂಗಿನವರಾಗಿದ್ದಾರೆ. ತನ್ನ ಹೆಂಡತಿಯನ್ನು ಪ್ರೀತಿಸುವವನು ತನ್ನನ್ನೇ ಪ್ರೀತಿಸಿಕೊಳ್ಳುವವನಾಗಿದ್ದಾನೆ. [29]ಯಾರೂ ಎಂದೂ ಸ್ವಶರೀರವನ್ನು ಹಗೆಮಾಡಿದ್ದಿಲ್ಲ; ಎಲ್ಲರೂ ತಮ್ಮ ಶರೀರಗಳನ್ನು ಪೋಷಿಸಿ ಸಂರಕ್ಷಿಸುತ್ತಾರೆ. [30]ಯಾವ ದೇಹಕ್ಕೆ ನಾವು ಅಂಗಗಳಾಗಿದ್ದೇವೋ ಸಭೆಯೆಂಬ ಆ ದೇಹವನ್ನು ಕ್ರಿಸ್ತನು ಹಾಗೆಯೇ ಪೋಷಿಸಿ ಸಂರಕ್ಷಿಸುತ್ತಾನಲ್ಲಾ. [31]ಇದರ ನಿಮಿತ್ತದಿಂದ ಪುರುಷನು ತಂದೆತಾಯಿಗಳನ್ನು ಬಿಟ್ಟು ತನ್ನ ಹೆಂಡತಿಯನ್ನು ಸೇರಿಕೊಳ್ಳುವನು; ಅವರಿಬ್ಬರೂ ಒಂದೇ ಶರೀರವಾಗಿರುವರು ಎಂದು ಬರೆದದೆ. [32]ನಾನು ಕ್ರಿಸ್ತನಿಗೂ ಸಭೆಗೂ ಇರುವ ಸಂಬಂಧವನ್ನು ಕುರಿತು ಮಾತಾಡುತ್ತಾ ಇದ್ದೇನೆ; ಇದು ವರೆಗೆ ಗುಪ್ತವಾಗಿದ್ದ ಈ ಸತ್ಯಾರ್ಥವು ಬಹು ಗಂಭೀರವಾದದ್ದು. [33]ಅದಿರಲಿ; ನಿಮ್ಮಲ್ಲಿ ಪ್ರತಿ ಪುರುಷನು ತನ್ನನ್ನು ಪ್ರೀತಿಸಿಕೊಳ್ಳುವಂತೆಯೇ ತನ್ನ ಹೆಂಡತಿಯನ್ನೂ ಪ್ರೀತಿಸ ಬೇಕು; ಪ್ರತಿ ಹೆಂಡತಿಯು ತನ್ನ ಗಂಡನಿಗೆ ಭಯಭಕ್ತಿಯಿಂದ ನಡೆದುಕೊಳ್ಳಬೇಕು.**

**ವಚನಗಳು 25, 26.** ಸ್ತ್ರೀಯರಿಂದ ಪುರುಷರತ್ತ ತನ್ನ ದೃಷ್ಟಿಯನ್ನು ಬದಲಾಯಿಸುತ್ತಾ **ನಿಮ್ಮ ನಿಮ್ಮ ಹೆಂಡತಿಯರನ್ನು ಪ್ರೀತಿಸಿರಿ** ಎಂದು ಬರೆಯುತ್ತಾನೆ. ತಮ್ಮ ಗಂಡಂದಿರಿಗೆ ಅಧೀನವಾ ಗುವ ಸ್ತ್ರೀಯರಿಗಿದ್ದ ಆಜ್ಞೆಯು ತಮ್ಮ ಸ್ತ್ರೀಯರ ಬಗೆಗಿನ ಜವಾಬ್ದಾರಿಯೊಡನೆ ವಚನ 25ರಿಂದ 32ರವರೆಗೆ ವಚನದಲ್ಲಿ ಸಮಪಾತಳಿಯತ್ತ ಕಾದುಕೊಳ್ಳಲ್ಪಟ್ಟಿದೆ. ಈ ಪರಿಚ್ಛೇದವು ಎರಡು ಭಾಗವಾಗಿ ವಿಭಾಗಿಸಲ್ಪಟ್ಟಿದೆ. ಮೊದಲ ಭಾಗವು ಗಂಡಂದಿರಿಗೆ ತಮ್ಮ ಹೆಂಡತಿಯರ ಬಗೆಗೆ ಇರುವ ಪ್ರೀತಿಯ ಬಗೆಗೆ ಇರುವ ಪ್ರಬೋಧನೆಯಾಗಿದೆ. ಸಭೆಗೋಸ್ಕರದ ಕ್ರಿಸ್ತನ ಪ್ರೀತಿಯ ಚಿತ್ರಣವನ್ನು ಮಂಡಿಸುವ ಮೂಲಕ ಇದು ಹೇಗಾಯಿತು ಎಂಬುದನ್ನು ಪೌಲನು ತೋರಿಸುವವನಾಗಿದ್ದಾನೆ. ಇಲ್ಲಿ, ಪೌಲನು ಕ್ರಿಸ್ತನು ಸಭೆಯನ್ನು ನೋಡಿಕೊಳ್ಳುವ ಪ್ರಕಾರ ಗಂಡಂದಿರು ತಮ್ಮ ಹೆಂಡತಿಯರನ್ನು, ತಮ್ಮನ್ನು ನೋಡಿಕೊಳ್ಳುವ ಹಾಗೆ ನೋಡಿ ಕೊಳ್ಳಬೇಕು ಎಂದು ಸೂಚಿಸುವವನಾಗಿದ್ದಾನೆ (5:28-32).

ಪ್ರೀತಿಯು ಈ ಪತ್ರದಲ್ಲಿ ಹೊಸದಾದ ವಿಚಾರವಲ್ಲ. ಈ ಹಿಂದೆ ಪೌಲನು ದೇವರ ಪ್ರೀತಿಯನ್ನು (2:4) ಮತ್ತು ಕ್ರಿಸ್ತನ ಪ್ರೀತಿಯನ್ನು (3:19; 5:22) ಸೂಚಿಸಿದ್ದಾನೆ. ನಂತರ ಆತನು ತಿರುಗಿ ಎಫೆಸದವರಿಗೆ ಪ್ರೀತಿಯ ಅದರಂತೆಯೇ ದೇವರ ಮತ್ತು ಕ್ರಿಸ್ತನ ಪ್ರೀತಿಯ ಬಗ್ಗೆ ಮಾತನಾಡುತ್ತಾನೆ (6:23, 24). ಪರಿಗಣನೆಗೆ ಇರುವ ಈ ಪರಿಚ್ಛೇದದ ಅಡಿಯಲ್ಲಿ, ಸಭೆಗೋಸ್ಕರದ ಕ್ರಿಸ್ತನ ಪ್ರೀತಿಯ ಸನ್ನಿವೇಶದಲ್ಲಿ ಹೆಂಡತಿಯರ ಬಗೆಗಿನ ಗಂಡಂದಿರ ಪ್ರೀತಿಯ ಪೌಲನು ಬಗ್ಗೆ ಮಾತನಾಡುತ್ತಿದ್ದಾನೆ.

"ಸ್ತ್ರೀಯರೇ, ನಿಮ್ಮ ಗಂಡಂದಿರನ್ನು ಪ್ರೀತಿಸಿರಿ" ಎಂಬ ವಿಧ್ಯರ್ಥಕವು ಪ್ರಣ ಯಾರ್ಥಕವಾದ ಪ್ರೀತಿಗೆ ಅಥವಾ ಭಾವನಾತ್ಮಕ ರೀತಿಯ ಪ್ರೀತಿಗೆ ಅಪಾರ್ಥವನ್ನು ಉಂಟುಮಾಡಬಹುದು. ಹೇಗೋ, ಪೌಲನು ಈ ವಾಕ್ಯಭಾಗದುದ್ದಕ್ಕೂ ಆ ರೀತಿಯನ್ನು ("ಪ್ರೀತಿ ಒಳ್ಳೆಯತನ") ಬಳಸುವ ಮೂಲಕ ಆತನ ಮನದಲ್ಲಿದ್ದಂಥದ್ದನ್ನು ಸ್ಪಷ್ಟಪಡಿಸಿದ್ದಾನೆ (ನೋಡಿರಿ 5:1, 2). ನಿರ್ಧಾರದ ಪರಿಣಾಮವು ತಮ್ಮ ಹೆಂಡತಿಯರಿಗಾಗಿ ಹೊಂದಿರುವ ಗಂಡಂದಿರ ಪ್ರೀತಿಯಲ್ಲಿ ಅವರಿಗಾಗಿ ಒಳ್ಳೆಯದನ್ನು ಎದುರುನೋಡುವುದಾಗಿದೆ. ಇದು ಅವರಿಗೆ ಸಹಾಯಿಸುವ ನಿರ್ಧಾರವಾ ಗಿದೆ ಹೊರತು ನೋವನ್ನುಂಟುಮಾಡುವುದಲ್ಲ, ಅವರನ್ನು ಉನ್ನತದಲ್ಲಿರಿಸುವುದಾಗಿದೆಯೇ ಹೊರತು ಕಣ್ಣೀರು ತರಿಸುವುದಲ್ಲ, ಅವರನ್ನು ಪ್ರೋತ್ಸಾಹಿಸುವುದಾಗಿಯೇ ಹೊರತು ನಿರಾಶೆ ಮಾಡುವುದಲ್ಲ.

ಹೆಂಡತಿಗಾಗಿ ಪುರುಷರ ಪ್ರೇಮವು ಸಭೆಗೋಸ್ಕದ ಕ್ರಿಸ್ತನ ಪ್ರೀತಿಯ ಎದುರು ಮಾದರಿಯಾಗಿದೆ: **ಕ್ರಿಸ್ತನು ಸಭೆಯನ್ನು ಪ್ರೀತಿಸಿದ ಪ್ರಕಾರ** "ನಿಮ್ಮ ನಿಮ್ಮ ಹೆಂಡತಿಯರನ್ನು

ಪ್ರೀತಿಸಿರಿ.” **ಆತನು ಅದನ್ನು ಪ್ರತಿಷ್ಠೆಪಡಿಸುವುದಕ್ಕಾಗಿ ತನ್ನನ್ನು ಒಪ್ಪಿಸಿಟ್ಟನು.** ಪುರುಷರ ಪ್ರೇಮವು ಕೇವಲ ನಿರ್ಣಾಯಕವಾಗಿರಬೇಕೆಂದಲ್ಲ ಆದರೆ ಸ್ವತ್ಯಾಗವೂ ಅಲ್ಲಿರಬೇಕು. ಜಗತ್ತಿನ ಪಾಪಗಳಿಗೋಸ್ಕರ ಕ್ರಿಸ್ತನು ತನ್ನನ್ನೇ ತಾನು ಒಪ್ಪಿಸಿಕೊಟ್ಟಾಗ, ಆತನು ಸಭೆಯನ್ನು ತನ್ನ ರಕ್ತದಿಂದ ಕೊಂಡುಕೊಂಡನು (ನೋಡಿರಿ ಅಪೊಸ್ತಲರ ಕೃತ್ಯಗಳು 20:28). ತಾನು ಎಂದಿಗೂ ತಿಳಿದಿರುವ ಜಗತ್ತಿಗೆ ಒಪ್ಪಿಸಿಕೊಡುವ ದೊಡ್ಡ ಕಾರ್ಯದ ಮೂಲಕ ತನ್ನ ಬಲಿಯ ಮರಣವನ್ನು ತಾಳಿದನು. ಸಭೆಯನ್ನು ಅಸ್ತಿತ್ವಕ್ಕೆ ತರುವುದಕ್ಕಾಗಿ, ಅದರ ಬೆಳವಣಿಗೆಯನ್ನು ಪೋಷಿಸುವದಕ್ಕಾಗಿ, ಮತ್ತು ಅಂತಿಮವಾಗಿ ಅದನ್ನು ಪರಲೋಕಕ್ಕೆ ತರುವುದಕ್ಕಾಗಿ ಯೇಸು "ತನ್ನನ್ನೇ ಆಕೆಗೆ ಒಪ್ಪಿಸಿಕೊಟ್ಟನು." ಈ ವಿವರಣೆಯು ಸಭೆಯು ಕ್ರಿಸ್ತನ ಕನ್ನಿಕೆ ಮತ್ತು ಕ್ರಿಸ್ತನು ತನ್ನ ಕನ್ನಿಕೆಯ ಯೋಗ್ಯವಾಗಿರುವಿಕೆಗೆ ತ್ಯಾಗಮಾಡದೇ ಇದ್ದರೆ ಅಲ್ಲಿ ಏನೂ ಇರಲಿಲ್ಲ ಎಂದು ಚಿತ್ರಿಸಿದೆ. ಇದೇ ರೀತಿಯಲ್ಲಿ, ಪುರುಷರು ತಮ್ಮ ಹೆಂಡತಿಯರಿಗಾಗಿ ತಮ್ಮನ್ನೇ ಕೊಡುವವರಾಗಿರುತ್ತಾರೆ. ಗಂಡ ಹೆಂಡತಿಯರ ಮಧ್ಯದ ಪರಸ್ಪರ ಗೌರವವು ಕುಟುಂಬಕ್ಕೋಸ್ಕರದ ದೇವರ ಯೋಜನೆಯೊಂದಿಗೆ ಸಾಗಂತ್ಯದಲ್ಲಿನ ತಮ್ಮ ಸಂಬಂಧಕ್ಕೋಸ್ಕರ ಒದಗಿಸುವುದಾಗಿದೆ. ಮದುವೆಗಾಗಿನ ಪೌಲನ ದೃಷ್ಟಿಯ, ಸಂಪೂರ್ಣ ಪ್ರೀತಿಗಾಗಿ ಸಂಪೂರ್ಣ ಒಪ್ಪಿಸಿಕೊಳ್ಳುವಿಕೆಯನ್ನು[22] ಸ್ತ್ರೀಯರು ತಮ್ಮ ಪುರುಷರಿಂದ ಪಡೆಯಬೇಕು ಎಂಬುದೇ ಆಗಿದೆ. Kenneth S. Wuest ರವರು ವಚನ 25ಕ್ಕೆ ಪ್ರಮುಖವಾದ ಟಿಪ್ಪಣಿಯನ್ನು ಸೇರಿಸಿದ್ದಾರೆ:

> ಪುರುಷರು ಹೆಂಡತಿಯರ ಬಗ್ಗೆ ಇತರ ಮೂರು ವಿಧವಾದ ಪ್ರೀತಿಯನ್ನು ಹೊಂದಿದ್ದು, ಅನುರಾಗದ ಪ್ರೀತಿ *(eros),* ಸ್ವತೃಪ್ತಿಯ ಮತ್ತು ಸಂತೃಪ್ತಿಯ ಪ್ರೀತಿ *(stergo),* ಮತ್ತು ಒಲವಿನ ಅಥವಾ ವಾತ್ಸಲ್ಯದ *(phileo)* ಪ್ರೀತಿಯಾಗಿದೆ. ಈ ಎಲ್ಲವುಗಳು *agapao* ಪ್ರೀತಿಯಾದ ಆತ್ಮನಿಂದ ತುಂಬಿದ ಪುರುಷರು ಶುದ್ಧೀಕರಿಸಲ್ಪಟ್ಟವರು ಮತ್ತು ಲಕ್ಷಣದಲ್ಲಿ ಪರಲೋಕದಿಂದ ಮಾಡಲ್ಪಟ್ಟವರೂ ಆಗಿರುವವರಲ್ಲಿ ಪೂರೈಸುವವು ಆಗಿವೆ.[23]

**ವಚನ 27.** ವಚನ 26 ಮತ್ತು 27ರಲ್ಲಿ ಕ್ರಿಸ್ತನು ಸಭೆಗೋಸ್ಕರ ತನ್ನನ್ನೇ ತಾನೇ ಬಲಿಯಾಗಿ ಅರ್ಪಿಸಿದಕ್ಕೆ ಮೂರು ಕಾರಣಗಳನ್ನು ಪೌಲನು ಮುಂದೆ ವಿವರಿಸುತ್ತಾನೆ. ಕೊಡಲ್ಪಟ್ಟ ಪ್ರತಿಯೊಂದು ಕಾರಣಗಳು *hina* ಜೊತೆಗೆ ಎಂದು ಆರಂಭವಾಗುತ್ತಿದ್ದು, ಇದರ ಅರ್ಥವು "ಆ ರೀತಿಯಲ್ಲಿ" ಎಂದಾಗಿದೆ.

ಮೊದಲನೆಯದಾಗಿ, ಕ್ರಿಸ್ತನು ಸಭೆಗಾಗಿ ತನ್ನನ್ನೇ ಕೊಟ್ಟನು ಅದನ್ನು ... **ಪರಿಶುದ್ಧವೂ ನಿರ್ದೋಷವೂ ಮಹಿಮೆಯುಳ್ಳದ್ದೂ ಆಗಿರುವ ಸಭೆಯನ್ನಾಗಿ ತನ್ನೆದುರಿನಲ್ಲಿ ನಿಲ್ಲಿಕೊಳ್ಳಬೇಕೆಂದು ವಾಕ್ಯೋಪದೇಶ ಸಹಿತವಾದ ಜಲಸ್ನಾನವನ್ನು ಮಾಡಿಸಿ ಶುದ್ಧಮಾಡಿದನು.** "ಪರಿಶುದ್ಧ" ([*hagios*, "ಪವಿತ್ರ"] ಎಂಬುದರ ಶಾಬ್ದಿಕ ರೂಪವಾಗಿದೆ) ಎಂಬುದರ ಅರ್ಥವು "ಮೀಸಲು ಬಳಿಕೆಗಾಗಿ ಎತ್ತಿಡಲ್ಪಟ್ಟಿದ್ದು" ಎಂದಾಗಿದೆ.[24] ಈ ಪದವು ಈ ಸಂದರ್ಭಗಳಲ್ಲಿ ಉಪಯೋಗಿತವಾಗಿಲ್ಲದಂತವುಗಳು ಆಗಿದ್ದು ಆದರೆ "ಅಪವಿತ್ರ, ಸಾಮಾನ್ಯವಾದದ್ದು ಅಶುದ್ಧವಾದದ್ದು ಎಂಬರ್ಥದಲ್ಲಿನ ಇನ್ನೊಂದು ಗ್ರೀಕ್ ಪದ *koinos*ದೊಡನೆ ಭಿನ್ನವಾಗಿ ಬಳಸಲ್ಪಟ್ಟಿದೆ.[25] ಇದನ್ನು ಸಂತೃಪ್ತಿಗೊಳಿಸುವ ನಿಟ್ಟಿನಲ್ಲಿ, ಯಾವದು ಅಶುದ್ಧವಾಗಿದೆಯೋ - ಅದು ಜಗತ್ತಗಿದ್ದು - ಅದರಿಂದ ಒಬ್ಬನು ಹೊರಬರಬೇಕು ಅಥವಾ ಬೇರೆಯಾಗಬೇಕು ಮತ್ತು ದೇವರ ಪರಿಶುದ್ಧ ಉದ್ದೇಶಕ್ಕಾಗಿ ಪ್ರತ್ಯೇಕಿಸಿಕೊಳ್ಳಬೇಕು. ಸಭೆಯು ಕ್ರಿಸ್ತನ ರಕ್ತದಿಂದ ಪರಿಶುದ್ಧಗೊಳಿಸಲ್ಪಟ್ಟಂಥ ಜನರಿಂದ ಮಾಡಲ್ಪಟ್ಟಿದ್ದು (1 ಪೇತ್ರ 1:22) ಮತ್ತು "ಕತ್ತಲೆಯೊಳಗಿಂದ [ಅವರನ್ನು] ಕರೆದು ತನ್ನ ಆಶ್ಚರ್ಯಕರವಾದ ಬೆಳಕಿನಲ್ಲಿ ಸೇರಿಸಿದಾತನ ... ಮೀಸಲಾದ ಜನವೂ ದೇವರ ಸ್ವಕೀಯ ಪ್ರಜೆ" (1 ಪೇತ್ರ 2:9) ಆಗಿದೆ. ಸಭೆಯು ಜಗತ್ತಿನೊಳಗಿಂದ ಹೊರಗೆ ಕರೆಯಲ್ಪಟ್ಟಿದ್ದೂ ದೇವರಿಗಾಗಿ ಮೀಸಲಾಗಿಟ್ಟಿದ್ದು

ಆಗಿದೆ. ದೇವರ ಜನರ ಪರಿಶುದ್ಧತೆಯು ಈ ಪತ್ರದಲ್ಲಿ ಹಲವು ಬಾರಿ ಒತ್ತಿಹೇಳ ಲ್ಪಟ್ಟದ್ದೂ ಆಗಿದೆ. ಪೌಲನು ಕ್ರೈಸ್ತರನ್ನು "ದೇವ ಜನರು" ಅಥವಾ "ಪರಿಶುದ್ಧರು" ಎಂದು ಕರೆ ಯುತ್ತಾನೆ (ನೋಡಿರಿ 1:1, 4, 15, 18; 2:19; 3:18; 4:12; 5:3). "ದೇವಜನರು" ಗ್ರೀಕ್ ಪದವಾದ *hagios*ದ ಭಾಷಾಂತರವಾಗಿದೆ. (ನೋಡಿರಿ "ಹೆಚ್ಚಿನ ಅಭ್ಯಾಸಕ್ಕಾಗಿ: ಸಭೆಯ ಶುದ್ಧೀಕರಣ [5:26].")

"ವಾಕ್ಯೋಪದೇಶ ಸಹಿತವಾಗಿ" ಎಂಬುದು *en rhēmati* ದರ ಭಾಷಾಂತರವಾಗಿದ್ದು, ಅಕ್ಷರಸಹ "ವಾಕ್ಯದಲ್ಲಿ" ಎಂದಾಗಿದೆ. ("The" ಎಂಬುದು ಭಾಷಾಂತರಕಾರರಿಂದ ಒದಗಿಸಲ್ಪಟ್ಟಿದ್ದು ಆಗಿದೆ.) ಸಭೆಯನ್ನು ಶುದ್ಧಮಾಡುವದು "ವಾಕ್ಯೋಪದೇಶಸಹಿತವಾದ" ಜಲ ದೀಕ್ಷಾಸ್ನಾನದ ಮೂಲಕ ನೆರವೇರಿಸುವಂಥದ್ದಾಗಿದೆ. "ವಾಕ್ಯ" ಎಂಬುದು ಸುವಾರ್ತಾ ವಾಕ್ಯ ಎಂದು ಸೂಚಿತವಾಗಿದ್ದು ಬೋಧಿಸಲ್ಪಟ್ಟಿದ್ದು ಮತ್ತು ಜನರಿಗೆ ಶುದ್ಧೀಕರಣಕ್ಕೋಸ್ಕರದ ದೀಕ್ಷಾಸ್ನಾನಕ್ಕಾಗಿ ಸೂಚಿಸಲ್ಪಟ್ಟಂಥದ್ದೂ ಆಗಿದೆ. ಇದು ದೀಕ್ಷಾಸ್ನಾನದ ಬಗೆಗಿನ ಮಾತುಗಳನ್ನು ನೆನಪಿಗೆ ತರುವುದಾಗಿದ್ದು ಉದಾಹರಣೆಗೆ "ಪಾಪಕ್ಷಮಾಪಣೆಗೋಸ್ಕರ ಕ್ರಿಸ್ತನ ಅಧಿಕಾರದಿಂದ ತಂದೆಯ, ಮಗನ ಮತ್ತು ಪರಿಶುದ್ಧಾತ್ಮನ ಹೆಸರಿನಲ್ಲಿ ನಾನು ನಿನಗೆ ದೀಕ್ಷಾಸ್ನಾನಕೊಡುತ್ತೇನೆ ಮತ್ತು ಹೀಗೆ ನೀವು ಪರಿಶುದ್ಧಾತ್ಮನ ವರವನ್ನು ಪಡೆಯುವಿರಿ" ಎಂಬುದಾಗಿದೆ (ನೋಡಿರಿ ಮತ್ತಾಯ 28:18, 19; ಅಪೊಸ್ತಲರ ಕೃತ್ಯಗಳು 2:38). ಇದು ದೀಕ್ಷಾಸ್ನಾನದೊಡನೆ ಸಂಬಂಧವಿರುವ ರಕ್ಷಣೆಯ ವಾಗ್ದಾನವನ್ನು ಕೂಡಾ ಇದು ಒಳಗೊಂಡಿರುವು ಆಗಿರಬಹುದು (ಮಾರ್ಕ 16:16). 6:17ರಲ್ಲಿ, "ವಾಕ್ಯ" ಎಂಬುದು "ದೇವರ ವಾಕ್ಯವು" ಮತ್ತು "ಆತ್ಮನ ಕತ್ತಿಯೂ" ಆಗಿದ್ದು ಘೋಷಿಸಲ್ಪಟ್ಟದ್ದು ಆಗಿದೆ (ನೋಡಿರಿ ರೋಮಾಪುರ 10:8, 17; ಇಬ್ರಿಯ 6:5; 1 ಪೇತ್ರ 1:25). ಆತನ ವಾಕ್ಯವು ಶುದ್ಧೀಕರಿಸುವ ಮತ್ತು ಪರಿಶುದ್ಧಗೊಳಿಸುವ ಶಕ್ತಿಯನ್ನು ಹೊಂದಿದೆ (ನೋಡಿರಿ ಯೋಹಾನ 15:3; 17:17), ಹೀಗಾಗಿ ಸಭೆಯನ್ನು ಕ್ರಿಸ್ತನು ವಾಕ್ಯದ ಮೂಲ ದೀಕ್ಷಾಸ್ನಾನದಿಂದ ಶುದ್ಧೀಕರಿಸಿದಾಗ ಸಭೆಯನ್ನು ಶುದ್ಧೀಕರಿಸುವದು ಅವಶ್ಯವೆಂದು ಕಾಣಿಸಿತು, ನೀರು ಮತ್ತು ವಾಕ್ಯ ಎರಡು ಇದರಲ್ಲಿ ಒಳಗೊಂಡಿವೆ.

*Hina*ದ ಎರಡನೆಯ ಬಳಿಕೆಯು ಮತ್ತು ಎರಡನೆಯ ಉದ್ದೇಶಕ್ಕೋಸ್ಕರ ಕ್ರಿಸ್ತನು ತನ್ನನ್ನೇ ಕೊಟ್ಟಂಥದ್ದು ವಚನ 27ರಲ್ಲಿ ಸಿಕ್ಕುವುದಾಗಿದೆ: **ಅದನ್ನು ಕಳಂಕ ಸುಕ್ಕು ಮುಂತಾದದ್ದೊಂದು ಇಲ್ಲದ ಕನ್ನಿಕೆಯೋ ಎಂಬಂತೆ** "ಪರಿಶುದ್ಧವೂ ನಿರ್ದೋಷವೂ ಮಹಿಮೆಯುಳ್ಳದ್ದೂ ಆಗಿರುವ ಸಭೆಯನ್ನಾಗಿ ತನ್ನೆದುರಿನಲ್ಲಿ ನಿಲ್ಲಿಕೊಳ್ಳಬೇಕೆಂದು" ತನ್ನ ಸಭೆಯನ್ನು ಶುದ್ಧಕನ್ನಿಕೆಯಂತೆ ತನಗೋಸ್ಕರ ಕ್ರಿಸ್ತನು ಇರಿಸಿಕೊಳ್ಳುತ್ತಿದ್ದಾನೆ. 2 ಕೊರಿಂಥ 11:2ರಲ್ಲಿ ತನ್ನನ್ನು ತಾನು ಪೌಲನು ಕೊರಿಂಥ ಸಭೆಯನ್ನು ಕ್ರಿಸ್ತನಿಗೆ ಪರಿಶುದ್ಧ ಕನ್ನಿಕೆಯಂತೆ ಒಪ್ಪಿಸಲಿರುವ ಕನ್ನಿಕೆಯ ತಂದೆಯಂತೆ ಅಥವಾ ಮದಲಿಂಗನ ಸ್ನೇಹಿತನಂತೆ ಮಾತನಾಡುತ್ತಿದ್ದಾನೆ. ಹೇಗೋ, ಎಫೆಸದ ವೇದಭಾಗದಲ್ಲಿ "ಮಹಿಮೆಯುಳ್ಳ" ಸಭೆಗೆ ತನ್ನನ್ನು ಒಪ್ಪಿಸಿಕೊಳ್ಳುವುದಾಗಿ ಕ್ರಿಸ್ತನು ಹೇಳುತ್ತಾನೆ. "ಮಹಿಮೆ" ಎಂಬುದು *endoxos*ದ ಭಾಷಾಂತರವಾಗಿದ್ದು, "ವಿಫಲವಾದ" ವಿಚಾರಗಳನ್ನು ಹೊತ್ತುಕೊಂಡಂಥ ಈ ಪದವು ಈ ಪತ್ರದಲ್ಲಿ ಸಭೆಯನ್ನು ಸೂಚಿಸುವೆಲ್ಲಡೆ ಬಳಿಕೆಯಾಗಿದೆ.[26] ಸಭೆಯು ಮಹಿಮಾಯುತ ಸ್ವಾಸ್ಥ್ಯವನ್ನು ಹೊಂದಿದೆ (1:18), ಮತ್ತು ಸಭೆಯು ದೇವರಿಗೆ ಮಹಿಮೆಯನ್ನು ತರುವುದಾಗಿದೆ (3:21). ವಚನ 27ರಲ್ಲಿ "ಮಹಿಮೆ" ಸಭೆಯು "ನೀತಿಯುಕ್ತವಾದ"[27] ವಸ್ತ್ರ ಹೊದ್ದ ಶುದ್ಧ ಕನ್ನಿಕೆಯಂತೆ ಎಂಬ ವಿವರಣೆಯನ್ನು ಸೇರಿಸುವುದಾಗಿದೆ.

"ಕಳಂಕ ಸುಕ್ಕು ಮುಂತಾದದ್ದೊಂದು ಇಲ್ಲದ" ಎಂಬುದು ಮುಂದಿನ ಪದದಲ್ಲಿ "ಮಹಿಮೆ" ಎಂಬ ಪದದೊಡನೆ ವ್ಯತ್ಯಾಸವಾಗಿ ಬಳಸಲ್ಪಟ್ಟಿದೆ. ಕ್ರಿಸ್ತನ ಕನ್ನಿಕೆಯು ನೀತಿವಮತಳೂ ಆಗಿದ್ದು ಕಳಂಕ, ತೋಜೋವಧೆ ಅಥವಾ ವಿರುಪ ಇಲ್ಲದವಳೂ ಆಗಿರುತ್ತಾಳೆ. ಪ್ರಾಚೀನ ಮದುವೆಯ ಅಭ್ಯಾಸದ ಪ್ರಕಾರ, ಮದಲಿಂಗನು ಕನ್ನಿಕೆಯ ಮನೆಗೆ ಬರುತ್ತಾನೆ, ವಧುದಕ್ಷಿಣೆ

ಕೊಡುತ್ತಾನೆ, ಮತ್ತು ತನ್ನ ಶುದ್ಧ ಕನ್ನಿಕೆಯನ್ನು ಮದುವೆಯಾಗುವುದಕ್ಕೋಸ್ಕರ ಮರಳಿ ಬರುವ ಇಚ್ಛೆಯಿಂದ ಮನೆಗೆ ಮರಳುತ್ತಾನೆ. ಇದೇ ರೀತಿಯಲ್ಲಿ, ಕ್ರಿಸ್ತನು ಇಲ್ಲಿಗೆ ಬಂದನು ಮತ್ತು ವಧುದಕ್ಷಿಣೆಯಾಗಿ "ತನ್ನನ್ನೇ ತಾನು ಕೊಟ್ಟನು" (5:25), ಪರಲೋಕಕ್ಕೆ ಮರಳಿದನು, ಮತ್ತು ತಿರುಗಿ ತನ್ನ ಕನ್ನಿಕೆಗಾಗಿ ಬರಲಿದ್ದಾನೆ. ತನ್ನನ್ನು ತಾನು ಸಭೆಗೆ ಸಮರ್ಪಿಸುವದು ಅಂತ್ಯದ ಸಮಯದಲ್ಲಿ ಸಂಭವಿಸುವುದಾಗಿದೆ. ಇದು ಪೌಲನ 2 ಕೊರಿಂಥ 11:2ರಲ್ಲಿ ಪದಗಳಿಗೆ ಮತ್ತು ಪ್ರಕಟಣೆ 19ರ ಮದುವೆಯ ಔತಣದ ಉದಾಹರಣೆಗೂ ಸರಿಯಾಗುವವು ಆಗಿದೆ.

"ಕಳಂಕ ಸುಕ್ಕು ಮುಂತಾದದ್ದೊಂದೂ ಇಲ್ಲದ ಕನ್ನಿಕೆಯೋ ಎಂಬಂತೆ ಪರಿಶುದ್ಧವೂ ನಿರ್ದೋಷವೂ." ಇದು *hina*ದ ಮೂರನೆಯ ಉಪಯೋಗವೂ ಮತ್ತು ಕ್ರಿಸ್ತನು ಸಭೆಗೋಸ್ಕರ "ತನ್ನನ್ನೇ ಕೊಟ್ಟಂಥ" ಮೂರನೆಯ ಕಾರಣವೂ ಆಗಿದೆ. "ಪರಿಶುದ್ಧವೂ ನಿರ್ದೋಷವೂ" ಎಂಬುದು ಎಫೆಸದವರನ್ನು "ಜಗದುತ್ಪತ್ತಿಗಿಂತ ಮುಂಚೆ" ಕ್ರಿಸ್ತನಲ್ಲಿ ಆರಿಸಿಕೊಳ್ಳುವಲ್ಲಿ ದೇವರ ಉದ್ದೇಶವನ್ನು ತೋರಿಸುವುದಕ್ಕಾಗಿ ಇತ್ತೀಚೆಗೆ ಪೌಲನಿಂದ ಉಪಯೋಗಿಸಲ್ಪಟ್ಟಿದೆ (1:4). ಅವರು "ಆತನ ಮುಂದೆ ಪರಿಶುದ್ಧರೂ ನಿರ್ದೋಷಿಯೂ ಆಗಿರಬೇಕೆಂದು" ಆತನು ಬಯಸಿದ್ದನು. ಅಪರಿಶುದ್ಧತೆ ಮತ್ತು ದೋಷವು ದೇವರನ್ನು ತಿಳಿಯದವರ ಲಕ್ಷಣಗಳು ಆಗಿವೆ, ಆದರೆ ಪರಿಶುದ್ಧತೆ ಮತ್ತು ನಿರ್ದೋಶವು ಸಭೆಯ ಗುಣಗಳು ಆಗಿವೆ. ಆತನು "ತನ್ನನ್ನೇ ಆಕೆಗೆ ಕೊಡುವಂತೆ" ಶಿಲುಬೆಯ ಮೇಲೆ ಸಿಡಿಸಿದ ಕ್ರಿಸ್ತನ ರಕ್ತದ ಮೂಲಕ ಶುದ್ಧತೆಯ ಮಾಡಿ ಸಾಧ್ಯಮಾಡಿದ ಕಾರಣದಿಂದ ಸಭೆಯು "ಪರಿಶುದ್ಧವೂ ಮತ್ತು ನಿರ್ದೋಷವೂ" ಈಗ ಆಗಿದೆ. ಬೆಳಕಿನಲ್ಲಿ ನಡೆಯುವ ಮೂಲಕ ಮತ್ತು ಆ ರಕ್ತದಲ್ಲಿ ಶುದ್ಧಿಯಾಗುವ ಮೂಲಕ (1 ಯೋಹಾನ 1:7) ಸಭೆಯು "ಪರಿಶುದ್ಧವೂ ಮತ್ತು ನಿರ್ದೋಷವೂ" ಆಗಿರುವುದನ್ನು ಮುಂದುವರೆಸುವುದಾಗಿದೆ. ಕ್ರಿಸ್ತನು ತಿರುಗಿ ಬಂದಾಗ, ಆತನು ತನಗೋಸ್ಕರ ಶುದ್ಧಕನ್ನಿಕೆಯನ್ನು ಇರಿಸಿಕೊಳ್ಳುವವನಾಗಿದ್ದಾನೆ. ಸಭೆಯು ರಕ್ತದ ಮೂಲಕ ಶುದ್ಧಿಪಡಿಸಿದ್ದರಿಂದ, ಅದು "ಪರಿಶುದ್ಧವೂ ನಿರ್ದೋಷವೂ" ಆಗಿ ಕಾಣಿಸುವುದಾಗಿದೆ. ಕ್ರಿಸ್ತನ ಸಭೆಯ ಸದಸ್ಯರಾದಂಥವರು - ಆತನ ದೇಹ ಮತ್ತು ಆತನ ಕನ್ಯೆ ಆದಂಥ ನಾವು ಪೌಲನು ಈ ಪತ್ರದಲ್ಲಿ ಮಂಡಿಸಿದ ಬೋಧನೆಯ ಪ್ರಕಾರ ಜೀವಿಸುವವರು ಆಗಿದ್ದೇವೆ.

**ವಚನ 28.** ತಮ್ಮ ಸ್ತ್ರೀಯರಿಗಾಗಿ ಪುರುಷರ ನಿರ್ವಹಣೆಗಳನ್ನು ಪೌಲನು ಪರಿಚಯಿಸಿದಂತೆ, ಪುರುಷರು ತಮ್ಮ ಸ್ತ್ರೀಯರಿಗಾಗಿ ಕಾಳಜಿಯನ್ನು ಹೊಂದಿರುವಂತೆಯೇ ಸಭೆಗಾಗಿನ ಕ್ರಿಸ್ತನ ಪ್ರೀತಿಯನ್ನು ದೃಷ್ಟಾಂತದ ಹಾಗೆ ಆತನು ಬಳಸಿದ್ದಾನೆ. **ಹಾಗೆಯೇ ಪುರುಷರು ಸಹ ತನ್ನ ಸ್ವಂತ ಶರೀರವನ್ನು ಪ್ರೀತಿಸಿಕೊಳ್ಳುವ ಪ್ರಕಾರವೇ ತಮ್ಮ ಹೆಂಡತಿಯರನ್ನು ಪ್ರೀತಿಸುವ ಹಂಗಿನವರಾಗಿದ್ದಾರೆ.** "ಹಾಗೆಯೇ" *houtōs*ದ ಭಾಷಾಂತರವಾಗಿದ್ದು ಮತ್ತು ಯಾವುದನ್ನು ಅನುಸರಿಸುತ್ತದೆ ಎಂಬುದು "ಕ್ರಿಸ್ತನು ಸಭೆಯನ್ನು ಪ್ರೀತಿಸಿ ಮತ್ತು ತಮ್ಮನ್ನೇ ಅವಳಿಗೆ ಕೊಟ್ಟ ಹಾಗೆಯೇ" ಪುರುಷರು ತಮ್ಮ ಸ್ತ್ರೀಯರನ್ನು ಪ್ರೀತಿಸುವ ವಾಸ್ತವವನ್ನು ಸಂಬಂಧಿಸುವದನ್ನು ಸೂಚಿಸುವುದಾಗಿದೆ (5:25). "ಮಾಡಲೇಬೇಕು" ಎಂಬುದು *opheilō*ದ ಭಾಷಾಂತರವಾಗಿದ್ದು, "ನೈತಿಕವಾಗಿ ಅಥವಾ ವೈಯಕ್ತಿಕ ಋಣ"[28] ಎಂಬರ್ಥ ಪದವನ್ನು ಕೊಡುವುದಾಗಿದೆ (ನೋಡಿರಿ ಯೋಹಾನ 13:14). "ತಮ್ಮ ಸ್ವಂತ ಶರೀರ" (5:28) ಎಂದರೆ ಪುರುಷರು "ತಮ್ಮನ್ನು ಪ್ರೀತಿಸಿಕೊಳ್ಳುವ ಹಾಗೆ ತಮ್ಮ ಹೆಂಡತಿಯರನ್ನು ಪ್ರೀತಿಸಬೇಕು" (5:33). S. D. F. Salmond ವ್ಯಾಖ್ಯಾನದಂತೆ,

> "ತಮ್ಮ ಹಾಗೆ" ... ; "ಹಾಗಿರುವದು" [*hōs,* "ಅದರಂತೆ"] ಎಂಬುದರ ಅರ್ಥವು ತನ್ನ ಹೆಂಡತಿಗಾಗಿನ ಪುರುಷನ ಪ್ರೀತಿಯು ಆತನ ತನ್ನ ಸ್ವಂತ ದೇಹದ ಬಗೆಗಿನ ಪ್ರೀತಿಸುವುದಕ್ಕೆ *ಸಮಾನವಾಗಿರುವದು* ಎಂದಲ್ಲ. *Hōs*ವು ತನ್ನದೇ ಆದ *ಗುಣಾತ್ಮಕ* ಬಲವನ್ನು ಹೊಂದಿದ್ದು "ಅದು ಇರುವಂತ," "ಇರುವ ಹಾಗೆ" ಎಂದಾಗಿದೆ. ಪೌಲನು ಈಗಾಗಲೇ ಹೇಳುವ ಹಾಗೆ *ಕ್ರಿಸ್ತನೂ* ಮತ್ತು *ಪುರುಷನೂ* ಪ್ರತಿಯೊಬ್ಬರ

> ತಲೆಯಾಗಿದ್ದಾರೆ ಮತ್ತು ಹಿಂದಿನ ಸಂಬಂಧದಂತೆ ಸಭೆಯು ದೇಹವಾಗಿದೆ, ಹೀಗಾಗಿ ಆ ರೀತಿಯ ಸಂಬಂಧದಲ್ಲಿ ಹೆಂಡತಿಯೂ ಇದ್ದಾಳೆ. ಗಂಡನು ತಲೆಯಾಗಿದ್ದಾನೆ, ಆದ್ದರಿಂದ ಹೆಂಡತಿಯನ್ನು ಪ್ರೀತಿಸುವದು ಆತನ ದೇಹವನ್ನು ಪ್ರೀತಿಸಿಕೊಂಡಂತೆ, ಕ್ರಿಸ್ತನು ಸಭೆಯನ್ನು ತನ್ನ ದೇಹವನ್ನಾಗಿ ಪ್ರೀತಿಸಿಕೊಂಡ ಪ್ರಕಾರವೇ ಆಗಿದೆ. ಗಂಡ ಮತ್ತು ಹೆಂಡತಿಯರು ಒಂದೇ ದೇಹವಾಗಿರುವ ವಿಚಾರವು ಬಹುಶ ಇಲ್ಲಿ ಕಾಣುವುದಾಗಿದೆ.[29]

**ವಚನಗಳು 29, 30.** ನಿಸರ್ಗವು ತೋರಿಸುವ ಹಾಗೆ ಸಾಮಾನ್ಯ ನಿಯಮದ ಪ್ರಕಾರ, ಪುರುಷರು ತಮ್ಮ ತಮ್ಮ ದೇಹವನ್ನು ಅಥವಾ ತಮ್ಮನ್ನು ತಾವು ದ್ವೇಷಿಸಿಕೊಳ್ಳಲಾರರು. ಆದಕಾರಣ, ಹೆಂಡತಿಯರು ಗಂಡಂದಿರ ಜೀವನಕ್ಕೆ ಅವಶ್ಯವಾದ ಅಂಗವಾಗಿದ್ದುದರಿಂದ ಪುರುಷರು ತಮ್ಮ ಹೆಂಡತಿಯನ್ನು ಪ್ರೀತಿಸಬೇಕು ಎಂದು ನಿಸರ್ಗವು ಹೇಳುತ್ತದೆ. ಕ್ರಿಸ್ತನ ತನ್ನ ದೇಹವಾದ ಸಭೆಗೆ ತಲೆಯಾಗಿರುವಂತೆಯೇ ಪುರುಷರು ತಮ್ಮ ಹೆಂಡತಿಯರಿಗೆ ತಲೆಯಾಗಿದ್ದಾರೆ. ಇದಕ್ಕೆ ಸಮಾನವಾದದ್ದು ಯಾವದೂ ಇಲ್ಲದ್ದರಿಂದ, ಪುರುಷನು ತಮ್ಮ ಹೆಂಡತಿರ ಮೇಲಿನ ಯಜಮಾನತ್ವವನ್ನು ತಾಳಿಕೊಳ್ಳಬೇಕು ಎಂದು ಪೌಲನು ಸೂಚಿಸುವವನಾಗಿದ್ದಾನೆ. ಆಗ ಪುರುಷರು ತಮ್ಮ ಹೆಂಡತಿಯನ್ನು ಪ್ರೀತಿಸುವ ಹಾಗೆ ತಮ್ಮನ್ನೇ ಪ್ರೀತಿಸಿಕೊಳ್ಳುತ್ತಾರೆ. **ಸಭೆಯೆಂಬ ಆ ದೇಹವನ್ನು ಕ್ರಿಸ್ತನು ಹಾಗೆಯೇ ಪೋಷಿಸಿ ಸಂರಕ್ಷಿಸಿದ** ಹಾಗೆಯೇ ಪುರುಷರು ತಮ್ಮ ದೇಹವನ್ನು **ಪೋಷಿಸಿ ಸಂರಕ್ಷಿಸುವ** ಹಾಗೆ, ಆತನು ತನ್ನ ಹೆಂಡತಿಯನ್ನೂ "ಪೋಷಿಸಿ ಸಂರಕ್ಷಿಸ" ಬೇಕು.

"ಪೋಷಿಸು" ಇದು *ektrephō*ದ ಭಾಷಾಂತರವಾಗಿದ್ದು *ek* ("ಮೀರಿದ") ಮತ್ತು *trephō* ("ಆಹಾರ ಕೊಡುವ ಮೂಲಕ ಘಟ್ಟಿಯಾಗಿ ಮಾಡುವದು; ಮುಂದೆ, ಆಹಾರಕೊಡುವದು, ಉಪಚರಿಸುವದು, ಪುಷ್ಟಿದಾಯಕ ಮಾಡುವದು") ಎಂಬ ಸಂಯುಕ್ತ ಪದಗಳಿಂದ ಮಾಡಲ್ಪಟ್ಟಿದೆ.[30] ಇದೇ ಮೂಲದ ಪದವು ಮಕ್ಕಳನ್ನು ತರಬೇತುಗೊಳಿಸುವಲ್ಲಿನ ಸಂದರ್ಭದಲ್ಲಿ ಇರುವುದಾಗಿದ್ದು 6:4ರಲ್ಲಿ "ಅವರನ್ನು ಮೇಲಕ್ಕೆ ತರುವದು" ಎಂಬಂಥ ಭಾಷಾಂತರವಾದ ಮೂಲ ಪದವಾಗಿದೆ. ಕ್ರಿಸ್ತನು ದೀಕ್ಷಾಸ್ನಾನದ ಮೂಲಕ ಮತ್ತು ವಾಕ್ಯದ ಮೂಲಕ ಸಭೆಯನ್ನು ಪವಿತ್ರಗೊಳಿಸಲು ಮತ್ತು ಶುದ್ಧಗೊಳಿಸಲು ಕ್ರಿಸ್ತನು ಒದಗಿಸಿದಂತೆ (ನೋಡಿರಿ 5:26), ಮತ್ತು ಸಭೆಯನ್ನು ಪ್ರೌಢತೆಯಲ್ಲಿ ತರುವುದಕ್ಕಾಗಿ ಆತನು ಒದಗಿಸಿದಂತೆ (4:11-16), ಹೀಗೆ ಪುರುಷರು ತಮ್ಮ ಹೆಂಡತಿಯರಿಗೆ ಅವರ ಅಭಿವೃದ್ಧಿಯಲ್ಲಿ ಸಹಾಯಿಸಬೇಕು.

"ಸಂರಕ್ಷಿಸು" ಇದು ತಾಪದಿಂದ ಅಥವಾ ಹೃದಯವಂತಿಕೆಯ ಜೊತೆ ಮಾಡುವುದಾಗಿದೆ.[31] ಇದೇ ರೀತಿಯ ಪದವು 1 ಥೆಸಲೋನಿಕ 2:7ರಲ್ಲಿ ಆರೈಕೆ ಮಾಡುವ ತಾಯಿಯು ತನ್ನ ಸ್ವಂತ ಮಕ್ಕಳಿಗೆ ತೆಗೆದುಕೊಳ್ಳುವ ಕಾಳಜಿಗೋಸ್ಕರ ಮಾತನಾಡುವುದಕ್ಕಾಗಿ ಬಳಸಲ್ಪಟ್ಟಿದೆ. "ಸಂರಕ್ಷಿಸು" ಸಭೆಗೋಸ್ಕರ ಕಾಳಜಿಯಲ್ಲಿನ ಕ್ರಿಸ್ತನ ಒಳ್ಳೆಯತನವನ್ನೂ ವರ್ಣಿಸುವುದಾಗಿದೆ ಮತ್ತು ಅದು ಪುರುಷರು ತಮ್ಮ ಸ್ತ್ರೀಯರ ಬೆಳವಣಿಗೆಯನ್ನೂ ಅಭಿವೃದ್ಧಿಯನ್ನೂ ಒಳ್ಳೆಯತನದಿಂದ ಮತ್ತು ಪ್ರೀತಿಯಿಂದ ಅವರು ಪ್ರೋತ್ಸಾಹಿಸಲೇಬೇಕು ಎಂಬುದನ್ನು ನೆನಪಿಸುವುದಾಗಿದೆ.

**ಯಾವ ದೇಹಕ್ಕೆ ನಾವು ಅಂಗಗಳಾಗಿದ್ದೇವೋ** ಎಂಬುದು ತಮ್ಮ ಕಾಳಜಿ ಮಾಡುವ ಮತ್ತು ತನ್ನ ದೇಹದಂತೆ ಅವರಿಗೆ ಅವಶ್ಯವಿರುವದನ್ನು ಕೊಡುವ ಯೇಸು ಕ್ರಿಸ್ತನ ಜೊತೆ ಪ್ರೀತಿಯ ಸಂಬಂಧದಲ್ಲಿ ಇದ್ದಾರೆ ಎಂಬ ವಾಸ್ತವವನ್ನು ಸೂಚಿಸುವುದಾಗಿದೆ. ಇದಕ್ಕೆ ಜೊತೆಯಾಗಿ, ಪುರುಷನು ತನ್ನ ಕನ್ಯೆಗಾಗಿ ಪ್ರೀತಿಯನ್ನೂ ಮತ್ತು ಪೋಷಣೆಯನ್ನು ಒದಗಿಸುವಂತೆಯೇ ಕ್ರಿಸ್ತನು ಸಭೆಯನ್ನು ಕಾಳಜಿಮಾಡುತ್ತಾನೆ. ಪ್ರತಿಯೊಂದು ಅಂಗವೂ ಕ್ರಿಸ್ತನ ದೇಹದ ಪ್ರಮುಖ ಅಂಗವಾಗಿದ್ದು ನಮ್ಮ ಕರ್ತನು "ತನ್ನ ರಕ್ತದ ಮೂಲಕ ಕೊಡಂಥವು ಆಗಿವೆ" (ಅಪೊಸ್ತಲರ ಕೃತ್ಯಗಳು 20:28). ದೇಹವು ಕ್ರಿಸ್ತನಿಗೆ ಮೌಲ್ಯವಾದದ್ದು ಮತ್ತು ಕ್ರಿಸ್ತನ ಭಾಗವೂ

ಆಗಿದೆ. ಆತನು ಭಾಗವಾಗದಂತೆ ಅದರಲ್ಲಿ ಕೂಡಿದ್ದಾನೆ ಮತ್ತು ಅದರ ಅವಶ್ಯಕತೆಗಳನ್ನು ಸಂಪೂರ್ಣಗೊಳಿಸುತ್ತಾನೆ. ಅದೇ ರೀತಿಯಲ್ಲಿ, ಪುರುಷರು ತಮ್ಮ ಸ್ತ್ರೀಯರಿಗೆ ಮೌಲ್ಯಯುತರೂ ಆಗಿದ್ದು ಮತ್ತು ಅವರನ್ನು ಪೋಷಿಸಲು ಮತ್ತು ಸಂರಕ್ಷಿಸಲು ಪ್ರತಿಯೊಂದು ಶ್ರಮವನ್ನು ಮಾಡಬೇಕಾಗಿದೆ.

**ವಚನ 31. ಇದರ ನಿಮಿತ್ತದಿಂದ ತಂದೆತಾಯಿಗಳನ್ನು ಬಿಟ್ಟು ತನ್ನ ಹೆಂಡತಿಯನ್ನು ಸೇರಿಕೊಳ್ಳುವನು; ಅವರಿಬ್ಬರೂ ಒಂದೇ ಶರೀರವಾಗಿರುವರು ಎಂದು ಬರೆದದೆ.** ಈ ವ್ಯಾಖ್ಯೆಯು ಆದಿಕಾಂಡ 2:24ರಿಂದ ಇದ್ದು ಸ್ತ್ರೀ ಪುರುಷರ ಮಧ್ಯದ ಅನ್ಯೋನ್ಯತೆಯ ಕ್ರಿಸ್ತೀಯ ಕಾಳಜಿಯನ್ನು ಅಂತಿಮವಾಗಿ ನೆನಪಿಸುವಂತೆ ಕಾರ್ಯಮಾಡುವುದಾಗಿದೆ. ಗಂಡನು ಹೆಂಡತಿಯನ್ನು "ತನ್ನ ಸ್ವಂತ ಶರೀರದಂತೆ" ಪ್ರೀತಸಬೇಕು ಮತ್ತು ಗಂಡನು ತನ್ನ ಹೆಂಡತಿಯನ್ನು ತಾನು "ತನ್ನನ್ನು" ಪ್ರೀತಿಸಿಕೊಂಡಂತೆ ಪ್ರೀತಿಸಿಕೊಂಡಂತೆ ಪ್ರೀತಿಸಬೇಕು ಎಂದು ಪೌಲನು ಹೇಳುತ್ತಾನೆ (5:28). ಅದಲ್ಲದೇ, "ಯಾರೊಬ್ಬನೂ ತನ್ನ ಸ್ವಂತ ಶರೀರವನ್ನು ದ್ವೇಷಿಸಲಾರನು" ಎಂದೂ ಸಹ ಪೌಲನು ಹೇಳುತ್ತಾನೆ (5:29). ಆದಿಕಾಂಡದ ಹೇಳಿಕೆಯು ವಾಸ್ತವವಾಗಿ ಗಂಡ ಮತ್ತು ಹೆಂಡತಿಯರು "ಒಂದೇ ಶರಿರವಾಗಿರುವದು ಎಂಬುದನ್ನು ಒತ್ತಿ ಹೇಳುತ್ತದೆ.

**ವಚನ 32.** ತಾನು ಅಲಂಕಾರಿಕವಾಗಿ ಮಾಡುತ್ತಿರುವುದನ್ನು ನೆನಪಿಸುತ್ತಾ ಈ ಭಾಗವನ್ನು ಪೌಲನು ಸಮಾರೋಪಿಸುತ್ತಿದ್ದಾನೆ. ಮದುವೆಯ **ಮರ್ಮದ** ಮೂಲಕ ದೇವರು ಗಂಡ ಮತ್ತು ಹೆಂಡತಿಯನ್ನೂ "ಒಂದೇ ದೇಹವಾಗಿ" ಮಾಡಿದನು. ಈ ಮರ್ಮಯುತ ಒಗ್ಗೂಡುವಿಕೆಯು **ಸಭೆಯನ್ನು** ಅರಿತುಕೊಳ್ಳಲು ಸಹಾಯಿಸುವುದಾಗಿದೆ. ದೇವರು **ಕ್ರಿಸ್ತನನ್ನು** ಸಭೆಯ ತಲೆಯನ್ನಾಗಿ, ಕನ್ಯೆಯ ಮದಲಿಂಗನನ್ನಾಗಿ ಮಾಡಿದನು. ಕ್ರೈಸ್ತರು ಕ್ರಿಸ್ತನ ದೇಹವೂ ಮತ್ತು ಕ್ರಿಸ್ತನ ದೇಹವೂ ಮತ್ತು ಕ್ರಿಸ್ತನ ಕನ್ಯೆಯೂ ಆಗಿದ್ದಾರೆ.

**ವಚನ 33.** ಸಭೆಯೊಂದಿಗಿನ ಕ್ರಿಸ್ತನ ಸಂಬಂಧದ ಮರ್ಮವು ಗಂಡ/ಹೆಂಡತಿಯ ಸಂಬಂಧದಲ್ಲಿ ಪ್ರಾಯೋಗಿಕ ಅರ್ಥವನ್ನು ಹೊಂದಿದೆ. **ಅದಿರಲಿ** (*plēn*), ಎಂದು ಪೌಲನು ಬರೆದಾಗ "ಗಂಡ ಮತ್ತು ಹೆಂಡತಿಯರ ಬಗೆಗಿನ ವಿಷಯಕ್ಕೆ ನಾನು ಮರಳುವವನಾಗಿದ್ದೇವೆ" ಎಂದು ಆತನು ಹೇಳುವವನಾಗಿದ್ದಾನೆ. ನಂತರ ಆತನು ಈ ಮಾರ್ಗದರ್ಶನಗಳಿಂದ ಯಾವೊಬ್ಬ ಪುರುಷನು ವಿನಾಯತಿಯನ್ನು ಹೊಂದಲಾರನು ಎಂಬ ಸತ್ಯವನ್ನು ಆತನು ಒತ್ತಿ ಹೇಳುತ್ತಾನೆ. **ಪ್ರತಿ ಪುರುಷನು ... ತನ್ನ ಹೆಂಡತಿಯನ್ನೂ ಪ್ರೀತಿಸಬೇಕು** ಎಂದು ಅಪೊಸ್ತಲನು ಹೇಳುತ್ತಾನೆ. ಅದರಂತೆಯೇ, ಪ್ರತಿ ಹೆಂಡತಿಯು ಅದೇ ರೀತಿಯ ಆಜ್ಞೆಯನ್ನು ಒಳಗೊಂಡಿದ್ದು; **ಪ್ರತಿ ಹೆಂಡತಿಯು ತನ್ನ ಗಂಡನಿಗೆ ಭಯಭಕ್ತಿಯಿಂದ ನಡಕೊಳ್ಳಬೇಕು.** "ಭಯಭಕ್ತಿ" ಗ್ರೀಕ್ ಕ್ರಿಯಾಪದವಾದ *phobeō*ದ ಭಾಷಾಂತರವಾಗಿದೆ. "ಭಯ"[32] ಇದರ ಅರ್ಥವು ಇದು ದಾಸನ ಭಯವಲ್ಲ ಆದರೆ "ಭಕ್ತಿಯ ಭಯ"[33] ಆಗಿದ್ದು ಅದು "ಆಕೆಯ ಗಂಡನ ಯಜಮಾನಿಕೆಯನ್ನು ಸ್ವಾರ್ಥರಹಿತ ಪ್ರೀತಿಯಲ್ಲಿ ತೋರ್ಪಡಿಸುವುದನ್ನು ಗೌರವಿಸುವದು" ಎಂದು ಯೋಗ್ಯವಾದಂಥದ್ದು ಆಗಿದೆ.[34]

## ಹೆಚ್ಚಿನ ಅಧ್ಯನಕ್ಕಾಗಿ:
## ಸಭೆಯ ಶುದ್ಧೀಕರಣ (5:26)

ಎಫೆಸ 5:26ರಲ್ಲಿನ "ಶುದ್ದೀಕರಣ" ಕ್ರಿಸ್ತನ ಒಂದು ಕಾರ್ಯವಾಗಿದೆ. ಇದು ನಿರಂತರವಾದ ಅಥವಾ ಪುನರಾವರ್ತನೆಯ ಕಾರ್ಯವಲ್ಲ. ಜನರು ಎಂದು ಪೌಲನು ಒತ್ತಿ ಹೇಳುತ್ತಿದ್ದಾನೆ.

ಆತನು "ಆಕೆಯನ್ನು ವಾಕ್ಯದ ಜೊತೆಗೆ ನೀರಿನಿಂದ ತೊಳೆಯುವ ಮೂಲಕ ಶುದ್ಧಗೊಳಿಸಿ" ಕ್ರಿಸ್ತನು ಸಭೆಯನ್ನು ಶುದ್ಧಪಡಿಸಿದನು. ಹಿಂದೆ ನಿರ್ದಿಷ್ಟ ಸಮಯದಲ್ಲಿ,

ಸಭೆಯನ್ನು ತೊಳೆಯುವ ಮೂಲಕ ಆಕೆಯನ್ನು ಶುದ್ಧಗೊಳಿಸಿದನು. ("ತೊಳೆಯಲ್ಪಡುವದು" ಎಂಬುದರ ಕ್ರಿಯಾಪದದ ಗುರುತರವಾದ ಭಾಷಾಂತರವಾಗಿದೆ.) "... **ವಾಕ್ಯೋಪದೇಶ ಸಹಿತವಾದ ಜಲಸ್ನಾನವನ್ನು ಮಾಡಿಸಿ"** ಎಂದು ಬರೆಯುವಾಗ ಪೌಲನು ಉಪಮಾತ್ಮಕವಾಗಿ ಯೋಚಿಸಿದ್ದನು ಎಂದು ಪರಿಗಣಿಸುವುದಕ್ಕೆ ಯಾವ ಕಾರಣವೂ ಇಲ್ಲ. ಅಲಂಕಾರಿಕವಾಗಿ, ಸಂಕೇತಾರ್ಥವಾಗಿ, ಅಥವಾ ಉಪಮಾತ್ಮಕವಾಗಿ ಕಾಣುತ್ತವೆ ಎಂಬುದಕ್ಕೆ ಯಾವುದೇ ಸ್ಪಷ್ಟವಾದ ಕಾರಣ ಕಾಣಿಸದೇ ಹೋದರೆ ಅಕ್ಷರ ಸಹ ವಾಕ್ಯದೊಡನೆ ವ್ಯವಹರಿಸುವದು ಸತ್ಯವೇದ ಅಧ್ಯಯನದ ಒಂದು ಉತ್ತಮ ನಿಯಮ ಆಗಿದೆ. ಕ್ರಿಸ್ತನು ಸಭೆಯನ್ನು ನೀರನ್ನು ಒಳಗೊಂಡ ಮತ್ತು "ವಾಕ್ಯವನ್ನು" ಒಳಗೊಂಡಿರುವುದರ ಮೂಲಕ "ತೊಳೆದು" ಶುದ್ಧಿಪಡಿಸಿದನು. ಅಕ್ಷರ ಸಹ "ನೀರು" ತನ್ನ ಜನರಿಗೋಸ್ಕರ ದೇವರ ಯೋಜನೆಯ ಒಂದು ಭಾಗವಾಗಿ ವೇದಭಾಗದುದ್ದಕ್ಕೂ ಸಿಕ್ಕುವುದಾಗಿದೆ.

ಉದಾಹರಣೆಗೆ, ಸ್ನಾನಿಕನಾದ ಯೋಹಾನನು ಯೋರ್ದನ ಹೊಳೆಯಲ್ಲಿ ದೀಕ್ಷಾಸ್ನಾನ ಕೊಡುವುದರ ಮೂಲಕ ಬರಲಿರುವ ಕ್ರಿಸ್ತನಿಗಾಗಿ ಜನರನ್ನು ಸಿದ್ಧಪಡಿಸುತ್ತಿದ್ದನು (ಮತ್ತಾಯ 3:6). ಯೇಸು ಯೋಹಾನನಿಂದ ದೀಕ್ಷಾಸ್ನಾನಮಾಡಿಸಿಕೊಂಡನು ಮತ್ತು ನೀರಿನಿಂದ ಮೇಲಕ್ಕೆ ಬಂದನು (ಮತ್ತಾಯ 3:16). ಯೋಹಾನನು "ಸಲೀಮೂರಿನ ಹತ್ತಿರವಿರುವ ಐನೋನೆಂಬ ಸ್ಥಳದಲ್ಲಿ ... ಹೆಚ್ಚು ನೀರಿದ್ದುದರಿಂದ" ಅಲ್ಲಿ ದೀಕ್ಷಾಸ್ನಾನಮಾಡಿಸುತ್ತಿದ್ದನು (ಯೋಹಾನ 3:23). ದೇವರ ರಾಜ್ಯವನ್ನು ಸೇರಬೇಕಾದರೆ ಯೇಸು "ನೀರಿನಿಂದಲೂ ಮತ್ತು ಆತ್ಮನಿಂದಲೂ" ಹುಟ್ಟುವುದರ ಬಗ್ಗೆ ಯೇಸು ಮಾತನಾಡುತ್ತಾನೆ (ಯೋಹಾನ 3:5). ಯೇಸುವಿನ ಸಂದೇಶವನ್ನು ಕೇಳಿದ ನಂತರ, ಐಥಿಯೋಪ್ಯನು ಪೌಲನಿಗೆ "ಅಗೋ ನೀರು, ನನಗೆ ದೀಕ್ಷಾಸ್ನಾನವಾಗಲಿಕ್ಕೆ ಅಡ್ಡಿ ಏನು?" ಎಂದು ಕೇಳಿದನು (ಅಪೊಸ್ತಲರ ಕೃತ್ಯಗಳು 8:36). ತನ್ನ ನಂಬಿಕೆಯ ಅರಿಕೆಯನ್ನು ಮಾಡಿಕೊಂಡ ನಂತರ, ಐಥಿಯೋಪ್ಯನು ಫಿಲಿಪ್ಪನ ಜೊತೆ "ನೀರಿನೊಳಗೆ ಇಳಿದರು ಫಿಲಿಪ್ಪನು ಅವನಿಗೆ ದೀಕ್ಷಾಸ್ನಾನ ಮಾಡಿಸಿದನು" (ಅಪೊಸ್ತಲರ ಕೃತ್ಯಗಳು 8:38). ಪೇತ್ರನು ಕೊರ್ನೇಲ್ಯನನ್ನು ಸುವಾರ್ತೆಗೆ ತೆಗೆದುಕೊಂಡು ಬಂದಾಗ, "ಇವರಿಗೆ ನೀರಿನ ಮೂಲಕ ದೀಕ್ಷಾಸ್ನಾನವಾಗದಂತೆ ಯಾರಾ ದರೂ ಅಭ್ಯಾಂತರ ಮಾಡಿಯಾರೇ" ಎಂದು ಆ ಅನ್ಯನು ಹೇಳಿದನು (ಅಪೊಸ್ತಲರ ಕೃತ್ಯಗಳು 10:47).

ತೀತ 3:5ರಲ್ಲಿ ದೇವರು ನಮ್ಮನ್ನು "ಆತನ ಕರುಣೆಯಲ್ಲಿಯೇ ಪುನರ್ಜನ್ಮವನ್ನು ಸೂಚಿಸುವ ಸ್ನಾನದ ಮೂಲಕವಾಗಿಯೂ ಪವಿತ್ರಾತ್ಮನು ನಮ್ಮಲ್ಲಿ ನೂತನಸ್ವಭಾವವನ್ನು ಉಂಟುಮಾಡುವದರ ಮೂಲಕವಾಗಿಯೂ" ರಕ್ಷಿಸಿದನು ಎಂದು ಹೇಳುವದು ವಚನ 26ರ ಮೇಲಿನ ಉತ್ತಮ ವ್ಯಾಖ್ಯಾನವಾಗಿದೆ. ಕ್ರಿಸ್ತನು "[ಸಭೆಯನ್ನು] ವಾಕ್ಯದಿಂದಾದ ಜಲಸ್ನಾನದ ಮೂಲಕ ಶುದ್ಧಪಡಿಸಿದನು" ಎಂಬುದು ಪುನರ್ಜನ್ಮವನ್ನು ಸೂಚಿಸುವ ಸ್ನಾನದ ಮತ್ತು ಪವಿತ್ರಾತ್ಮನು ನಮ್ಮಲ್ಲಿ ನೂತನ ಸ್ವಭಾವವನ್ನು ಉಂಟುಮಾಡುವುದರ ಮೂಲಕ ರಕ್ಷಿಸುವುದಕ್ಕೆ ಸಮಾನವಾದದ್ದಾಗಿದೆ. ಮನುಕುಲವು "ನೀತಿವಂತಿಕೆಯಿಂದ ನಾವು ಮಾಡಿದ ಕಾರ್ಯಗಳ ಮೇಲೆ ಮಾಡಲ್ಪಟ್ಟಿಲ್ಲ, ಆದರೆ ಆತನ ಕರುಣೆಯಿಂದಲೇ ... ಆತನ ಕೃಪೆಯ ಮೂಲಕ ನಿರ್ಣಯಿಸಲ್ಪಡುವದು ನಿತ್ಯಜೀವದ ನಿರೀಕ್ಷೆಯ ಪ್ರಕಾರ ನಾವು ಬಾಧ್ಯಸ್ಥರಾಗಿ ಮಾಡಲ್ಪಡುತ್ತೇವೆ" (5:5-7) ತೀತ 3ರಲ್ಲಿನ ಸಂದರ್ಭವು ತೋರಿಸುವುದಾಗಿದೆ. ದೇವರ ಕುರಣೆ ಮತ್ತು ಕೃಪೆಯ ಮೂಲಕ, ಸಾಧ್ಯವಾಗುವ ರಕ್ಷಣೆಯನ್ನು ಆತನು ತಂದನು ಮತ್ತು ಈ ರಕ್ಷಣೆಯು "ಪರಿಶುದ್ಧಾತ್ಮನಿಂದ ನೂತನಸೃಷ್ಟಿ ಮತ್ತು ನೂತನವಾಗಿಸುವ ಮೂಲಕ" ಅನರ್ಹನಾದ ಮನುಷ್ಯನ ನಿಜವಾದ ಪ್ರಭುತ್ವವಾಗುತ್ತದೆ.

ಅಲೆಕ್ಸಾಂಡರ್ ಕ್ಯಾಂಪೆಬೆಲ್ ಈ "ಎಲ್ಲಾ ನೂತನಸೃಷ್ಟಿಯಾಗುವದು" (2 ಕೊರಿಂಥ 5:17) ಕ್ರೈಸ್ತನಾಗುವದರ ಅಂತಿಮ ಹಂತ ಎಂದು ಖಂಡಿತವಾಗಿ ಹೇಳುತ್ತಾನೆ.[35] ಆದಿ ಗ್ರೀಕ್

ಸಭೆಯ ತಂದೆಗಳು ಇದನ್ನು ದೀಕ್ಷಾಸ್ನಾನದ ಕಾರ್ಯ ಎಂದು ಅರಿತುಕೊಂಡಿದ್ದರು ತೋರುತ್ತದೆ ಎಂದು ಇತಿಹಾಸಕಾರನಾದ Eusebiusನು ಉದ್ಧರಿ ಸುತ್ತಾನೆ.[36] ಹೆಚ್ಚಾದ ವ್ಯಾಖ್ಯಾನ ಕಾರರು ಇದನ್ನು ಒಪ್ಪುವವರಾಗಿದ್ದಾರೆ. "ನೂತನ ಸೃಷ್ಟಿಯನ್ನಾಗಿಸುವದು" "ನಮ್ಮ ದೇಹವನ್ನು ತಿಳಿನೀರಿನಿಂದ ತೊಳೆದುಕೊಂಡು ... ಇರಿಸುವದು" (ಇಬ್ರಿಯ 10:22) ಅಥವಾ "ನೀರಿನಿಂದ ಹುಟ್ಟುವದಕ್ಕಾಗಿ" (ಯೋಹಾನ 3:5) ಎಂಬುದಕ್ಕೆ ಸಮಾನವಾ ದದ್ದು ಆಗಿದೆ ಎಂದು ಮತ್ತು ಅದು ನೋಹನು ನೀರಿನ ಮೂಲಕ ರಕ್ಷಿಸಲ್ಪಟ್ಟನು, "ದೀಕ್ಷಾಸ್ನಾನವು ಈಗ [ನಮ್ಮನ್ನು] ರಕ್ಷಿಸುವುದಾಗಿದೆ" (1 ಪೇತ್ರ 3:21) ಎಂದು ಕ್ಯಾಂಪೆಬೆಲ್ ಪ್ರತಿಪಾದಿಸುವವನಾಗಿದ್ದಾನೆ. "ಪರಿಶುದ್ಧಾತ್ಮನಿಂದ ನೂತನ ವಾಗುವಿಕೆಯ ಮೂಲಕ" ಎಫೆಸ 5:26ರಲ್ಲಿನ "ವಾಕ್ಯದ ಮೂಲಕ ಶುದ್ಧೀಪಡಿಸುವುದಕ್ಕೆ" ಸಮಾನವಾಗಿದ್ದು "ಪರಿಶುದ್ಧಾತ್ಮನ ಪವಿತ್ರತೆ ದೆಸೆಯಿಂದ ಅಥವಾ ವಾಕ್ಯದ ದೆಸೆಯಿಂದ"[37] (ಯೋಹಾನ 15:3) ಎಂದು ಸಹ ಕ್ಯಾಂಪೆಬೆಲ್ ಪ್ರತಿಪಾದಿಸುವವನಾಗಿದ್ದಾನೆ.

1 ಕೊರಿಂಥ 6:11ರಲ್ಲಿ ಎಫೆಸದವರು ದೇವಜನರಾದಂತೆ, ಶುದ್ಧೀ ಕರಿಸಲ್ಪಟ್ಟಂತೆ ಮತ್ತು ತೊಳೆಯಲ್ಪಟ್ಟಂತೆ ಕೊರಿಂಥದವರು ಸಹ "ತೊಳೆಯಲ್ಪಟ್ಟರು" ಮತ್ತು "ದೇವಜನರಾ ದರು" ಎಂದು ಹೇಳುತ್ತಾನೆ. ಎರಡು ಉದಾಹರಣೆಗಳು "ಪಾಪಗಳಿಗಾಗಿನ ಪಶ್ಚಾತ್ತಾಪಕ್ಕಾಗಿ" ನೀರಿನಲ್ಲಿನ ದೀಕ್ಷಾಸ್ನಾನ (ಅಪೊಸ್ತಲರ ಕೃತ್ಯಗಳು 2:38), "ಕ್ರಿಸ್ತನಲ್ಲಿ" ಪ್ರವೇಶಿಸುವದು (ರೋಮಾಪುರ 6:3; ಗಲಾತ್ಯ 3:27), ಮತ್ತು "ಒಂದೇ ದೇಹ" ವಾಗಿರುವದು (1 ಕೊರಿಂಥ 12:13) ಆಗಿದೆ. ಇತಿಹಾಸದಲ್ಲಿ ಕೊಟ್ಟಿರುವ ಅಂಶದಂತೆ, ಕ್ರಿಸ್ತನು ಮರಣದಲ್ಲಿ ತನ್ನನ್ನು ತಾನು ಸಭೆಗೋಸ್ಕರ ಕೊಟ್ಟನು. ಆತನ ಸಭೆಯ ಪ್ರತಿಯೊಬ್ಬ ಸದಸ್ಯರೂ ಪಾಪದಿಂದ ಮತ್ತು ಸ್ವಾರ್ಥಕ್ಕಾಗಿ ಸತ್ತುಹೋಗಿದರು, ಮತ್ತು ಕೊಡಲ್ಪಟ್ಟ ಅಂಶದಂತೆ ದೀಕ್ಷಾಸ್ನಾದಲ್ಲಿ ತನ್ನನ್ನು ತಾನು ಕ್ರಿಸ್ತನಿಗಾಗಿ ಕೊಡಬೇಕು. ನಂತರ ಆತನು ಹೊಸ ಜೀವಿತದಲ್ಲಿ ಪುನರುತ್ಥಾನ ಹೊಂದುತ್ತಾನೆ (ನೋಡಿರಿ ರೋಮಾಪುರ 6:4). ಪ್ರತಿಯೊಬ್ಬ ಕ್ರೈಸ್ತನು ವೈಯಕ್ತಿಕವಾಗಿ ಶುದ್ಧಮಾಡಲ್ಪಟ್ಟಾಗ, ಸಭೆ, ಸಭೆಯ ಸದಸ್ಯರು ಶುದ್ಧೀಕರಿಸಲ್ಪಡುತ್ತಾರೆ.

## ಅನ್ವಯ

### ಸರಿಯಾದ ಮಾರ್ಗದಲ್ಲಿ ನಡೆಯುವದು (2:1-10 4:1, 17 5:2, 8, 15)

"ನಡೆಯುವದು" ಜೀವಿಸುವುದಕ್ಕಾಗಿ ಇರುವಂಥ ಅಲಂಕಾರಿ ಭಾಷೆ ಆಗಿದೆ. ಕ್ರೈಸ್ತರಾದ ನಾವು, ಹೇಗೆ ನಡೆಯುತ್ತೇವೆ ಮತ್ತು ಯಾರ ಜೊತೆ ನಡೆಯುತ್ತೇವೆ ಎಂಬುದರ ಬಗ್ಗೆ ಜಾಗರೂಕರಾಗಿರಬೇಕು.

*ನಾವು ಜಗತ್ತಿನ ಪ್ರಕಾರ ನಡೆಯಬಾರದು* (2:2). ಜಗತ್ತಿನ ಪ್ರಕಾರನಡೆಯುವವರು ಕಳೆದುಹೋಗುತ್ತಾರೆ; ಅವರು ಐಹಿಕ ಜಗತ್ತಿಗೆ, ದೇವರಿಂದ ದೂರವಾದ ಜಗತ್ತಿಗೆ ಸಂಬಂಧಪಟ್ಟರೂ ಆಗಿರುತ್ತಾರೆ. ಅವರು ದೇವರ ರಾಜ್ಯಕ್ಕೆ ವಿರುದ್ಧವಾದ ರಾಜ್ಯದ ಭಾಗವಾಗಿರುವರು.

*ನಾವು ಸೈತಾನನ ಪ್ರಕಾರ ನಡೆಯಬಾರದು* (2:2). ಕಳೆದು ಹೋದ ಆತ್ಮಗಳು "ಆಕಾಶದಲ್ಲಿ ಬಲವನ್ನು ಹೊಂದಿದ ರಾಜನೂ" ಮತ್ತು "ಅವಿಧೇಯರಲ್ಲಿ ಈಗ ಕಾರ್ಯಮಾಡುತ್ತಿರುವ ಆತ್ಮದ" ಸೈತಾನನ ಜೊತೆ ಸೇರುತ್ತವೆ. ಅವರ ಜೀವಿತವು ಬಂಡೆದ್ದವರಿಂದ ಆಳಲ್ಪಡುತ್ತವೆ.

*ನಾವು ಕಾಮದಲ್ಲಿ ನಡೆಯಬಾರದು* (2:3). ಕಳೆದುಹೋದ ವ್ಯಕ್ತಿಗಳು ಜೀವಿಸುದಕ್ಕಾಗಿ ದೇವರು ಬಯಸಿದಂತೆ ನಡೆಯದೇ ತಮ್ಮದೇ ಆದ ರೀತಿಯಂತೆ ಜೀವಿಸುವವರಾಗಿರುತ್ತಾರೆ.

*ದೂಷಣೆಗೊಳಗಾದವರ ಜೊತೆ ನಾವು ನಡೆಯಬಾರದು* (2:3). ಕಳೆದುಹೋದವರು

ಆದಾಮನ ಸ್ವಭಾವದಂತೆ, ಪಾಪಮಯವಾದ "ಮಾನವ ಸ್ವಭಾವದ" ಮತ್ತು ದೇವರ ಕೋಪಕ್ಕೆ ಕಾರಣರು ಆಗಿ ಜೀವಿಸುವವರಾಗಿರುತ್ತಾರೆ. "ದುಷ್ಟತನವನ್ನು ನಡಿಸಿ ಸತ್ಯವನ್ನು ಅಣಗಿಸುವವರಾದ ಮನುಷ್ಯರು ಎಲ್ಲಾ ವಿಧವಾದ ಭಕ್ತಿಹೀನತೆಯ ಮೇಲೆಯೂ ದೇವರ ಕೋಪವು ಪರಲೋಕದಿಂದ ಬರುತ್ತದೆ" ಎಂದು ರೋಮಾಪುರ 1:18 ಎಚ್ಚರಿಸುವುದಾಗಿದೆ.

*ನಾವು ಯೋಗ್ಯವಾದ ರೀತಿಯಲ್ಲಿ ನಡೆಯುವವರಾಗಿರಬೇಕು* (4:1). "ನಾವು ಯಾವುದಕ್ಕಾಗಿ ಕರೆಯಲ್ಪಡಬೇಕೋ ಅದಕ್ಕಾಗಿ [ನಾವು] ಕರೆಯಲ್ಪಟ್ಟಿರುವುದಕ್ಕಾಗಿ" ಕ್ರೈಸ್ತರು ಜೀವಿಸಬೇಕಾಗುವದು ಎಂದು ಪೌಲನು ಒತ್ತಾಯಿಸುವವನಾಗಿದ್ದಾನೆ. ಆತನ ಕೃಪೆ ಮತ್ತು ಮಹಿಮೆಯೊಡನೆ ಜೀವಿಸುವುದನ್ನು ಇಟ್ಟುಕೊಳ್ಳುವದಕ್ಕಾಗಿ ನಾವು ದೇವರ ಪವಿತ್ರವಾದ ಕರೆಯನ್ನು ಪಡೆದಿದ್ದೇವೆ (ನೋಡಿರಿ 1 ಥೆಸಲೋನಿಕ 2:12; 2 ತಿಮೊಥೆ 1:9). ವ್ಯರ್ಥವಾದ ಮನಸ್ಸಿನಿಂದ ನಾವು ನಡೆಯಬಾರದು (4:17). ಕಳೆದುಹೋದವರು ಆತ್ಮೀಕ ನಿರ್ದೇಶವಿಲ್ಲದೇ ಜೀವಿಸುತ್ತಾರೆ. ಕ್ರಿಸ್ತನು ಉದ್ದೇಶದಿಂದ ಜೀವಿಸಿದನು, ಮತ್ತು ನಾವು ಆತನ ಉದಾಹರಣೆಯನ್ನು ಅನುಸರಿಸಿದ್ದಾದರೆ ಆಶೀರ್ವದಿಸಲ್ಪಡುತ್ತೇವೆ (ನೋಡಿರಿ 1 ಪೇತ್ರ 2:21; 3:9).

*ನಾವು ಪ್ರೀತಿಯಲ್ಲಿ ನಡೆಯಬೇಕು* (5:2). ದೇವರ ಪ್ರೀತಿಯಾಗಿದ್ದಾನೆ (1 ಯೋಹಾನ 4) ಮತ್ತು ನಮ್ಮ ಶ್ರೇಷ್ಟವಾದ ಗುರಿಯೆಂದರೆ ನಮ್ಮ ಹೃದಯ ಆತ್ಮ ಮತ್ತು ಮನಸ್ಸಿನಿಂದ ಆತನನ್ನು ಪ್ರೀತಿಸಬೇಕು. ಇದಕ್ಕೆ ಜೊತೆಯಾಗಿ ಇತರರನ್ನು ನಮ್ಮ ಹಾಗೆ ಪ್ರೀತಿಸಬೇಕು (ನೋಡಿರಿ ಮತ್ತಾಯ 22:37-39).

*ನಾವು ಬೆಳಕಿನ ಮಕ್ಕಳಂತೆ ನಡೆಯಬೇಕು* (5:8). "ನಾವು ಬೆಳಕಿನ ಮಕ್ಕಳಾಗಿ" ಇರುವ ಕಾರಣ ಇನ್ನು ಮುಂದೆ "ಕತ್ತಲೆಯಲ್ಲಿ" ನಡೆಯದವರು ಆಗಿರೋಣ.

*ನಾವು ಬುದ್ಧಿವಂತರ ಹಾಗಿರೋಣ* (5:15, 16). ನಾವು ಕರ್ತನ ಸೇವೆಯನ್ನು ಮಾಡುವದಕ್ಕೆ ಸಮರ್ಥಲಿಸುವಾಗ ನಮ್ಮ ದಿನಗಳನ್ನು ಅದರಲ್ಲೇ ಕಳೆಯುವಾ (ನೋಡಿರಿ ಯೋಹಾನ 9:4).

Jay Lockhart

## ಆತ್ಮದಿಂದ ತುಂಬಿದ ಜೀವಿತ (5:18-21)

ಹಳೆಯ ಒಡಂಬಡಿಕೆಯಲ್ಲಿ, ದೇವರು ತನ್ನ ಜನರಿಗಾಗಿ ದೇವಾಲಯವನ್ನು ಹೊಂದಿದ್ದನು; ಹೊಸ ಒಡಂಬಡಿಕೆಯಲ್ಲಿ, ತನ್ನ ದೇವಾಲಯಕ್ಕಾಗಿ ಜನರನ್ನು ಹೊಂದಿದ್ದನು. ಹೊಸ ಹುಟ್ಟಿನ (ದೀಕ್ಷಾಸ್ನಾನ) ಸಮಯದಲ್ಲಿ, ಪ್ರತಿಯೊಬ್ಬ ಕ್ರೈಸ್ತರೂ ಜೀವಿಸುವ ದೇವರಿಗೆ ದೇವಾಲಯವಾಗಿದ್ದರು. ಪಂಚಾಶತ್ತಮದಿನದಂದು, "ನಿಮ್ಮ ಪಾಪಗಳು ಪರಿಹಾರವಾಗು ವದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರೂ ದೇವರ ಕಡೆಗೆ ತಿರುಗಿಕೊಂಡು ಯೇಸು ಕ್ರಿಸ್ತನ ಹೆಸರಿನ ಮೇಲೆ ದೀಕ್ಷಾಸ್ನಾನ ಮಾಡಿಸಿಕೊಳ್ಳಿರಿ, ಆಗ ನೀವು ಪವಿತ್ರಾತ್ಮದಾನವನ್ನು ಹೊಂದುವಿರಿ" ಎಂದು ಪೇತ್ರನು ಹೇಳಿದನು (ಅಪೊಸ್ತಲರ ಕೃತ್ಯಗಳು 2:38). ನಾವು ಹೊಸದಾಗಿ ಹುಟ್ಟಿದ್ದಾದರೆ, ಆಗ ನಾವು ಒಬ್ಬನನ್ನು ಹೊಂದುತ್ತೇವೆ ಅದೇ ದೇವರ ಪವಿತ್ರಾತ್ಮ. ಈ ದಿವ್ಯ ಪ್ರಕ್ರಿಯೆಯು, ದೀಕ್ಷಾಸ್ನಾನದಿಂದ ಆರಂಭವಾಗುತ್ತದೆ; ಕ್ರೈಸ್ತರು ದಿನಂಪ್ರತಿ ದೇವರಾತ್ಮನ ಜೊತೆ ಜೀವಿಸುವವರಾಗಿರುತ್ತಾರೆ.

ಪೌಲನು ಎಫೆಸದವರನ್ನು "ಆತ್ಮನಿಂದ ತುಂಬಿದವರಾಗಿರಿ" ಎಂದು ಬಲಪಡಿಸುತ್ತಾನೆ (5:18). ಇದು ಒಂದು ಆಯ್ಕೆಯಲ್ಲ; ಇದೊಂದು ಆಜ್ಞೆಯಾಗಿದೆ. ಆತ್ಮದಿಂದ ತುಂಬಿರುವದು ಎಂದರೆ ನಾವು ಅತಿಯಾದ ಆತ್ಮದಿಂದ ತುಂಬಿರಬೇಕಾದರೆ ನಾವು ಏನನ್ನಾದರೂ ಮಾಡಬೇಕೆಂದಲ್ಲ; ಇದು ಹೊಸದಾಗಿ ಹುಟ್ಟಿದ ಪ್ರತಿಯೊಬ್ಬ ದೇವರ ಮಗುವಿನ ಜವಾಬ್ದಾರಿಯಾಗಿದೆ. ನಾವು ಆತ್ಮನಿಂದ ತುಂಬಿದವರಾಗಿರಲೇಬೇಕು.

ಈ ದಿವ್ಯ ಕರ್ತವ್ಯವನ್ನು ಸಂಪೂರ್ಣಗೊಳಿಸುವದನ್ನು ನಾವು ಹೇಗೆ ತಿಳಿಯಬೇಕು? ಪ್ರಗತಿಶೀಲರಾಗಿ ಈ ಆತ್ಮದಿಂದ ತುಂಬಿರುವವರ ಗುರುತು ಯಾವವು? ವಚನ 18 ಆಜ್ಞೆಯನ್ನು

ಕೊಡುವದಾಗಿದೆ, ಮತ್ತು ಆತ್ಮದಿಂದ ತುಂಬಿದ ವಿಶ್ವಾಸಿಯನ್ನು ಗುರುತಿಸಲು ಇರುವ ಮೂರು ಲಕ್ಷಣಗಳನ್ನು ಮುಂದಿನ ವಚನವು ಕೊಡುತ್ತದೆ. ಅವುಗಳ ಮೂಲ ಗ್ರೀಕ್ ವೇದಭಾಗದಲ್ಲಿ ಕೃದಂತವಾಗಿ ಸೂಚಿಸಲ್ಪಟ್ಟಿದ್ದು ಆ ಪದಗಳು ನಿರಂತರವಾದ ಕಾರ್ಯವನ್ನು ಸೂಚಿಸುವವು ಆಗಿವೆ.

ಆತ್ಮದಿಂದ ತುಂಬಿದ ಜೀವಿತದ ಗುರುತಿಸಲ್ಪಡುವ ಗುರುತುಗಳು ಯಾವವು?

*ಒಬ್ಬರಿಗೊಬ್ಬರು ಆರಾಧನೆಯಲ್ಲಿ "ಮಾತನಾಡುವದು."* "ಪವಿತ್ರಾತ್ಮಭರಿತರಾಗಿದ್ದು ಕೀರ್ತನೆಗಳಿಂದಲೂ ಆತ್ಮ ಸಂಬಂಧಪದಗಳಿಂದಲೂ ಒಬ್ಬರಿಗೊಬ್ಬರು ಮಾತಾಡಿಕೊಳ್ಳುತ್ತಾ ನಿಮ್ಮ ಹೃದಯಗಳಲ್ಲಿ ಗಾನಮಾಡುತ್ತಾ ಕೀರ್ತನೆಮಾಡುತ್ತಾ ... ಯೇಸು ಕ್ರಿಸ್ತನ ಹೆಸರಿನಲ್ಲಿ ತಂದೆಯಾದ ದೇವರಿಗೆ ಸ್ತೋತ್ರ ಮಾಡಿರಿ" (5:19).

ಗಾನಮಾಡುವದು ದೇವರೆಡೆಗಿನ ನಮ್ಮ ಪ್ರೀತಿಯನ್ನು ಪ್ರತಿಬಿಂಬಿಸುವವು ಆಗಿವೆ; ಇದು ಆರಾಧನೆಯ ಸಲ್ಲಿಸುವಿಕೆ ವ್ಯಕ್ತಪಡುವಿಕೆಯು ಆಗಿದೆ. ಆರಾಧನೆಯ ಸಂತೋಷಪೂರಕ ಭಾಗವು ಆಗಿದೆ. ದೇವರನ್ನು ಸ್ತುತಿಸುವಾಗ ನಮ್ಮ ಸಂತೋಷವು ಹೊರಹೊಮ್ಮುತ್ತದೆ. ನಮ್ಮ ಆತ್ಮಗಳು ಆರಾಧನೆಯಲ್ಲಿ ಮತ್ತು ಉಪಕಾರಸ್ತುತಿಯಲ್ಲಿ ದೇವರನ್ನು ಮತ್ತು ವಿಮೋಚಕನನ್ನು ಕೂಗುತ್ತವೆ.

ಪೌಲನು ಹೇಳುವ ಈ "ಮಾತನಾಡುವದು" ಎಂಬುದು "ಕೀರ್ತನೆಗಳನ್ನು ಮತ್ತು ಗಾನಮಾಡುವದು ಮತ್ತು ಆತ್ಮಸಂಬಂಧ ಹಾಡುಗಳು" ಆಗಿವೆ. ಇಲ್ಲಿ ನಾವು ಯಾವುದನ್ನೂ ಬಲು ಹೆಚ್ಚಾಗಿ ನಾವು ಎಳೆಯಬಾರದು ಮತ್ತು ಅದೇ ಸಮಯದಲ್ಲಿ ಪ್ರತಿಯೊಂದು ಪದಗಳಲ್ಲಿ ಅದರದೇ ಆದ ವಿಶಿಷ್ಟತೆಯು ಇರುವುದಾಗಿದೆ. "ಕೀರ್ತನೆಗಳು" ಹಳೆಯ ಒಡಂಬಡಿಕೆಯ ಕೀರ್ತನೆಗಳು ಆಗಿದ್ದು, ಆದಿ ಸಭೆಯು ಒಂದೇ ಗಾನಪುಸ್ತಕವಾಗಿತ್ತು. ಪೌಲನ ಆಜ್ಞೆಯೆಂದರೆ ದೇವರನ್ನು ಆತನದೇ ಪ್ರೇರಿತವಾದ ಸ್ತೋತ್ರ ಪುಸ್ತಕಗಳಿಂದ ಸ್ತೋತ್ರ ಸಲ್ಲಿಸುವದು ಆಗಿತ್ತು. ನಮ್ಮ ಮನೋಭಾವ ಏನೇ ಆಗಲಿ, ನಮ್ಮ ದುಃಖ ಅಥವಾ ಸಂತೋಷ ಏನೇ ಆಗಿರಲಿ, ನಮ್ಮ ಸಮಸ್ಯೆ ಏನೇ ಆಗಿರಲಿ ಕೀರ್ತನೆಗಳಿಂದ ನಮ್ಮ ಭಾವನೆಗಳನ್ನು ಕೀರ್ತನೆ ಹಾಡುವದರಲ್ಲಿ ನಾವು ಕಂಡುಕೊಳ್ಳಬಹುದು.

"ಕೀರ್ತನೆಗಳು" ದೇವರನ್ನು ನಿರ್ದೇಷಿಸುವ ಸ್ತೋತ್ರಗೀತೆಗಳು ಆಗಿವೆ. ಕೀರ್ತನೆಯು ಕ್ರೈಸ್ತರೇ ಹೊರತಂದ ಕೃತಿಯಾಗಿದ್ದು, ಕೀರ್ತನೆಗಳು ಯೆಹೂದಿ ಧರ್ಮದಿಂದ ಸಭೆಗೆ ಸೇರ್ಪಡಿಸಲ್ಪಟ್ಟಿವೆ.

"ಆತ್ಮೀಕ ಗಾನಗಳು" ನಮ್ಮ ನಂಬಿಕೆಗಳನ್ನು, ಕೃತಜ್ಞತಾಸ್ತುತಿಯನ್ನು ವ್ಯಕ್ತಪಡಿಸುವ ಸಾಮಾನ್ಯವಾದ ಹಾಡುಗಳು ಆಗಿರಬೇಕು. ಇವುಗಳು ಸಂಗೀತಗಳು ಮತ್ತು ಕೀರ್ತನೆಗಳಿಂದ ಹೆಚ್ಚು ವೈಯಕ್ತಿಕವಾಗಿದ್ದು ತಲಮಾರುಗಳಿಂದ ತಲಮಾರಿಗೆ ಕೊಡಲ್ಪಟ್ಟವು ಆಗಿವೆ.

ನಮ್ಮ ಹೃದಯಗಳಿಂದ ಕರ್ತನಿಗೆ ಹಾಡುತ್ತಾ ಮತ್ತು ಗಾನಮಾಡುತ್ತಾ ಇರುವವು ಆಗಿದೆ. "ನಾದವನ್ನು ಮಾಡುವದು" ಎಂಬುದಕ್ಕೆ ಇರುಯ ಗ್ರೀಕ್ ಭಾಷಾಂತರದ ನಿಜವಾದ ಅರ್ಥವು ನಾವು ಆರಾಧನೆಯನ್ನು ಮಾಡುವಾಗ ಹೃದಯಗ ತಂತಿಯನ್ನು ಮುಟ್ಟುವದು ಎಂದಾಗಿದೆ. ಹೃದಯವು ದೇವರಿಗೆ ಸ್ತೋತ್ರವರ್ಪಿಸಲು ನಿಜವಾಗಿ ಕೊಡುವದು ನಮ್ಮ ಅರ್ಥವಾಗಿದೆ.

ಆರಾಧನೆಗಾಗಿನ ನಮ್ಮ ಉದ್ದೇಶವು "ಕರ್ತನಿಗೆ" ಎಂಬುದರಲ್ಲಿ ಕಂಡುಬರುವುದಾಗಿದೆ. ಹಾಡುವದು ನಮ್ಮನ್ನು ನಾವು ಹೊಗಳಿಕೊಳ್ಳುವದು ಅಥವಾ ನಮ್ಮ ಧ್ವನಿಗಳನ್ನು ನಾವು ಹೇಗೆ ಸುಂದರವಾಗಿ ಒಟ್ಟಾಗಿ ಸೇರಿಸಬಹುದು ಎಂದಲ್ಲ. ಕೀರ್ತನೆಗಳಲ್ಲಿ, ಸಂಗಿತಗಳಲ್ಲಿ, ಮತ್ತು ಆತ್ಮೀಕ ಹಾಡುಗಳಲ್ಲಿ ಮಾತನಾಡುವದರ ನಮ್ಮ ಮೂಲ ಉದ್ದೇಶವು ನಮ್ಮ ವಿಮೋಚಕನಿಗೆ ಸಲ್ಲತಕ್ಕ ಗೌರವವನ್ನು ಮತ್ತು ಸ್ತೋತ್ರವನ್ನು ಸಲ್ಲಿಸುವದು ಎಂದಾಗಿದೆ.

*ದೇವರನ್ನು ಸ್ತುತಿಸುವದಕ್ಕಾಗಿ "ಕೃತಜ್ಞತೆ ಸಲ್ಲಿಸುವದು."* "ಯಾವಾಗಲೂ ಎಲ್ಲಾ ಕಾರ್ಯಗಳಿಗೂ ಕರ್ತನಾದ ಯೇಸು ಕ್ರಿಸ್ತನಲ್ಲಿ ತಂದೆಯಾದ ದೇವರಿಗೆ ಉಪಕಾರ

ಸಲ್ಲಿಸಬೇಕು'' (5:20).

ಹಾಡುಗಳು ನಾವು ಯಾವ ರೀತಿಯಲ್ಲಿ ದೇವರಿಗೆ ಸಂಬಂಧಪಟ್ಟಿದ್ದೇವೆ ಎಂದು ತೋರಿಸುವಂತೆ, ಉಪಕಾರಸ್ತುತಿಯು ನಾವು ನಮ್ಮ ಸನ್ನಿವೇಶಗಳಿಗೆ ಹೇಗೆ ಸಂಬಂಧಪಟ್ಟಿದ್ದೇವೆ ಎಂದು ಪ್ರತಿಬಿಂಬಿಸುವವು ಆಗಿವೆ. ನಾವು ಆತ್ಮದಿಂದ ತುಂಬಿಸಲ್ಪಟ್ಟಾಗ, ನಾವು ಪ್ರತಿಯೊಂದಕ್ಕೂ ಕೃತಜ್ಞರಾಗಿರುತ್ತೇವೆ.

ಇದು ಯಾವ ತರದ ಉಪಕಾರಸ್ತುತಿಯು ಆಗಿದೆ? ಅದರ ತನ್ನ ಮಾರ್ಗ ಸೂಚಿಯಲ್ಲಿ ಸರಿಯಾಗಿರುವದು ಆಗಿದೆ: ''ದೇವರಿಗೆ ಉಪಕಾರ ಸಲ್ಲಿಸುವದು ... ತಂದೆಯಾದ ದೇವರಿಗೂ ಕೂಡಾ.'' ಕೆಲ ಜನರು ''ನಾನೂ ಈ ದಿನ ಸುದೈವಿ ಆಗಿದ್ದೆ'' ಎಂದು ಹೇಳಬಹುದು ಆ ಶ್ರೇಯಸ್ಸನ್ನು ನಾವು ದೇವರಿಗೆ ಕೊಡಬೇಕು. ''ಯಾವಾಗಲೂ ಉಪಕಾರ ಸಲ್ಲಿಸುವ ಮೂಲಕ ...'' ನಾವು ಯಾವಾಗಲೂ ಕೃತಜ್ಞತಾ ಪೂರಕವಾಗಿರಬೇಕು.

''... ಎಲ್ಲಾ ಸಂಗತಿಗಳಲ್ಲಿ'' ಎಂದು ಪೌಲನು ಮುಂದುವರೆಸುತ್ತಾನೆ. ನಮ್ಮ ಜೀವಿತದಲ್ಲಿ ಬರುವಂಥ ಒಳ್ಳೆಯ ಸಂಗತಿಗಳಿಗಾಗಿ ನಾವು ಸರಳವಾಗಿ ಸ್ತೋತ್ರವನ್ನು ಸಲ್ಲಿಸುತ್ತೇವೆ. ನಮ್ಮ ಜೀವಿತದಲ್ಲಿ ಕಠಿಣತೆಯು ಬಂದಾಗ ಹೇಗೆ? ಆ ಸಂಗತಿಗಳು ಆ ರೀತಿಯಲ್ಲಿ ಯಾಕೆ ಬರುತ್ತವೆ ಎಂಬುದು ನಮಗೆ ಅರ್ಥವಾಗದು, ಆದರೆ ಅವುಗಳಿಂದ ಹೇಗೋ ಒಳ್ಳೆಯ ಪರಿಣಾಮ ಬರುವದು ಎಂಬುದನ್ನು ನಾವು ಇನ್ನೂ ನಂಬುವವರಾಗಿರುತ್ತೇವೆ.

*ಒಬ್ಬರಿಗೊಬ್ಬರು ವಿನಯಪೂರ್ವಕವಾಗಿ ನಡಕೊಳ್ಳಿರಿ.* ''ಒಬ್ಬರಿಗೊಬ್ಬರು ವಿನಯವುಳ್ಳವರಾಗಿ ನಡಕೊಳ್ಳಿರಿ'' (5:21; NIV).

''ನಡಕೊಳ್ಳಿರಿ'' ಒಬ್ಬರಿಗೊಬ್ಬರ ಸಂಬಂಧದ ಜೊತೆ ಒಳಗೊಂಡಿರುವದು ಆಗಿದೆ. ''ನಡಕೊಳ್ಳಿರಿ'' ಎಂದು ಪೌಲನು ಬರೆಯು ವಾಗ ಇದು ಒಂದು ಮಿಲಿಟರಿ ಪದವಾಗಿ ಉಪಯೋಗವಾಗಿದೆ. ಒಂದು ಸಮಾನವಾದುದರ ಜೊತೆ ತನ್ನನ್ನು ತಾನು ಸಮಾನವಾಗಿ ಇಟ್ಟಿಕೊಳ್ಳುವದು ಎಂಬುದು ಇದರ ಅಕ್ಷರಸಹ ಅರ್ಥವಾ ಗಿದೆ. ತರ್ಕಸಿದ್ಧಾಂತದ ಯಾವುದೇ ಅರ್ಥವ್ಯಾಪ್ತಿಯನ್ನು ಇದು ಹೊಂದಿಲ್ಲ. ದೇವಕುಮಾರನು ದೇವರಿಗೆ ಸಮರ್ಪಿಸಿಕೊಳ್ಳುವದು. ಆತನು ತಂದೆಯಾದ ದೇವರಿಗೆ ಸಂಪೂರ್ಣವಾಗಿ ಸಮಾನನು, ಆದರೆ ಆತನು ತಾನೇ ಸ್ವಯಂಪ್ರೇರಣೆಯಿಂದ ಸಮರ್ಪಿಸಿಕೊಂಡನು.

ಸ್ತ್ರೀಯರು ತಮ್ಮನ್ನು ತಮ್ಮ ಗಂಡಂದಿರಿಗೆ ವಿನಯವುಳ್ಳವರಾಗಿ ಇರಿಸಿಕೊಳ್ಳಬೇಕು - ಆದರೆ ಅದು ಕೇವಲ ತತ್ವದ ಪ್ರಾಯೋಗಿಕವಾಗಿದೆ. ವಿನಯವುಳ್ಳವರಾಗಿರುವ ಅಭ್ಯಾಸವನ್ನು ಕೇವಲ ಯಾರೋ ಒಂದು ಸಾರಿ ಕಲಿಸಿದಂಥವುಗಳು ಅಲ್ಲ. ವಿನಯವುಳ್ಳವರಾಗಿರುವುದು ಪ್ರತಿಯೊಬ್ಬ ಕ್ರೈಸ್ತರಿಗೂ ಆಗಿದೆ. ಕ್ರಿಸ್ತನಲ್ಲಿ ಸಹೋದರ ಮತ್ತು ಸಹೋದರಿಯರಿಗೆ ನಮ್ರವಾಗಿ ಸಮರ್ಪಿಸಿದಂಥ ಅಂಶವು, ಅದೇ ಅಂಶವು ನಾವು ಆತ್ಮನಿಂದ ತುಂಬಿದಂಥದ್ದಾಗಿರಬೇಕು. ಕೆಲ ಸಹೋದರರು ತಮ್ಮ ಕ್ರಿಸ್ತೀಯ ಜೀವಿತದಲ್ಲಿ ಮುಗ್ಗರಿಸುವವರಾಗಿದ್ದಾರೆ ಯಾಕೆಂದರೆ ಅವರು ತಮ್ಮ ಹಕ್ಕುಗಳ ಮೇಲೆ ನಿಂತಿದ್ದರಿಂದಲೇ. ಎಲ್ಲಿಯವರೆಗೆ ಒಬ್ಬನು ತನ್ನ ಹಕ್ಕುಗಳಿಗಾಗಿ ಪ್ರತಿಪಾದಿಸುವರೆಗೆ, ಆತ್ಮನ ನಿಯಂತ್ರಣಕ್ಕೆ ಆತನು ಒಳಗಾಗುವದಿಲ್ಲ. ನಾನು ನಮಗಾಗಿ ಸಾಯುತ್ತೇವೆ (ನೋಡಿರಿ ಗಲಾತ್ಯ 2:20). ಸತ್ತ ವ್ಯಕ್ತಿಗೆ ಯಾವ ಹಕ್ಕಿದೆ?

ಒಬ್ಬ ಕ್ರೈಸ್ತನು ತನ್ನನ್ನು ತಾನು ಇನ್ನೊಬ್ಬ ಕ್ರೈಸ್ತನ ಅಧಿಕಾರದಲ್ಲಿ ಯಾಕೆ ಇಟ್ಟುಕೊಳ್ಳುತ್ತಾನೆ? ಆತನಿಗೆ ಸೇವೆ ಮಾಡಲೆಂದೇ. ಕೆಲ ಜನರಿಗೆ ಆತ್ಮದಿಂದ ತುಂಬಿರಲು ಬಯಸುವವರಾಗಿದ್ದಾರೆ ಆದರೆ ಯಾರಿಗಾದರೂ ಯೇಸು ಕ್ರಿಸ್ತನ ಹೆಸರಿನಲ್ಲಿ ತೊಂದಲೆ ತೆಗೆದುಕೊಂಡು ಸಹಾಯ ಮಾಡಲು ಬಯಸುವುದಿಲ್ಲ. ''ನಮ್ಮನ್ನೇ ಪ್ರಸಿದ್ಧಿಪಡಿಸಿಕೊಳ್ಳದೆ ನಮ್ಮನ್ನು ಯೇಸುವಿನ ನಿಮಿತ್ತ ನಿಮ್ಮ ದಾಸರೆಂತಲೂ ಕ್ರಿಸ್ತಯೇಸುವನ್ನು ಕರ್ತನೆಂತಲೂ ಪ್ರಸಿದ್ಧಿಪಡಿಸುತ್ತೇವೆ'' ಎಂದು ಪೌಲನು ಹೇಳುತ್ತಾನೆ (2 ಕೊರಿಂಥ 4:5). ನಾವು ಪ್ರೀತಿಯಲ್ಲಿ ಒಬ್ಬರಿಗೊಬ್ಬರು ಸೇವೆ ಮಾಡುವವರಾಗಿರಬೇಕು.

"ಒಬ್ಬರಿಗೊಬ್ಬರು ವಿನಯವುಳ್ಳವರಾಗಿ ನಡಕೊಳ್ಳಿರಿ" (5:21; NIV) ಎಂದು ಪೌಲನು ಹೇಳಿದ್ದಾನೆ. ಯೇಸುವಿಗಾಗಿ ನಾವು ಒಬ್ಬರಿಗೊಬ್ಬರು ವಿನಯವುಳ್ಳವರಾಗಿರಬೇಕು. ಯೇಸು ಇತರಿಗೆ ಸೇವೆ ಮಾಡಿದನು; ಆತನು ಒಂದು ಮಾದರಿಯನ್ನು ನಮ್ಮ ಮುಂದೆ ಇರಿಸಿದ್ದಾನೆ. ಆತನ ಆತ್ಮನಿಂದ ತುಂಬಿದವನು ಆತನ ಹಾಗಿರುವನು.

*ಸಮಾರೋಪ.* ನಾವು ಆತ್ಮನಿಂದ ತುಂಬಿದರರಾದಾಗ, ನಮ್ಮನ್ನು ನಡೆಸುತ್ತದೆ ಮತ್ತು ನಿಯಂತ್ರಿಸುವದು ಯಾವುದು ಎಂಬುದನ್ನು ಜಗತ್ತು ನೋಡುವದು. ನಮ್ಮ ಮಾತುಗಳ ಕೃತಜ್ಞತಾಸ್ತುತಿಯ, ಮತ್ತು ನಡಕೊಳ್ಳುವ ಮೂಲಕ ಅವರು ನಮ್ಮನ್ನು ನೋಡುವರು.

## ನಮ್ಮ ಸ್ತೋತ್ರ ಸಲ್ಲಿಸುವಿಕೆ (5:20)

5:20ರಲ್ಲಿ ನಾವು ಓದುವ ಹಾಗೆ, ನಮ್ಮ ಸ್ತೋತ್ರಸಲ್ಲಿಸುವಿಕೆಗೆ ಎಲ್ಲಾ ಮಾರ್ಗದರ್ಶನಗಳು ಒಳಗೊಂಡಿರುವುದನ್ನು ನಾವು ನೋಡುತ್ತೇವೆ:

ನಿರ್ದೇಶನದಲ್ಲಿ ಸರಿಯಾಗಿರುವದು: "... ತಂದೆಯಾದ ದೇವರಿಗೆ ಸ್ತೋತ್ರಸಲ್ಲಿಸಿರಿ."

ನಿರಂತರವಾದ ಸಮಯದಲ್ಲಿ: "ಯಾವಾಗಲೂ ... ಸ್ತೋತ್ರ ಸಲ್ಲಿಸಿರಿ."

ಸಂಪೂರ್ಣವಾದ ಆಯಾಮದಲ್ಲಿ: "ಎಲ್ಲದರಲ್ಲೂ ..."

## ಪರಮಾವಧಿಯ ಮದುವೆ (5:21-33)

ಹೆಚ್ಚಾದ ಮದುವೆಗಳು ಯಾಕೆ ತೊಂದರೆಯಲ್ಲಿ ಇರುತ್ತವೆ? ಮದುವೆಯಲ್ಲಿ ಜೊತೆಯಾಗಿ ಇದ್ದವರಲ್ಲಿ, ದುಂಗುಪಡಿಸುವಂಥ ಶೇಕಡಾವಾರು ದಂಪತಿಗಳ ಮದುವೆಗಳು "ಸಂತೋಷ" ದಾಯರ ಆಗಿರುವುದಿಲ್ಲ ಏಕೆ? ಗಂಡು ಹೆಣ್ಣು ಈ ರೀತಿಯಾಗಿ ತಮ್ಮನ್ನು ಹಂಚಿಕೊಳ್ಳಬೇಕೆಂದು ದೇವರು ಇಟ್ಟಂಥ ಮಾರ್ಗ ಇದಲ್ಲ. ಗಂಡ ಹೆಂಡತಿಯರಿಬ್ಬರೂ ಸಂತೋಷವಾ ಗಿರಬೇಕು ಮತ್ತು ಅವರು ಉತ್ತಮ ಕ್ರೈಸ್ತರಾಗಿರಬೇಕು ಎಂದು ಪ್ರತಿಯೊಂದು ಮದುವೆಯು ವಾತಾವರಣವನ್ನು ಸೃಷ್ಟಿಮಾಡಬೇಕೆಂದು ಬಯಸುತ್ತಾನೆ.

5:21-33ರಲ್ಲಿ, ಪೌಲನು ನಮ್ಮ ಸಂಗಾತಿಯೊಂದಿಗೆ ಸಂತೋಷಕರ ಸಂಬಂಧವನ್ನು ಹೊಂದಿರಲು ಸಹಾಯಿಸುವ ಒಳದೃಷ್ಟಿಯನ್ನು ಕೊಟ್ಟಿದ್ದಾನೆ. ಗಂಡನಿಗಾಗಿನ ದೇವರ ಯೋಜನೆಯು, ಆತನು ತಲೆಯಾಗಿರುವಂತೆಯೇ, ಆತ್ಮೀಯ ನಾಯಕನಾಗಿದ್ದಾನೆ; ಮತ್ತು ಹೆಂಡಿತಿಗಾಗಿನ ಆತನ ಮಾರ್ಗಗಳು ನಂಬಿಗಸ್ತ ನಡೆಯಾಗಿದೆ.

*ಗಂಡಂದಿರಿಗಾಗಿ ದೇವರ ಯಜಮಾನಿಕೆ.*

(1) ಪುರುಷರು ತಲೆಯಾಗಿದ್ದಾನೆ (5:23). ಸ್ತ್ರೀಯರ ನಡಕೊಳ್ಳುವಿಕೆಯ ಬಗ್ಗೆ ಪೌಲನು ಮಾತನಾಡಿದಂತೆ, ಪುರುಷನ ತನ್ನ ಹೆಂಡತಿಯನ್ನು ಆಳುವುದರ ಬಗ್ಗೆ ಒಂದು ಹೇಳಿಕೆಯನ್ನು ಕೊಟ್ಟಿಲ್ಲ. "ಪುರುಷರೇ, ನಿಮ್ಮ ಹೆಂಡತಿಯರು ನಿಮಗೆ ವಿಧೇಯರಾಗಿರುವಂತೆ ಮಾಡಿಕೊಳ್ಳಿರಿ! ಅವರನ್ನು ನಿಮ್ಮ ನಿಯಂತ್ರಣದಲ್ಲಿ ಇಟ್ಟುಕೊಳ್ಳಿರಿ! ಎಂದು ಎಲ್ಲಿಯೂ ಬರೆದಿಲ್ಲ. ದೂರದಿಂದಲೂ ಕೂಡಾ ಇದಕ್ಕೆ ಸಮಾನವಾಗಿರುವ ಪದವನ್ನು ಪೌಲನು ಬರೆದಿಲ್ಲ.

"ಪುರುಷನು ತನ್ನ ಹೆಂಡತಿಯ ತಲೆಯಾಗಿದ್ದಾನೆ" ಎಂಬುದರ ಅರ್ಥವೇನು? ಆತನು ನಾಯಕನು. ಕುಟುಂಬದಲ್ಲಿ ತನ್ನ ಸ್ಥಾನವನ್ನು ಸರಿಯಾಗಿ ಅರಿತುಕೊಳ್ಳದ ಪುರುಷನು ತೊಂದರೆಗೆ ಈಡಾಗುತ್ತಾನೆ. ವಿನಯದ ನಡವಳಿಕೆಯಲ್ಲಿ ತನ್ನ ಹೆಂಡತಿಯನ್ನು ಗದರಿಸಲು ಪ್ರಯತ್ನಿಸುವ ಪುರುಷನಿಗೆ ಕ್ರಿಸ್ತನು ತನ್ನ ಕನ್ಯೆಯನ್ನು, ಸಭೆಯನ್ನು ವಿನಯದ ನಡವಳಿಕೆಯಲ್ಲಿ ಹೇಗೆ ತಂದನು ಎಂದು ಕಂಡುಕೊಳ್ಳುವದು ಅವಶ್ಯವಿದೆ. ಸಭೆಯನ್ನು ಪ್ರೀತಿಸುವ, ಸಭೆಗಾಗಿ ತನ್ನನ್ನು ಈಡುಕೊಡುವದರ ಮೂಲಕ ವಿಧೇಯನಾದನು, ಹೊರತಾಗಿ ಯಾವುದೇ ಆಜ್ಞೆಯನ್ನು ಮಾಡುವದರ ಮೂಲಕ ಅಲ್ಲ. ತನ್ನ ಹೆಂಡತಿಯೊಡನೆ ಹೆಚ್ಚಾದ ಮದುವೆಯನ್ನು ಬಯಸುವ ಒಬ್ಬ ಪುರುಷನು ಕ್ರಿಸ್ತನ ಉದಾಹರಣೆಯನ್ನು ಅನುಸರಿಸುವವನಾಗಿದ್ದಾನೆ.

ಪ್ರಯಾಣಿಸುವಾಗ ಹಕ್ಕುಗಳನ್ನು ಆತನು ಚಲಾಯಿಸಲು ಬಯಸದೇ ಇರಬಹುದು. ಹಾಗಿದ್ದಾಗ್ಯೂ ಕೂಡಾ ಸಂಚಾರ ಸೂಚನೆಗಳ ಪರಸ್ಪರ ಛೇದನೆಗಳು ಆತನ ತಿರುವುಗಳು ಮುಂದುವರೆಯಲಿ ಎಂದು ಸೂಚಿಸುತ್ತಲೇ ಇರುವವು, ತನ್ನ ಹಕ್ಕನ್ನು ಆತನು ಚಲಾಯಿಸಲು ಆತನು ಬಯಸದೇ ಇದ್ದಾಗೇ ಇನ್ನೊಂದು ಬದಿಯಿಂದ ದೊಡ್ಡ ಟ್ರಕ್ ಯಾವುದೇ ಚಿಹ್ನೆಯು ಇಲ್ಲ ತೋರುತ್ತಿಲ್ಲ ಎಂದು ಬರಲುಬಹುದು!

ಕೆಲ ಪುರುಷರು ತಮ್ಮ ಹಕ್ಕುಗಳ ತಪ್ಪಾದ ಮಾರ್ಗಗಳಲ್ಲಿ ಇರುತ್ತಾರೆ. ತಾವು ನಿಯಂತ್ರಿಸಬಹುದು, ತಾವು ಪುರುಷರಾಗಿರಬೇಕು ಮತ್ತು ತಮ್ಮ ಮಾರ್ಗಗಳನ್ನು ಪಡೆಯಲು ತಮ್ಮ ಅಧಿಕಾರವನ್ನು ಪ್ರಯೋಗಿಸಬಹುದು ಎಂದು ಅವರು ತಿಳಿದಿರುತ್ತಾರೆ. ಇದರ ಪರಿಣಾಮವು ಅವರು ತಮ್ಮ ಮದುವೆಯನ್ನು ಮುರಿದುಕೊಳ್ಳುವರು. ಮನೆಯಲ್ಲಿ ದೇವರ ಕೊಟ್ಟ ಪುರುಷನ ಸ್ಥಾನವು ನಿರ್ಧೇಶಕನ ಸ್ಥಾನವಲ್ಲ, ಆದರೆ ಪ್ರೀತಿಯುಳ್ಳ ಒಬ್ಬ ನಾಯಕನ ಸ್ಥಾನವೇ ಆಗಿದೆ.

(2) ಕ್ರಿಸ್ತನು ತಲೆಯಾಗಿರುವಂತೆಯೇ ಪುರುಷನು ಕೂಡಾ ತಲೆಯಾಗಿದ್ದಾನೆ (5:23). ಪುರುಷನು ಹತೋಟಿಯಲಿಲ್ಲದೆ ಹೋದರೆ ಆತನು ತನ್ನ ಮನೆಯನ್ನು ಹೇಗೆ ನಡೆಸಬಲ್ಲನು? “ಕ್ರಿಸ್ತನು” “ಸಭೆಯನ್ನು ನಡೆಸಿದಂತೆ.” “ಅಂತೆ” ಎಂಬ ಚಿಕ್ಕ ಪದವನ್ನು ತೆಗೆದಿರಿ. ಅದೇ ಮೂಲವಾಗಿದೆ. ಮನೆಯ ಪಾರುಪತ್ಯವನ್ನು ಹೊಂದಿರುವ ಪುರುಷನು ಬೈಬಲನ್ನು ಒಂದು ಸಂಘದಂತೆ, ತನ್ನ ಹೆಂಡತಿಗೆ “ವಿಧೇಯಳಾಗಿರು” ಎಂಬುದಕ್ಕೆ ಬಳಸಲಾರನು!

ಯೇಸು ತನ್ನ ಕನ್ಯೆಗೆ ಎಂದಾದರು ವಿಧೇಯಲಾಗಿರುವುದಕ್ಕೆ ಒತ್ತಾಯಿಸಿದಾನೋ? ಆತನು ಹಾಗೆ ಮಾಡಿದ್ದಲ್ಲಿ, ಸಭೆಯು ನಿಶ್ಚಿತವಾಗಿಯೂ ಭಿನ್ನವಾಗಿರುತ್ತಿತ್ತು. ಸತ್ಯದಲ್ಲಿ, ಸಭೆಯ ಅನೇಕ ಸದಸ್ಯರು ಆತನಿಗೆ ವಿಧೇಯರಾಗಿರುವದಿಲ್ಲ. ಯೇಸು ತನ್ನ ಕನ್ಯೆಯನ್ನು ಹೇಗೆ ನಡೆಸುತ್ತಾನೆ? ಆತನು ಆಕೆಗಾಗಿ ಮನವಿಮಾಡಿದನು ಮತ್ತು ಆಕೆಗಾಗಿ ಮರಣಿಸಿದನು; ಆಕೆಗೋಸ್ಕರ ಪ್ರೀತಿಸಿದನು. 5:24ರ ಪ್ರಕಾರ ಸಭೆಯು ಕ್ರಿಸ್ತನಿಗೆ ವಿಧೇಯವಾದಂತೆ ಹೆಂಡತಿಯು ತನ್ನ ಗಂಡನಿಗೆ ಪ್ರತಿಯೊಂದರಲ್ಲೂ ವಿಧೇಯಳಾಗಿರಬೇಕು. ಗಂಡನು ತನ್ನ ನಾಯಕತ್ವದಲ್ಲಿ ಕ್ರಿಸ್ತನು ತನ್ನ ಕನ್ಯೆಗೆ ತೋರಿದ ನಾಯಕತ್ವದ ಮಾದರಿಯನ್ನು ತೋರಿಸಿದಾಗ ಮಾತ್ರ ಸಾಧ್ಯ.

(3) ಕ್ರಿಸ್ತನು ಸಭೆಯನ್ನು ಪ್ರೀತಿಸಿದಂತೆ ಗಂಡನು ಪ್ರೀತಿಸಬೇಕು (5:25).

*ನಿಸ್ವಾರ್ಥ ಪ್ರೀತಿ.* ಕ್ರಿಸ್ತನು ತನ್ನ ಕನ್ಯೆಯಾದ ಸಭೆಯನ್ನು ಎಷ್ಟು ಪ್ರೀತಿಸಿದನು? ಆತನು ಆಕೆಗೋಸ್ಕರ ತನ್ನನ್ನೇ ಕೊಡುವ ಮೂಲಕ ನಿಸ್ವಾರ್ಥತೆಯಿಂದ ಪ್ರೀತಿಸಿದನು. ಕ್ರಿಸ್ತನು ತನ್ನ ಆಶೆ ಮತ್ತು ಅವಶ್ಯಕತೆಯನ್ನು ಮೊದಲು ಇಡಲಿಲ್ಲ. ಆತನು ಹಾಗೆ ಮಾಡಿದ್ದಾದರೆ, ಬಂಗಾರದ ಬೀದಿಯ ಮಹಿಮೆಯ ಅವಕಾಶವನ್ನು ಆತನೆಂದಿಗೂ ಬಿಟ್ಟುಕೊಡುತ್ತಿರಲಿಲ್ಲ. ಬದಲಾಗಿ, ಯೇಸು ತನ್ನ ಕನ್ಯೆಯ ಅವಶ್ಯಕತೆಯನ್ನು ಮೊದಲು ಇಟ್ಟನು. “ಮನುಷ್ಯಕುಮಾರನು ಸೇವೆ ಮಾಡಿಸಿಕೊಳ್ಳುವದಕ್ಕೆ ಬರಲಿಲ್ಲ. ಸೇವೆಮಾಡುವದಕ್ಕೆ ಬರಲಿಲ್ಲ. ಸೇವೆಮಾಡುವುದಕ್ಕೂ ಅನೇಕರನ್ನು ಬಿಡಿಸಿಕೊಳ್ಳುವದಕ್ಕಾಗಿ ಬಂದನು” (ಮಾರ್ಕ 10:45) ಎಂದು ಆತನು ಹೇಳುವಲ್ಲಿ ತನ್ನ ನಿಸ್ವಾರ್ಥ ಪ್ರೀತಿಯನ್ನು ಆತನು ವ್ಯಕ್ತಪಡಿಸಿದ್ದಾನೆ.

ಒಬ್ಬನು ಮನುಷ್ಯನು ಮದುವೆಯಾದಾಗ, ತನ್ನ ಸ್ವಂತದ ಅವಶ್ಯಕತೆಗಳತ್ತ ಕೇಂದ್ರೀಕರಿಸುವ ಹಕ್ಕನ್ನು ಬಿಟ್ಟುಕೊಡುತ್ತಾನೆ. ಆತನು ತನ್ನ ಹೆಂಡತಿಯನ್ನು ಮದುವೆಯಾಗುತ್ತಾನೆ ಮತ್ತು ಅವಳೊಡನೆ ಒಂದೇ ಶರೀರವಾಗಿರುವನು. ನಿರ್ಧಾರಗಳಂತಹ ಸಹಜವಾದವುಗಳನ್ನೂ ಸಹ ತಾನು ಏನನ್ನು ಮಾಡಬಯಸುವದನ್ನು ಇನ್ನು ಮುಂದೆ ಆತನು ಮಾಡಲಾಗದು. ಕ್ರಿಸ್ತನು ತನ್ನನ್ನು ತಾನು ಸಭೆಗೆ ಕೊಟ್ಟನು ಮತ್ತು ಗಂಡನು ತನ್ನನ್ನು ತಾನು ತನ್ನ ಹೆಂಡತಿಗೆ ಕೊಡುತ್ತಾನೆ. ಆಕೆಯ ಯೋಗಕ್ಷೇಮವು ಆತನು ಮಾಡುವ ಪ್ರತಿಯೊಂದು ನಿರ್ಧಾರದ ಹೃದಯಭಾಗವಾಗಿರುತ್ತದೆ. ಆತನು ಅವಳನ್ನು ನಿಸ್ವಾರ್ಥವಾಗಿ ಪ್ರೀತಿಸುತ್ತಾನೆ.

*ಒಂದು ತ್ಯಾಗಪೂರಕ ಪ್ರೀತಿ.* ಕ್ರಿಸ್ತನು ಸಭೆಗಾಗಿ ಮರಣಿಸಿದನು ಎಂದು ಬೈಬಲ್ ಬೋಧಿಸುವದರಿಂದ ಗಂಡನು ಹೆಂಡತಿಯನ್ನು *ತ್ಯಾಗಪೂರಕವಾಗಿ* ಪ್ರೀತಿಸಬೇಕು. ಆತನು ಅಕ್ಷರಸಹ, ನಿಜವಾಗಿಯೂ ಮತ್ತು ಸಂಪೂರ್ಣವಾಗಿ ಹಾಗೆ ಮಾಡಿದ್ದಾನೆ. ಯೇಸು ತನ್ನ ಕನ್ಯೆಯನ್ನು ಆತನು ಆಕೆಗೋಸ್ಕರ "ಮರಣಿಸದೆ" ಪ್ರೀತಿಸಿದ್ದಾದರೆ ಗಂಡನು ತನ್ನ ಹೆಂಡತಿಯನ್ನು ಪ್ರೀತಿಸುತ್ತಿರಲಿಲ್ಲ. ಅಂತೆಯೇ, ಆತನು ತನಗೋಸ್ಕರ ಸಾಯಲೇಬೇಕು. ತನ್ನದೇ ಆದ ಮಾರ್ಗವನ್ನು ಸೂಚಿಸುವದಕ್ಕೋಸ್ಕರ ಆತನು ಮರಣಿಸಲೇಬೇಕು.

ಯೇಸುವು ಮಾತ್ರವೇ ಸಭೆಗೋಸ್ಕರ ಸಾಯಲಿಲ್ಲವೇ, ಆದರೆ ಸಭೆಯು ಸಭೆಯಾಗುವದಕ್ಕಿಂತಲೂ ಮುಂಚೆ ಸದಸ್ಯರು ತಾವಾಗಿಯೇ ಮರಣಿಸಿದರು ಮತ್ತು ಕ್ರಿಸ್ತನ ಮುಂದೆ ಸಜೀವವಾದರು. ಹೆಚ್ಚಾದ ಮನೆಗಳಿಗೆ ಅವಶ್ಯವಾದದ್ದ ಯಾವದು? ಅವರಿಗೆ ಎರಡು ಶವಸಂಸ್ಕಾರ ಮತ್ತು ಒಂದು ಮದುವೆಯೇ! ಒಬ್ಬ ಹೆಂಡತಿ ತನಗಾಗಿ ಸತ್ತಳು; ಒಬ್ಬ ಗಂಡನು ತನಗಾಗಿ ಸತ್ತನು. ಒಬ್ಬ ಗಂಡನು ತನ್ನ ಹೆಂಡತಿಯನ್ನು ತ್ಯಾಗಪೂರಕವಾಗಿ ಪ್ರೀತಿಸಲು ಬಯಸುವವನಾಗಿದ್ದಾನೆ. "ನನ್ನ ಹೆಂಡತಿಗಾಗಿ ಬಿಟ್ಟುಬಿಡುವುದಕ್ಕಿಂತ ಅಮೂಲ್ಯವಾದದ್ದು ಯಾವುದು ಇಲ್ಲ!" ಎಂದು ಆತನು ಹೇಳುತ್ತಾನೆ.

*ಪರಿಶುದ್ಧಗೊಳ್ಳುತ್ತಿರುವ ಪ್ರೀತಿ.* ಅಲ್ಲಿ ಹೆಚ್ಚಾದದ್ದು ಇದೆ. ಯೇಸುವು ಸಹ ತನ್ನ ಕನ್ಯೆಯನ್ನು ಪರಿಶುದ್ಧವಾದ ಪ್ರೀತಿಯಿಂದ ಪ್ರೀತಿಸಿದನು. "ಅದನ್ನು ಕಳಂಕ ಸುಕ್ಕು ಮುಂತಾದದ್ದೊಂದು ಇಲ್ಲದ ಕನ್ನಿಕೆಯೋ ಎಂಬಂತೆ ಪರಿಶುದ್ಧವೂ ನಿರ್ದೋಷವೂ ಮಹಿಮೆಯುಳ್ಳದ್ದೂ ಆಗಿರುವ ಸಭೆಯನ್ನಾಗಿ ತನ್ನೆದುರಿನಲ್ಲಿ ನಿಲ್ಲಿಕೊಳ್ಳಬೇಕೆಂದು ವಾಕ್ಯೋಪದೇಶ ಸಹಿತವಾದ ಜಲಸ್ನಾನವನ್ನು ಮಾಡಿಸಿ ಶುದ್ಧಮಾಡಿದನು ..." (5:26, 27).

ಕ್ರಿಸ್ತನ ಕಾರ್ಯಕ್ಕಾಗಿ ಏನು ಮಾಡಬೇಕು? ಆತನ ಕನ್ಯೆಯನ್ನು ಶುದ್ಧಳನ್ನಾಗಿಯೂ ಸುಂದರಳನ್ನಾಗಿಯೂ ಮಾಡಬೇಕು. ಪ್ರೀತಿಯುಳ್ಳ ನಾಯಕನಾಗಿರಬೇಕಾಗಲು ಆತ್ಮಪೂರಿತನಾದ ಗಂಡನ ಕೆಲಸವೇನು? ತನ್ನ ಹೆಂಡತಿಯನ್ನು ನಳನಳಿಸುವಂತೆ ಸುಂದರ ವ್ಯಕ್ತಿಯನ್ನಾಗಿಸುವದು.

ತಾನು ಅವಳನ್ನು ನಡೆಸುವಂತೆ, ಅವಳಿಗೆ ಬೋಧಿಸುವ, ಮತ್ತು ಆತ್ಮೀಕವಾಗಿ ಅವಳನ್ನು ಸಂರಕ್ಷಿಸುವಂತೆ ಗಂಡನು ತನ್ನ ಹೆಂಡತಿಯನ್ನು ಪರಿಶುದ್ಧಮಾಡಬೇಕು. ಅವಳು ವಾದಿಸಲು ಪ್ರೇರೇಪಿಸುವ ಅಥವಾ ಕೋಪಗೊಳ್ಳುವ ಮತ್ತು ಪಾಪಗಳ ಪರಿಸ್ಥಿತಿಗೆ ರಾಜಿಯಾಗುವಂತಲ್ಲಿ ಆತನು ಆಕೆಯನ್ನು ಎಂದಿಗೂ ಇಡಬಾರದು. ಅವಳು ದೂಷಿತಳಾಗುವಂಥ ಯಾವದನ್ನು ಆತನು ಮಾಡಬಾರದು. ಅವಳ ಜೀವಿತದಲ್ಲಿ ಅಪವಿತ್ರತೆಯನ್ನು ತರುವಂಥ ಯಾವುದರಲ್ಲೂ ಆಕೆಯನ್ನು ಆತನು ಎಂದಿಗೂ ಇರಿಸಬಾರದು. ಆತನು ಆಕೆಯನ್ನು ಪರಿಶುದ್ಧವಾದ ಪ್ರೀತಿ ಯಿಂದ ಪ್ರೀತಿಸುತ್ತಾನೆ.

*ತೃಪ್ತಿಪಡಿಸುವದರ ಪ್ರೀತಿ.* ಆತನ್ನು ತನ್ನ ಹೆಂಡತಿಯನ್ನು ತೃಪ್ತಿಕರವಾದ ಪ್ರೀತಿಯಿಂದ ಸಹ ಪ್ರೀತಿಸುತ್ತಾನೆ: "ಹಾಗೆಯೇ ಪುರುಷರು ಸಹ ತನ್ನ ಸ್ವಂತಶರೀರವನ್ನು ಪ್ರೀತಿಸಿಕೊಳ್ಳುವ ಪ್ರಕಾರವೇ ತಮ್ಮ ಹೆಂಡತಿಯರನ್ನು ಪ್ರೀತಿಸುವ ಹಂಗಿನವರಾಗಿದ್ದಾರೆ" (5:28).

ಒಬ್ಬ ಮನುಷ್ಯನು ತನ್ನ ಸ್ವಂತ ದೇಹದೊಡನೆ ಏನು ಮಾಡುತ್ತಾನೆ? ಅದನ್ನು ಸಂತೃಪ್ತಪಡಿಸಲು ಪ್ರಯತ್ನಿಸುತ್ತಾನೆ. ಅದು ನೀರಡಿಸಿದಾಗ, ಆತನು ನೀರನ್ನು ಕುಡಿಯುತ್ತಾನೆ. ಆತನ ದೇಹವು ಹಸಿದಾಗ, ಆತನು ಆಹಾರವನ್ನು ಕೊಡುತ್ತಾನೆ. ಅದಕ್ಕೆ ನೋವಾದಾಗ, ಆತನು ಅದಕ್ಕೆ ಶುಷ್ರೂಷೆ ಮಾಡುತ್ತಾನೆ. ತನ್ನ ಹೆಂಡತಿಯನ್ನು ಪ್ರೀತಿಸುವದಕ್ಕೆ ಇದೇ ಮಾರ್ಗವಾಗಿದೆ. ಆತನು ಆಕೆಯ ಅವಶ್ಯಕತೆಗಳನ್ನು ಮುಂತಿಳಿದುಕೊಂಡು ನಂತರ ಆ ಅವಶ್ಯಕತೆಗಳನ್ನು ನೀಗಿಸಬೇಕು ಮತ್ತು ಅವಳನ್ನು ಸಂತೃಪ್ತಿಪಡಿಸಬೇಕು. ತನ್ನ ಹೆಂಡತಿಯ ಪ್ರತಿಯೊಂದು ಅವಶ್ಯಕತೆಯನ್ನು ತೃಪ್ತಿಪಡಿಸುವ ಗಂಡನ ಅಧೀನದಲ್ಲಿರುವದಕ್ಕೆ ವಿರುದ್ಧವಾಗಿ ಸ್ತ್ರೀಯರು ಬಂಡೇಳುವುದಿಲ್ಲ.

ಸಮಸ್ಯೆಯೆಂದರೆ ಕೆಲ ಮದುವೆಗಳು ಹೀಗಿರುತ್ತವೆ ಯೆಂದರೆ ಗಂಡನು ತನ್ನ ಹೆಂಡತಿಯನ್ನು ತನ್ನ ಸ್ವಂತ ದೇಹದ ಚಾಚಲ್ಪಟ್ಟ ಭಾಗದಂತೆ ನೋಡುವದಿಲ್ಲ, ಆದರೆ ಆಕೆಯನ್ನು ಒಂದು ದ್ರವ್ಯವೆಂದು ನೋಡುವವನಾಗಿರುತ್ತಾನೆ. ದ್ರವ್ಯವು ಹಳೆಯದಾದಾಗ, ಆತನು ಹೊಸದನ್ನು ಬಯಸುತ್ತಾನೆ. ಇದಕ್ಕೆ ವ್ಯತ್ಯಾಸವಾಗಿ, ಕ್ರಿಸ್ತೀಯ ಗಂಡಂದಿರು ತಮ್ಮ ಹೆಂಡತಿಯೊಂದಿಗೆ ಸಮಯದಲ್ಲಿ, ಆತನ ಅವಳ ಆಂತರ್ಯದ ಸೌಂದರ್ಯವು ವೃದ್ಧಿಯಾಗುವುದನ್ನು ಕಾಣುತ್ತಾನೆ ಮತ್ತು ಆಕೆಯನ್ನು ಪ್ರೀತಿಸುತ್ತಾನೆ ಮತ್ತು ಅವಳನ್ನು ಇನ್ನು ಹೆಚ್ಚಾಗಿ ಕಾಳಜಿಮಾಡುತ್ತಾನೆ. ತನ್ನ ಹೆಂಡತಿಯ ಅವಶ್ಯಕತೆಗಳನ್ನು ನೀಗಿಸದ ಗಂಡಂದಿರು ಆತ್ಮಿಕ ಆತ್ಮಹತ್ಯೆಯನ್ನು ಮಾಡಿಕೊಳ್ಳುವಂತಿದೆ ಯಾಕೆಂದರೆ ಆತನು ಅವಳೊಂದಿಗೆ ಒಂದೇ ದೇಹವಾಗಿರುವನು.

*ಶ್ರೇಷ್ಟವಾದ ಪ್ರೀತಿ.* ಅಂತಿಮವಾಗಿ, ಮದುವೆಯ ಅಭ್ಯಾಸದಲ್ಲಿ, ತನ್ನ ಹೆಂಡತಿಯನ್ನು ಶ್ರೇಷ್ಟವಾದ ಪ್ರೀತಿಯಿಂದ ಪ್ರೀತಿಸತೊಡಗುತ್ತಾನೆ: "ಇದರ ನಿಮಿತ್ತದಿಂದ ತಂದೆತಾಯಿಗಳನ್ನು ಬಿಟ್ಟು ತನ್ನ ಹೆಂಡತಿಯನ್ನು ಸೇರಿಕೊಳ್ಳುವನು; ಅವರಿಬ್ಬರೂ ಒಂದೇ ಶರೀರವಾಗಿರವರು ಎಂದು ಬರೆದದೆ" (5:31).

ಒಬ್ಬ ಮನುಷ್ಯನ ಮದುವೆಯು ಇತರ ಎಲ್ಲಾ ಇಹಾಲೋಕದ ಕಟ್ಟುಗಳಿಗಿಂತ ಮುಂಚೆ ಬರಬಹುದಾಗಿದೆ. ಕ್ರಿಸ್ತನು ಮತ್ತು ಸಭೆಗೆ ಪೌಲನಿಂದ ಹೋಲಿಸಲ್ಪಟ್ಟ ಗಂಡ ಮತ್ತು ಹೆಂಡತಿಯ ಮಧ್ಯದ ಸಂಬಂಧವು, ಉನ್ನತವಾದ ಆತ್ಮೀಕ ಸಂಬಂಧವಾಗಿದೆ. ಉನ್ನತವಾದ ಮಾನವನ ಬಾಂಧವ್ಯವು ತಾಯಿ ಮತ್ತು ಅವಳ ಮಗುವಿನ ಮಧ್ಯದದ್ದಲ್ಲ, ಆದರೆ ಗಂಡ ಮತ್ತು ಹೆಂಡತಿಯ ಮಧ್ಯದ್ದು ಆಗಿದೆ.

*ಸ್ತ್ರೀಯರಿಗಾಗಿ ದೇವರ ಮಾರ್ಗಗಳು.*

(1) ಅವಶ್ಯಕತೆ: "ನೀವು ಕರ್ತನಿಗೆ ಹೇಗೋ ಹಾಗೆಯೇ ನಿಮ್ಮ ನಿಮ್ಮ ಗಂಡಂದಿರಿಗೆ ಅಧೀನರಾಗಿರ್ರಿ ..." (5:22). "ಅಧೀನರಾಗಿರ್ರಿ" ಎಂದರೆ ಒಬ್ಬರು ಇನ್ನೊಬ್ಬರ ಆಧಿನದಲ್ಲಿ ಸ್ವಯಂಪ್ರೇರಿತರಾಗಿ ಅಡಿಯಲ್ಲಿರಿಸುವದು ಆಗಿದೆ. ಹೆಂಡತಿಯು ಇಹಲೋಕದ ಮನಸ್ಸನ್ನು ಹೊಂದಿದ್ದರೆ, ಆಕೆಯು ಗಂಡನಿಗೆ ಅಧೀನವಾಗುವ ತತ್ವದ ವಿರುದ್ಧ ತಿರುಗಿಬೀಳುವಳು. ಜಗತ್ತು ಯೋಚಿಸುವ ರೀತಿಯಲ್ಲಿ ಆಕೆಯು ಹೆಚ್ಚಾಗಿ ಯೋಚಿಸುತ್ತಾ, ಅಧೀನಳಾಗಿರುವದಕ್ಕೆ ಆಕೆಯು ಹೆಚ್ಚಾಗಿ ನಿರಾಕರಿಸುವಳು.

ಆತ್ಮನಿಂದ ತುಂಬಿದ ವ್ಯಕ್ತಿಯು ದೇವರು ಯಾವ ವ್ಯಕ್ತಿಯನ್ನು ಅಧಿಕಾರದಲ್ಲಿ ಇರಿಸಿದಾನೋ ಆತನಿಗೆ ಅಧಿನರಾಗುವ ಮನಸ್ಸನ್ನು ಹೊಂದಿರುತ್ತಾರೆ. "ಅಧಿನನಾಗು" ಈ ಪದವು ಕೇವಲ ಸ್ತ್ರೀಯರಿಗೆ ಮಾತ್ರವಲ್ಲ; ಇದು ಎಲ್ಲಾ ಕ್ರೈಸ್ತರಿಗೂ ಅನ್ವಯಿಸುವುದಾಗಿದೆ. ಮನೆಯಲ್ಲಿ ಸ್ತ್ರೀಯು ತನ್ನ ಗಂಡನಿಗೆ ಅಧಿನವಾಗಿರಬೇಕು ಎಂದು ಬೈಬಲ್ ಹೇಳುತ್ತದೆ.

"ಇಬ್ಬರು ಒಂದು ಕುದುರೆಯ ಮೇಲೆ ಸವಾರಿಮಾಡುತ್ತಿದ್ದರೆ, ಒಬ್ಬನು ಹಿಂದೆ ಕೂರಿತಬೇಕು" ಎಂದು ಶೇಕ್ಸಫಿಯರ್ ಬರೆಯುತ್ತಾನೆ.[38] ಇದು ಕುದುರೆ ಯಜಮಾನಿಕೆಯ ಬಗೆಗಿನ ಕೀಳರಿಮೆಯ ಪ್ರಶ್ನೆಯಲ್ಲ ಆದರೆ ವ್ಯವಹಾರಿಕ ಅಭ್ಯಾಸ ಆಗಿದೆ. ಅದಲ್ಲದೇ, ಮನೆಯಲ್ಲಿ ಇದು ಅಸಮಾನತೆ ಅಥವಾ ಕೀಳರಿಮೆಯ ಪ್ರಶ್ನೆಯು ಆಗುವುದಿಲ್ಲ; ವ್ಯವಹಾರಿಕ ಅಭ್ಯಾಸ. ಹೆಂಡತಿಯು "ಹಿಂದಿನ ಸವಾರಿ" ಎಂದು ದೇವರು ನೇಮಿಸಿದ್ದಾನೆ.

ಹೆಂಡತಿಯರು ತಮ್ಮ ಗಂಡಂದಿರಿಗೆ ಅಧೀನರಾಗಿಲ್ಲದೆ ಹೋದರೆ ಅವರು ಕೇವಲ ಹೊರಗಿನ ತೋರಿಕೆಗೆ ಮಾತ್ರ ವಿಧೇಯರಾಗಿರುತ್ತಾರೆ. ಬೈಬಲಿನ ವಿಧೇಯರಾಗುವಿಕೆಯು ಹೊರಗಿನ ಮತ್ತು ಒಳಗಿನ ಎರಡು ಸ್ವಭಾವಗಳನ್ನು ಒಳಗೊಂಡಿದೆ. ಅದೊಂದೇ ದೇವರ ಅವಶ್ಯಕತೆಯನ್ನು ಪೂರೈಸುವುದಾಗಿದೆ.

(2) ಕಾರಣ: "ಕ್ರಿಸ್ತನು ನಿಮಗೆ ತಲೆಯಾಗಿರುವ ಪ್ರಕಾರ ಗಂಡನು ಹೆಂಡತಿಗೆ ತಲೆಯಾಗಿದ್ದಾನೆ. ಕ್ರಿಸ್ತನು ಸಭೆಯೆಂಬ ದೇಹಕ್ಕೆ ರಕ್ಷಕನಾಗಿದ್ದಾನೆ" (5:23). ಹೆಂಡತಿಯು

ತನ್ನ ಮನೆಯಲ್ಲಿ ಇರುವಾಗ ದೇವರು ಯಾಕೆ ಅಂಥ ಅವಶ್ಯಕತೆಗಳನ್ನು ನೇಮಿಸಿದ್ದಾನೆ? ಕಾರಣವೆಂದರೆ ಹೆಂಡತಿಯು ವಿಧೇಯಳಾಗುವ ಎಂದರೆ ದೇವರು ಗಂಡನನ್ನು ಹೆಂಡತಿಯ ತಲೆಯಾಗುವುದಕ್ಕಾಗಿ ಆರಿಸಿಕೊಂಡನು ಎಂಬುದೇ (ಆದಿಕಾಂಡ 3:16). ಇದೊಂದು ಶಿಕ್ಷೆಯಲ್ಲ, ಆದರೆ ಉದ್ದೇಶವಾಗಿದೆ. ಯಾವುದೇ ರೀತಿಯ ಕ್ರಮವಿಲ್ಲದೆ - ಸಮಾಜದಲ್ಲಾಗಲಿ, ಸರಕಾರದಲ್ಲಾಗಲೀ, ಅಥವಾ ಮನೆಯಲ್ಲಾಗಲೀ ಅಸ್ತವ್ಯಸ್ತವು ಸ್ಫೋಟಗೊಳ್ಳುವದು ಎಂದು ದೇವರು ಶ್ರೇಷ್ಟ ತನ್ನ ಜ್ಞಾನದಿಂದ ತಿಳಿದಿದ್ದಾನೆ. ಇಬ್ಬರ ಒಡೆಯರ ಮನೆವಾರ್ತೆಯು ಅದರ ವಿರುದ್ಧ ತಿರುಗಿಕೊಳ್ಳುವುದಾಗಿದೆ ವಿಭಾಗವಾಗುತ್ತದೆ ಮತ್ತು ನಂತರ ನಾಶಹೊಂದುತ್ತದೆ. ದೇವರು ಗಂಡನನ್ನು ಮನೆಯ ಯಜಮಾನನ್ನಾಗಿ ಆರಿಸಿದ್ದಾನೆ. "ಆದರೂ ಒಂದು ಸಂಗತಿಯನ್ನು ನೀವು ತಿಳಿಯಬೇಕೆಂಬುದು ನನ್ನ ಇಷ್ಟ; ಅದೇನೆಂದರೆ ಪ್ರತಿ ಪುರುಷನಿಗೆ ಕ್ರಿಸ್ತನು ತಲೆ, ಸ್ತ್ರೀಗೆ ಪುರುಷನು ತಲೆ, ಕ್ರಿಸ್ತನಿಗೆ ದೇವರು ತಲೆಯಾಗಿದ್ದಾನೆ" ಎಂದು ಪೌಲನು ಬರೆಯುತ್ತಾನೆ (1 ಕೊರಿಂಥ 11:3). ಇದೊಂದು ದೇವರ "ಸರಪಣಿಯ ಆಜ್ಞೆ" ಆಗಿದೆ.

ದೇವಕುಮಾರನು ಮತ್ತು ತಂದೆಯಾದ ದೇವರೂ ಸಮಾನರಾಗಿದ್ದಾರೆ. "ಕ್ರಿಸ್ತ ಯೇಸುವಿನಲ್ಲಿದ್ದಂಥ ಮನಸ್ಸು ನಿಮ್ಮಲ್ಲಿಯೂ ಇರಲಿ ಆತನು ದೇವಸ್ವರೂಪನಾಗಿದ್ದರೂ ದೇವರಿಗೆ ಸರಿಸಮಾನನಾಗಿರುವದೆಂಬ ಅಮೂಲ್ಯಪದವಿಯನ್ನು ಬಿಡಲೊಲ್ಲೆನೆಂದು ಎಣಿಸದೆ ತನ್ನನ್ನು ಬರಿದುಮಾಡಿಕೊಂಡು ದಾಸನ ರೂಪ ಧರಿಸಿಕೊಂಡು ..." ಎಂದು ಫಿಲಿಪ್ಪಿ 2:5-7 ಹೇಳುತ್ತದೆ. ದೇವಕುಮಾರನು ತಾನಾಗಿಯೇ ತಂದೆಯಾದ ದೇವರಿಗೆ ಒಪ್ಪಿಸಿಕೊಂಡನು - ಅಸಮಾನತೆಯ ಕಾರಣದಿಂದಲ್ಲ, ಆದರೆ ಮಾನವ ವಿಮೋಚನೆಯ ಯಶಸ್ವಿಗಾಗಿ ದೇವರ ಸರಪಣಿಯ ಆಜ್ಞೆಗೆ ಇದು ಅವಶ್ಯವಾದದ್ದರಿಂದಲೇ.

ತನ್ನ ಗಂಡನಿಗೆ ಹೆಂಡತಿಯು ವಿಧೇಯಳಾಗಲು ಬಯಸದ ಆಕೆಯು ತನ್ನ ಜೀವಿತದಲ್ಲಿ ಅನೇಕ ಸಮಸ್ಯೆಗಳನ್ನು ಅನುಭವಿಸುತ್ತಾಳೆ. ಮೊದಲನೆಯದಾಗಿ ಆಕೆಯು ದೇವರೊಡನೆ ಗಂಭೀರವಾದ ಸಮಸ್ಯೆಯನ್ನು ಹೊಂದುತ್ತಾಳೆ. ತನ್ನ ಗಂಡನ ನಾಯಕತ್ವಕ್ಕೆ ಒಳಗಾಗಲು ಹೆಂಡತಿಯು ನಿರಾಕರಿಸುವಾಗ, ಆಕೆಯ ನಿಜವಾದ ಕಾರಣವು ಆಕೆಯ ಗಂಡನ ಜೊತೆಗೆ ಇರುವುದಿಲ್ಲ. ಅದು ಅವಳಿಗೆ ವಿಧೇಯಳಾಗಲು ಹೇಳಿದ ದೇವರೊಂದಿಗೆ ಇರುವುದಾಗಿತ್ತದೆ. ಆದ್ದರಿಂದ, ಆಕೆಯು, ತನ್ನ ಪ್ರಾರ್ಥನಾ ಜೀವಿತದಲ್ಲಿ, ಸತ್ಯವೇದದ ಅಧ್ಯಯನದಲ್ಲಿ, ಮತ್ತು ತಂದೆಯಾದ ದೇವರಿಗೆ ಅವಳು ಹೇಗೆ ಸಂಬಂಧಿಸುತ್ತಾಳೆ ಎಂಬ ಆತ್ಮೀಕ ಸಮಸ್ಯೆಗಳನ್ನು ಎದುರಿಸುತ್ತಾಳೆ.

ಅವಿಧೇಯಳಾದ ಹೆಂಡತಿಯು ಸಹ ತನ್ನ ಗಂಡನ ಜೊತೆ ತೊಂದರೆಗಳನ್ನು ಹೊಂದಿದ್ದಾಳೆ. ಒಬ್ಬ ಹೆಂಡತಿಯು ಗಂಡನ ಅಧಿಕಾರವನ್ನು ಗೌರವಿಸುವದನ್ನು ನಿರಾಕರಿಸಿದಾಗ, ಆತನ ಸಂಪೂರ್ಣತೆಯನ್ನು ಆಕೆಯು ಸ್ಥಗಿತಗೊಳಿಸುತ್ತಾಳೆ ಮತ್ತು ಆತನ ನ್ಯೂನ್ಯತೆ ಹೊಂದಿದಲಾಗುತ್ತಾಳೆ. ಮನೆಯಲ್ಲಿ ಆದರ್ಶ ನಾಯಕನಂತೆ ದೇವರು ಕೊಟ್ಟ ಪಾತ್ರವನ್ನು ಸಂಪೂರ್ಣಗೊಳಿಸುವಲ್ಲಿನ ಆತನ ಅಶೋತ್ತರಗಳನ್ನು ನಿರರ್ಥಕ ಮಾಡುತ್ತಾಳೆ. ಆಕೆಯು ಅವನನ್ನು ಅನುಸರಿಸಿದಿದ್ದರೆ ಆತನು ಆಕೆಯನ್ನು ನಡೆಸಾರನು.

ಅವಳ ಮಕ್ಕಳು ಸಹ ಅವಳಿಗೆ ತೊಂದರೆಯನ್ನು ಕೊಡುವಂಥವರಾಗಿದ್ದಾರೆ. ತನ್ನ ಗಂಡನ ನಾಯಕತ್ವದ ಅಡಿಯಲ್ಲಿರಲು ನಿರಾಕರಿಸುವ ಹೆಂಡತಿಯು ಎಂದಿಗೂ ಯೋಗ್ಯವಾದ ಗೌರವವನ್ನು ಹೊಂದುವುದಿಲ್ಲ. ಮಕ್ಕಳು ಸಹ ತಮ್ಮ ತಂದೆತಾಯಿಗಳಿಗೆ ವಿಧೇಯರಾಗಿರಬೇಕು ಎಂದು ಬೋಧಿಸುತ್ತದೆ, ಆದರೆ ಆ ತರದ ತಾಯಿ ಇರುವಾಗ ಅವರು ಹೇಗೆ ವಿಧೇಯರಾಗಬೇಕು? ಆತ್ಮಭರಿತ ಗಂಡಡನಿಗೆ ವಿಧೇಯಳಾದಂತ ಆತ್ಮಭರಿತ ತಾಯಿಗೆ ಮಕ್ಕಳು ವಿಧೇಯರಾಗಿರುತ್ತಾರೆ. ತಾಯಿಯೇ ತಿರುಗಿಬೀಳುವವಳು ಮತ್ತು ಉಗ್ರವಾದಳೂ ನಿರ್ಭಂಧವಿಲ್ಲದಳು ಆಗಿದ್ದಾದರೆ, ಮಕ್ಕಳು ಅದನ್ನು ನೋಡುತ್ತಾರೆ ಮತ್ತು ಅವಳಿಗೆ ಅದೇ ರೀತಿಯಲ್ಲಿ ಪ್ರತಿಕ್ರಯಿಸಬಹುದು. ಅವಳೇ ಕೊಡದಿರುವುದನ್ನು ಪಡೆಯುವದಕ್ಕೆ ಅವಳು ಎಂದಿಗೂ ಒತ್ತಾಯಿಸಲಾರಳು.

ಅಂಥ ಹೆಂಡತಿಯರೂ ಸಹ ತನ್ನಷ್ಟಕ್ಕೆ ತಾವೇ ಸಮಸ್ಯೆಯಾಗಬಹುದು. ದೇವರು ಕೊಟ್ಟ ಪಾತ್ರಕ್ಕೆ ತಾನು ವಿರೋಧಿಯಾಗಿದ್ದೇನೆಂದು ಆಕೆಯು ಬಲ್ಲವಳಾಗಿರುತ್ತಾಳೆ. ವಾಸ್ತವದ ಜ್ಞಾನವು ಆಕೆಯ ಆತ್ಮನನ್ನು ಪೀಡಿಸುತ್ತಿರುತ್ತದೆ. ಮುಂದೆ, ಹೆಂಡತಿಯೇ ಕೆಲ ನಿಶ್ಚಿತವಾದ ಅವಶ್ಯಕತೆಗಳು ಅವಳು ತನ್ನ ಗಂಡನ ನಾಯಕತ್ವದಲ್ಲಿ ನಮ್ರವಾಗಿ ಇರುವ ಮೂಲಕ ಪೂರೈಸಬಹುದಾದ ಅವಶ್ಯಕತೆಗಳಿಂದ ಆತನನ್ನು ಸ್ವತಂತ್ರ್ಯಗೊಳಿಸುವ ತನಕ ಅವು ಎಂದಿಗೂ ಸಂಪೂರ್ಣವಾಗದೇ ಉಳಿಯುತ್ತವೆ.

(3) ಪರಿಣಾಮ: ಸಭೆಯು ಕ್ರಿಸ್ತನಿಗೆ ಹೇಗೆ ಅಧೀನವಾಗಿದೆಯೋ ಹಾಗೆಯೇ ಸ್ತ್ರೀಯರು ತಮ್ಮ ತಮ್ಮ ಗಂಡಂದಿರಿಗೆ ಎಲ್ಲಾ ವಿಷಯಗಳಲ್ಲಿ ಅಧೀನರಾಗಿರಬೇಕು (5:24). ಅನೇಕ ಸ್ತ್ರೀಯರನ್ನು ಪೌಲನ ಈ ಸೂಚನೆಯು ಕೋಪತರಿಸುವುದುಂಟು. ಅಂಥ ಸ್ವಭಾವವುಳ್ಳವರು ಶ್ರೇಷ್ಟ ತತ್ವದ ಜೀವಿತವನ್ನು ಅಲಕ್ಷಿಸುವರು: ಒಪ್ಪಿಸಿಕೊಳ್ಳುವದು ಎಂದರೆ ಸ್ವಾತಂತ್ರ್ಯವನ್ನು ತೆಗೆದುಬಿಡುವದು ಎಂದಲ್ಲ; ಇದು ನಿಜವಾದ ಸ್ವಾತಂತ್ರ್ಯವನ್ನು ಕೊಡುವುದಾಗಿದೆ. ಗಂಡನು ಅವಿಶ್ವಾಸಿಯಾದರೆ ಅಥವಾ ದೇವರ ಬೋಧನೆಗಳನ್ನು ಎಲ್ಲರ ಮುಂದೆ ಹಾಳುಮಾಡುವನಾದರೆ ಏನಾಗುವದು? "ಪ್ರತಿಯೊಂದರಲ್ಲಿಯೂ" ವಿಧೇಯನಾಗಿರುವದು ಒಳಗೊಂಡಿರುವಂಥದ್ದು ಒಳ್ಳೆಯದೇ? ಇಲ್ಲೊಂದು ಸರಳವಾದ ಮಾರ್ಗದರ್ಶನ ನೀಡುವಂತ ತತ್ವವಿದೆ: ದೇವರ ಚಿತ್ತವನ್ನು ಉಲ್ಲಂಘಿಸುವುದನ್ನು ಹೊರತುಪಡಿಸಿ ಉಳಿದೆಲ್ಲ ವಿಷಯದಲ್ಲಿ ಹೆಂಡತಿಯು ವಿಧೇಯಳಾಗಿರಬೇಕು. ಆಕೆಯು ಬಯಸಿದ್ದಾರೆ ಮಾತ್ರ ಆಕೆಗೆ ಮಾಡುವದಕ್ಕೆ ಆತನು ಹೇಳುವದು ಇದು ಒಪ್ಪಿಸಿಕೊಳ್ಳುವ ವಿಷಯವಲ್ಲ. ಆಕೆಯ ಗಂಡನಿಗೆ ಅಧೀನವಾಗುವಿಕೆಯ ಜವಾಬ್ದಾರಿಕೆಯಿಂದ ಆಕೆಯನ್ನು ಬಿಡುಗಡೆ ಮಾಡುವ ಒಂದೇ ಒಂದು ತತ್ವವು ದೇವರ ಪರಿಶುದ್ಧವಾದ ಶ್ರೇಣಿಗೆ ವಿರುದ್ಧವಾದ ಮಾರ್ಗದಲ್ಲಿ ಆಕೆಯು ನಡೆಯಲು ಆತನು ನಿರ್ದೇಷಿಸುವದು ಆಗಿದೆ.

"ದೇವರ ಮಾತನ್ನು ಕೇಳುವದಕ್ಕಿಂತಲೂ ನಿಮ್ಮ ಮಾತನ್ನು ಕೇಳುವದು ದೇವರ ಮುಂದೆ ನ್ಯಾಯವೋ ಏನು? ನೀವೇ ತೀರ್ಪು ಮಾಡಿಕೊಳ್ಳಿರಿ; ನಾವಂತೂ ಕಂಡುಕೇಳಿದ್ದನ್ನು ಹೇಳದೇ ಇರಲಾರೆವು" (ಅಪೊಸ್ತಲರ ಕೃತ್ಯಗಳು 4:19, 20) ಎಂದು ಯೇಸುವಿನ ವಿಷಯದಲ್ಲಿ ಬೋಧಿಸುವುದನ್ನು ನಿಲ್ಲಿಸಬೇಕೆಂದು ಹೇಳುತ್ತಿರುವ ತನ್ನ ಸಮಯದಲ್ಲಿನ ಧಾರ್ಮಿಕ ನಾಯಕರಿಗೆ ಪೇತ್ರನು ಹೇಳಿದನು. ಮಾನವನ ಅಧಿಕಾರದ ವಿಧೇಯತೆಯು ದೇವ ಆಜ್ಞೆಯ ವಿಧೇಯತೆಯ ಜೊತೆ ಸಂಘರ್ಷಕ್ಕಿಳಿದಾಗ ಆಗ ಕ್ರೈಸ್ತನು ದೇವರ ಅಧಿಕಾರಕ್ಕೆ ಮೊದಲು ಗೌರವಿಸುತ್ತಾನೆ.

ತನ್ನ ಆ ಕ್ರೈಸ್ತ ಗಂಡನ ನಾಯಕತ್ವಕ್ಕೆ ಒಳಗಾಗಬೇಕೆಂದು ಪೇತ್ರನು ಕ್ರಿಸ್ತೀಯ ಹೆಂಡತಿಗೆ ನಿರ್ದೇಷಿಸುತ್ತಾನೆ (1 ಪೇತ್ರ 3:1, 2), ಹೇಗೋ, "ಎಲ್ಲಾದರಲ್ಲಿ" ಎಂದು ಪೇತ್ರನು ಇದಕ್ಕೆ ಸೇರಿಸಿಲ್ಲ. ಆ ಕ್ರೈಸ್ತ ಗಂಡನು ತಾನು ಹೇಳಿದ ಕೆಲಸಗಳನ್ನು ಮಾಡದೇ ಇರುವ ಮೂಲಕ ವಿಧೇಯಳಾಗಲು ಒಪ್ಪದೇ ಇರಬಹುದು ಎಂದು ತಿಳಿದಾಗ ಆತನು ವರ್ಣಿಸಿಬಿಡಬಹುದು.

5:24ರಲ್ಲಿ, ಸ್ತ್ರೀಯರು "ಎಲ್ಲಾದರಲ್ಲೂ" ತಮ್ಮ ಗಂಡಂದಿರಿಗೆ ಅಧೀನರಾಗಿರಬೇಕು ಎಂದು ಹೇಳಿದ ಸಂದರ್ಭವು ಸ್ಪಷ್ಟವಾಗಿದೆ. ಆತ್ಮಭರಿತವಾದ ಸ್ತ್ರೀಯು ಅವಳ ಆತ್ಮಭರಿತವಾದ ಗಂಡನೊಂದಿಗೆ ಅವಳ ಸಂಬಂಧವು ಹೇಗಿರುತ್ತದೆ ಎಂದು ಆತನು ಹೇಳುತ್ತಿದ್ದಾನೆ. ಅಂಥ ಗಂಡನು ದೇವರ ಚಿತ್ತಕ್ಕೆ ವಿರುದ್ಧವಾದದ್ದು ಮಾಡುವತ್ತ ತನ್ನ ಹೆಂಡತಿಯನ್ನು ನಡೆಸುವುದಿಲ್ಲ. ಆದ್ದರಿಂದ ಆತ್ಮಭರಿತಳಾದ ಹೆಂಡತಿಯು "ಎಲ್ಲಾದರಲ್ಲೂ" ಒಪ್ಪಿಸಿಕೊಳ್ಳುವಳು ಮತ್ತು ಒಪ್ಪಿಸಿಕೊಳ್ಳುತ್ತಾಳೆ. ಹೀಗೆ ಮಾಡುವದರಲ್ಲಿ ಮಾತ್ರ ಅವಳು ಗಂಡನ ಸಂಪೂರ್ಣತೆಯಂತೆಯೇ ನಿಶ್ಚಿತವಾದ ಸಂತೃಪ್ತಿಯನ್ನು ಮತ್ತು ಸುರಕ್ಷೆಯನ್ನು ಕಂಡುಕೊಳ್ಳುವಳು.

*ಸಮಾರೋಪ.* ಹೆಂಡತಿಗಾಗಿ ಗಂಡನ ಪ್ರೀತಿಯು ಐಚ್ಚಿಕವಾದದ್ದಲ್ಲ. ಗಂಡನು ಯೇಸುವು ಸಭೆಯನ್ನು ಪ್ರೀತಿಸಿದ ಹಾಗೆ ತನ್ನ ಹೆಂಡತಿಯನ್ನು ಪ್ರೀತಿಸಲು ಸಹಾಯಕವಾದ ಕಾರ್ಯವನ್ನು ಮಾಡಿದ್ದಾದರೆ, ಆತನು ಹೊಸದಾದ ಮತ್ತು ಹೊಚ್ಚಹೊಸದಾದ ಭಾವನಾತ್ಮಕ

ಬಂಧವನ್ನು ತನ್ನ ಹೆಂಡತಿಯಲ್ಲಿ ಕಂಡುಕೊಳ್ಳುತ್ತಾನೆ. ನಂತರದಲ್ಲಿ ಆಕೆಯು ವಿಧೇಯತೆ ಯನ್ನು ಎದುರುನೋಡುವುದಾದರೆ ಇಬ್ಬರೂ ದೇವರ ಯೋಜನೆಯಂತೆ ಪರಮಾವಧಿಯ ಮದುವೆಯನ್ನು ಹೊಂದಬೇಕು. Chris Bullard

**ಗಂಡನ ಪಾತ್ರ (5:23-31)**

5:23-31ರ ಪ್ರಕಾರ ಗಂಡಂದಿರು ತಮ್ಮ ಹೆಂಡತಿಯರಿಗಾಗಿ ಮೂರು ರೀತಿಯಲ್ಲಿ ಯೋಗ್ಯವಾದ ಗೌರವ ಮತ್ತು ಆದರಣೆಯನ್ನು ತೋರಿಸಬಹುದು:

*ಅವರು ತಮ್ಮ ಹೆಂಡತಿಯರಿಗಾಗಿ ಆತ್ಮೀಕ ನಾಯಕತ್ವವನ್ನು ಒದಗಿಸುತ್ತಾರೆ* (5:23). ಗಂಡಂದಿರು ತಮ್ಮ ಹೆಂಡತಿಯರಿಗೆ ತಲೆಯಾಗಿರುವ ವಾಸ್ತವವು ಅವರು ನಾಯಕರಾಗಿದ್ದು ಮತ್ತು ಆತ್ಮೀಕ ನಾಯಕತ್ವದಲ್ಲಿ ತಮ್ಮ ಪಾತ್ರವನ್ನು ಒಪ್ಪಿಕೊಳ್ಳಬೇಕು ಎಂಬ ಅರ್ಥವನ್ನು ಕೊಡುವುದಾಗಿದೆ.

"ಕ್ರಿಸ್ತನು ಸಹ ಸಭೆಯನ್ನು ಪ್ರೀತಿಸಿದನು ಮತ್ತು ಆಕೆಗೋಸ್ಕರ ತನ್ನನ್ನೇ ಕೊಟ್ಟುಬಿಟ್ಟ ಹಾಗೆಯೇ" *ಅವರು ಸ್ವತ್ಯಾಗದ ಪ್ರೀತಿಯಲ್ಲಿ ತಮ್ಮ ಹೆಂಡತಿಯರನ್ನು ಪ್ರೀತಿಸಬೇಕು* (5:25). ಅವರು ತಮ್ಮದೇ ಆದ ಅವಶ್ಯಕತೆಯಂತೆಯೇ ತಮ್ಮ ಹೆಂಡತಿಯರ ಅವಶ್ಯಕತೆ ಬಗ್ಗೆ ಕಾಳಜಿಯುಳ್ಳವರಾಗಿರುತ್ತಾರೆ.

ಈ ಪ್ರೀತಿಯು ಮೇಲಕ್ಕೆತ್ತುವ ಪ್ರೀತಿಯಾಗಿದೆ (5:26, 27). ಗಂಡಂದಿರು ತಮ್ಮ ಹೆಂಡತಿಯರನ್ನು ಮೇಲಕ್ಕೆತ್ತುತ್ತಾರೆ ಮತ್ತು ಪ್ರೋತ್ಸಾಹಿಸುತ್ತಾರೆ. ಸಭೆಯ ಸದಸ್ಯರು ಕ್ರಿಸ್ತನ ಪ್ರೀತಿಯ ಕಾರಣದಿಂದ ಬೆಳೆಯಲು ಸಮರ್ಥರಾದರು, ಹಾಗೆಯೇ, ಹೆಂಡತಿಯರು ತಮ್ಮ ಗಂಡನಿಲ್ಲದೇ ಉತ್ತಮ ವ್ಯಕ್ತಿಗಳಾಗಲು ಸಾಧ್ಯವೇ ಇಲ್ಲ.

ಈ ಪ್ರೀತಿಯು ಪೋಷಿಸುವಂತಹ ಮತ್ತು ಪಾಲಿಸುವಂತಹ ಪ್ರೀತಿಯಾಗಿದೆ (5:28-30). "ಪಾಲಿಸು" ಎಂಬ ಪದವು ಭಾವನೆಯ ಮೌಲ್ಯ ಮತ್ತು ವಾತ್ಸಲ್ಯವು ಆಗಿದೆ (ನೋಡಿರಿ 1 ಥೆಸಲೋನಿಕ 2:7). "ಪೋಷಿಸು" ತೋಟದ ಬೆಳೆಸುವಿಕೆಯಲ್ಲಿ ಒಳಗೊಂಡಿರುವ ಕಾಳಜಿಯನ್ನು ಒಳಗೊಂಡಿರುವುದಾಗಿದೆ. ತೋಟಗಾರನು ನೆಟ್ಟು, ಕಳೆ ತೆಗೆದು, ಮತ್ತು ತನ್ನ ತೋಟಕ್ಕೆ ನೀರುಣಿಸುವ ಹಾಗೆ ಗಂಡನೂ ಕೂಡಾ ತಮ್ಮ ಹೆಂಡತಿಯರನ್ನು ಸಂಸ್ಕರಿಸಿ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಾನೆ. ಗಂಡಂದಿರು ತಮ್ಮ ಹೆಂಡತಿಯರನ್ನು ಪಾಲಿಸಿ ಪೋಷಿಸುವಾಗ ಅವರು ತಮ್ಮನ್ನು ಗೌರವಿಸುವುದನ್ನೂ ಮತ್ತು ಆದರಿಸುವದನ್ನೂ ಎದುರುನೋಡುವವರಾಗಿರುತ್ತಾರೆ (ನೋಡಿರಿ 1 ಪೇತ್ರ 3:7). ತಮ್ಮ ಮಹತ್ವವನ್ನು ತೋರಿ ಸುವ ಮಾರ್ಗಗಳನ್ನು ಅವರು ಕಂಡುಕೊಳ್ಳಬೇಕು.

*ತಮ್ಮ ಹೆಂಡತಿಯರಿಗೆ ಪ್ರಾಮಾಣಿಕರಾಗಿರಬೇಕು* (5:31), ಗಂಡಂದಿರು ಮತ್ತು ಹೆಂಡತಿಯರು "ಒಂದೇ ದೇಹ"ವಾಗಿರುವರು. ಒಬ್ಬರಿಗೊಬ್ಬರ ಅವರ ಪ್ರಾಮಾಣಿಕತೆಯು ಅವರು ಇರುವ ತನಕ ಇರುವುದಾಗಿದೆ. Jay Lockhart

---

ಟಿಪ್ಪಣಿಗಳು

[1]Spiros Zodhiates, ed., *The Complete Word Study New Testament*, 2d ed. (Chattanooga, Tenn.: AMG Publishers, 1991), 869. [2]Kenneth S. Wuest, *Wuest's Word Studies from the Greek New Testament for the English Reader: Ephesians and Colossians* (Grand Rapids, Mich.: Wm. B. Eerdmans Publishing Co., 1953), 126. [3]Ethelbert W. Bullinger, *A Critical Lexicon and Concordance to the English and Greek New Testament* (London: Samuel Bagster and Sons, n.d.; reprint, Grand Rapids, Mich.: Zondervan Publishing House, Regency Reference Library, 1975), 154. [4]Wuest, 126.

[5]C. G. Wilke and Wilibald Grimm, *A Greek-English Lexicon of the New Testament*, trans. and rev. Joseph Henry Thayer (Edinburgh: T. & T. Clark, 1901; reprint, Grand Rapids, Mich.: Baker Book House, 1977), 220. [6]Walter Bauer, *A Greek-English Lexicon of the New Testament and Other Early Christian Literature*, 3d ed., rev. and ed. Frederick William Danker (Chicago: University of Chicago Press, 2000), 982. [7]Wuest, 127. [8]Zodhiates, 948. [9]Andrew T. Lincoln, *Ephesians*, Word Biblical Commentary, vol. 42 (Dallas: Word Books, 1990), 346. [10]Josephus *Antiquities* 7.12.3.

[11]Bullinger, 761. [12]Wuest, 227. [13]M. C. Kurfees, *Instrumental Music in the Worship* (Nashville: Gospel Advocate Co., 1950), 16. Studies of singing written by Owen D. Olbricht, Hugo McCord, and Jack P. Lewis are included in "Worship," *Truth for Today* (March 2003): 27-31 and "The Question of Instrumental Music," *Truth for Today* (March 2008). [14]Kurfees, 48. [15]Zodhiates, 964. [16]Wuest, 129. [17]Lincoln, 365. [18]Wuest, 130. [19]Zodhiates, 942. [20]Lincoln, 368.

[21]Ibid., 372. [22]Ibid., 373. [23]Wuest, 131. [24]Ibid., 132. [25]Zodhiates, 928. [26]Lincoln, 377. [27]Ibid. [28]Zodhiates, 942. [29]S. D. F. Salmond, "The Epistle to the Ephesians," in *The Expositor's Greek Testament*, ed. W. Robertson Nicoll (Grand Rapids, Mich.: Wm. B. Eerdmans Publishing Co., 1967), 3:370-71. [30]Bullinger, 537.

[31]Ibid., 146. [32]Ibid., 279. [33]J. A. Robinson, *St. Paul's Epistle to the Ephesians*, 2d ed. (London: Macmillan & Co., 1904), 127. [34]Lincoln, 385. [35]Alexander Campbell, *The Christian System* (St. Louis: Christian Publishing Co., 1835), 231. [36]Eusebius Pamphilus *The Life of the Blessed Emperor Constantine* 4.62. [37]Campbell, 232. [38]William Shakespeare *Much Ado About Nothing* 3.5.